

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಮಾರ್ಚ್ 1 ಭಾನುವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

46

ಸಂಪುಟ: 46 | ಸಂಚಿಕೆ: 310 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಇರಾನ್ ಮೇಲೆರಗಿದ ಇಸ್ರೇಲ್, ಅಮೆರಿಕಾ

- ನಿರಂತರ ಕ್ಷಿಪಣಿ ದಾಳಿ; ಇರಾನ್ ಖಂಡಾಂತರ ಕ್ಷಿಪಣಿ ದಾಳಿ: ರಣರಂಗವಾಯ್ತು ಮಧ್ಯಪ್ರಾಚ್ಯ
- ಇರಾನ್‌ನಲ್ಲಿ 57 ವಿದ್ಯಾರ್ಥಿಗಳು ಸೇರಿ 85 ಮಂದಿ ಸಾವು; ಪರಮೋಚ್ಚ ನಾಯಕ ಖಮೇನಿ ಟಾರ್ಗೆಟ್





ಟೆಹರಾನ್: ಅಮೆರಿಕ ಹಾಗೂ ಇಸ್ರೇಲ್, ಇರಾನ್ ಮೇಲೆ ಕ್ಷಿಪಣಿ ಮಳೆ ಸುರಿಸಿವೆ. ಇದಕ್ಕೆ ಪ್ರತಿಯಾಗಿ ಇರಾನ್ ಕೂಡ ಅಮೆರಿಕಾದ ಸೇನಾ ನೆಲೆ ಗಳ ಗುರಿಯಾಗಿಸಿ ಕತಾರ್, ದೋಹಾ, ಬಹ್ರೇನ್ ಸೇರಿ ದಂತೆ 8 ದೇಶಗಳ ಮೇಲೆ ಇರಾನ್ ಖಂಡಾಂತರ ಕ್ಷಿಪಣಿ ದಾಳಿ ನಡೆಸಿದೆ. ಪರಿಣಾಮ ಮಧ್ಯಪ್ರಾಚ್ಯ ಅಕ್ಷರಶಃ ರಣರಂಗವಾಗಿ ಪರಿಣಮಿಸಿದ್ದು, ಇಡೀ ಜಗತ್ತನ್ನೇ ತಲ್ಲಣಗೊಳಿಸಿದೆ.

ಅಮೆರಿಕ ಎಚ್ಚರಿಕೆ ಬೆನ್ನಲ್ಲೇ ಇಸ್ರೇಲ್, ಇರಾನ್ ಮೇಲೆ ಕ್ಷಿಪಣಿ ದಾಳಿ ನಡೆಸಿದ್ದು, ನಂತರ ಉಭಯ ರಾಷ್ಟ್ರಗಳು ಜಂಟಿ ದಾಳಿ ಮುಂದುವರೆಸಿವೆ. ಈ ಮಧ್ಯೆ ಕ್ಷಿಪಣಿ ದಾಳಿಯಲ್ಲಿ ಇರಾನ್‌ನ ಸರ್ವೋಚ್ಚ ನಾಯಕ ಅಯತೊಲ್ಲಾ ಅಲಿ ಖಮೇನಿ ಅವರ ಕಚೇರಿಗಳ ಬಳಿ ಮೊದಲು ಇಸ್ರೇಲ್ ಮತ್ತು ಅಮೆರಿಕ ದಾಳಿ ನಡೆಸಿದ್ದು, ದೇಶದ ಹಲವಾರು ಭಾಗಗಳಲ್ಲಿ ಸ್ಫೋಟ ಮತ್ತು ದಾಳಿಗಳನ್ನು ಇರಾನ್ ಮಾಧ್ಯಮಗಳು ವರದಿ ಮಾಡಿವೆ.

ಇದಕ್ಕೆ ಪ್ರತಿಯಾಗಿ ಇರಾನ್ ಸಹ ಇಸ್ರೇಲ್ ಮೇಲೆ ಕ್ಷಿಪಣಿ ಮತ್ತು ಡ್ರೋನ್ ದಾಳಿ ನಡೆಸಿ, ನಂತರ ಕುವೈತ್ ಮತ್ತು ಕತಾರ್‌ನಲ್ಲಿನ ಸೇನಾ ನೆಲೆ ಸೇರಿದಂತೆ ಅಮೆರಿಕದ ಮಿಲಿಟರಿ ನೆಲೆಗಳನ್ನು ಗುರಿಯಾಗಿಸಿ ದಾಳಿ ನಡೆಸಿರುವುದಾಗಿ ವರದಿಯಾಗಿದೆ. ಕತಾರ್‌ನಲ್ಲಿ ವಿಮಾನಗಳ ಸಂಚಾರವನ್ನು ತಾತ್ಕಾಲಿಕವಾಗಿ ನಿಷೇಧಿಸಿ ಕತಾರ್ ನಾಗರಿಕ ವಿಮಾನಯಾನ ▶ 6ನೇ ಪುಟಕ್ಕೆ

ಖಮೇನಿ ಫಿನೀಶ್!

ಇಸ್ರೇಲ್ ಮಾಧ್ಯಮ ವರದಿ; ಇಲ್ಲ ಎಂದ ಇರಾನ್

ಟೆಹ್ರಾನ್, ಫೆ.28– ವೈಮಾನಿಕ ದಾಳಿಯಲ್ಲಿ ಇರಾನ್ ಪರಮೋಚ್ಚ ನಾಯಕ ಅಯತೊಲ್ಲಾಅಲಿ ಖಮೇನಿ ಹತರಾಗಿದ್ದಾರೆ ಎಂದು ಇಸ್ರೇಲ್ ಮಾಧ್ಯಮಗಳು ಹೇಳಿಕೊಂಡಿವೆ. ಆದರೆ, ಇರಾನ್ ವಿದೇಶಾಂಗ ಸಚಿವರು ಅಯತೊಲ್ಲಾ ಇನ್ನೂ ಜೀವಂತವಾಗಿದ್ದಾರೆ ಎಂದಿದ್ದಾರೆ.

ದಾಳಿಯಲ್ಲಿ ಇರಾನ್ ಐಆರ್‌ಜಿಸಿ ಕಮಾಂಡರ್ ಇನ್ ಚೀಫ್ ಮೊಹಮ್ಮದ್ ▶ 6ನೇ ಪುಟಕ್ಕೆ

ನೀವೇ ಸಿಎಂ ಆಗಿ, ಇಲ್ಲ ದಲಿತರನ್ನ ಸಿಎಂ ಮಾಡಿ

ಅಧಿಕಾರವಿದ್ದರೂ ಅವಕಾಶ ನೀಡದಿದ್ದರೇ ಇತಿಹಾಸ ನಿಮ್ಮನ್ನು ಶಪಿಸುತ್ತೆ: ಖರ್ಗೆಯವರಿಗೆ ದಲಿತ ನಾಯಕರ ಕಿವಿಮಾತು




ಮಲ್ಲಿಕಾರ್ಜುನ ಖರ್ಗೆ ಡಿ.ಕೆ.ಶಿವಕುಮಾರ್

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಉತ್ತರಾಧಿಕಾರಿಯಾಗಲು ಡಿ.ಕೆ.ಶಿವಕುಮಾರ್ ಪರ ಅವರ ಬೆಂಬಲಿಗರು ಭಾರೀ ಲಾಬಿ ನಡೆಸಿದ್ದಾರೆ. ಇತ್ತ ಹಿರಿಯ ದಲಿತ ನಾಯಕರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ವಿರುದ್ಧ ಅಸಮಾಧಾನಗೊಂಡಿದ್ದಾರೆ ಎಂದು ವರದಿಯಾಗಿದೆ.

ಗೃಹ ಸಚಿವ ಡಾ. ಜಿ.ಪರಮೇಶ್ವರ ಮತ್ತು ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಕೆ ಎಚ್ ಮುನಿಯಪ್ಪ ಅವರು ಖರ್ಗೆ ಅವರನ್ನು ಭೇಟಿ ಮಾಡಿ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಳ್ಳುವಂತೆ ಒತ್ತಾಯಿಸಿದ್ದು, ಆದರೆ ಈ ನಿರ್ಧಾರವನ್ನು ಕಾಂಗ್ರೆಸ್ ಸಂಸದೀಯ ಪಕ್ಷದ (ಸಿಪಿಪಿ) ಮುಖ್ಯಸ್ಥೆ ಸೋನಿಯಾ ಗಾಂಧಿ ಮತ್ತು ಲೋಕಸಭೆಯಲ್ಲಿ ವಿಪಕ್ಷ ನಾಯಕ ರಾಹುಲ್ ಗಾಂಧಿ ತೆಗೆದುಕೊಳ್ಳಬೇಕಾಗಿದೆ. ಖರ್ಗೆ ಅವರ ರಾಜ್ಯಸಭೆಯ ಅವಧಿ ಜೂನ್‌ನಲ್ಲಿ ಕೊನೆಗೊಳ್ಳುತ್ತದೆ ▶ 6ನೇ ಪುಟಕ್ಕೆ

ಹಣೆಯಲ್ಲಿ ಬರೆದಿದ್ದರೆ ನನ್ನಣ್ಣ ಸಿಎಂ ಆಗ್ತಾರೆ...



ಡಿ.ಕೆ.ಸುರೇಶ್

ಬೆಂಗಳೂರು, ಫೆ.28(ಕೆಎಂಶಿ)–ಹಣೆಯಲ್ಲಿ ಬರೆದಿದ್ದರೆ ನನ್ನ ಅಣ್ಣ ಮುಖ್ಯಮಂತ್ರಿ ಆಗುತ್ತಾರೆ ಇಲ್ಲ ಎಂದರೆ ಯಾರೂ ಏನೂ ಮಾಡಲು ಆಗುವುದಿಲ್ಲ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಹೋದರ ಹಾಗೂ ಬಮೂಲ್ ಅಧ್ಯಕ್ಷ ಡಿ.ಕೆ.ಸುರೇಶ್ ಪ್ರತಿಕ್ರಿಯಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಶಸ್ತ್ರತ್ಯಾಗ ಮಾಡಲು ಶಸ್ತ್ರ ಇರಬೇಕಲ್ಲವೇ, ಶಸ್ತ್ರವೇ ಇಲ್ಲವಲ್ಲ. ಶಸ್ತ್ರ ಇದೆ ಎಂಬುದಾಗಿ ನಾನು ಯಾವಾಗ ಹೇಳಿದ್ದೆ. ಶಸ್ತ್ರವೇ ಇಲ್ಲದಿದ್ದಾಗ ಶಸ್ತ್ರತ್ಯಾಗದ ಪ್ರಶ್ನೆಯೇ ಬಾರದು ಎಂದರು.

ತಾಳ್ಮೆಯ ಅಸ್ತ್ರ ಇದೆ ಎಂಬುದಾಗಿ ಹೇಳಿದ್ದನ್ನು ಸುದ್ದಿಗಾರರು ನೆನಪಿಸಿದಾಗ, ತಾಳ್ಮೆ ಇರಲಿ ಎಂದು ಈಗಲೂ ಹೇಳುತ್ತಿದ್ದೇನೆ. ಇದು ರಾಜಕಾರಣ. ಇಲ್ಲಿ ಶಸ್ತ್ರ ಹಾಗೂ ಅಸ್ತ್ರ ಬೇಕಾಗಿಲ್ಲ. ಶಾಸಕರು ದೆಹಲಿಗೆ ಹೋಗುವ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ಈ ಬಗ್ಗೆ ಶಾಸಕರನ್ನೇ ಕೇಳಿ. ಭೋಜನಕೂಟ ಸೇರಿದ ಶಾಸಕರು ನಾಯಕತ್ವದ ವಿಚಾರದಲ್ಲಿ ಸ್ಪಷ್ಟನೆ ಕೇಳಿದ ಕುರಿತು ನನಗೆ ಮಾಹಿತಿ ಇಲ್ಲ. ನಾನು ಊರಲ್ಲಿ ಇರಲಿಲ್ಲ. ಅವರು ಯಾವ ತೀರ್ಮಾನ ಕೈಗೊಂಡಿದ್ದಾರೆ. ಯಾವ ಹೇಳಿಕೆ ಕೊಟ್ಟಿದ್ದಾರೆ ಎಂಬುದೂ ಗೊತ್ತಿಲ್ಲ. ಇದು ಅವರ ವೈಯಕ್ತಿಕ ವಿಚಾರ, ಪಕ್ಷ ಅದನ್ನು ಗಮನಿಸಲಿದೆ ಎಂದರು.

> “ಶಾಸಕರ ವಿಚಾರಧಾರೆ ಅವರಿಗೆ ಸಂಬಂಧಿಸಿದ್ದೇ ಹೊರತು, ನನಗಲ್ಲ. ಪಕ್ಷ ಅವರ ವಿಚಾರಗಳನ್ನು ಗಮನಿಸಲಿದೆ. ನಾವು ಆ ವಿಚಾರದಲ್ಲಿ ಹೇಳಲು ಆಗುವುದಿಲ್ಲ. ಎಲ್ಲದಕ್ಕೂ ತಾಳ್ಮೆ ಇರಲಿ. ದಲಿತ ಮುಖ್ಯಮಂತ್ರಿ ಆಗಬೇಕೆಂಬ ಆಸೆ ಎಲ್ಲರಿಗೂ ಇದೆ. ಇದರಲ್ಲಿ ತಪ್ಪೇನಿಲ್ಲ. ಶಾಸಕರ ಸಂಖ್ಯೆ ಬಗ್ಗೆ ಗೊತ್ತಿಲ್ಲ. ಶಾಸಕರ ವಿಚಾರ ಬಿಟ್ಟು ಬಮೂಲ್ ವಿಚಾರ ಏನಾದರೂ ಇದ್ದರೆ ಕೇಳಿ, ಪ್ರತಿಕ್ರಿಯಿಸುವೆ.
> –ಡಿ.ಕೆ.ಸುರೇಶ್

ಮುಂದೆ ಚುನಾವಣೆಗೆ ಸ್ಪರ್ಧಿಸುವವರಿಗೆ ಕಷ್ಟ: ಪರಿಸ್ಥಿತಿ ಹೀಗೇ ಮುಂದುವರೆದರೆ 2028ರ ಚುನಾವಣೆ ಪಕ್ಷಕ್ಕೆ ಕಷ್ಟವಾಗಬಹುದೇ ಎಂಬ ▶ 6ನೇ ಪುಟಕ್ಕೆ





ಮುಡಾ ಅಕ್ರಮ ಕೇಸ್: 50 ಕೋಟಿ ಲಂಚದ ಆಮಿಷ; ಕುರಿ ಬಲಿ ಕೊಟ್ಟು ವಾಮಾಚಾರ!

ಸ್ನೇಹಮಯಿ ಕೃಷ್ಣ ಸ್ಫೋಟಕ ವಾದ ಮಂಡನೆ



ಬೆಂಗಳೂರು, ಫೆ.28–ಮುಡಾ ಅಕ್ರಮ ಸೈಟ್ ಹಂಚಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಇಂದು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದಲ್ಲಿ ಅತ್ಯಂತ ಗಂಭೀರವಾದ ಆರೋಪಗಳನ್ನು ಮಾಡಿದ್ದಾರೆ. ಮುಡಾ ಮಾಜಿ ಆಯುಕ್ತ ಡಿ.ಬಿ.ನಟೇಶ್ ವಿರುದ್ಧದ ಅರ್ಜಿ ವಿಚಾರಣೆ ವೇಳೆ ವಾದ ಮಂಡಿಸಿದ ಅವರು, ತಮಗೆ ಈ ಕೇಸ್‌ನಿಂದ ಹಿಂದೆ ಸರಿಯಲು 50 ಕೋಟಿ ರೂಪಾಯಿ ಲಂಚದ ಆಮಿಷ ಒಡ್ಡಲಾಗಿದೆ ಎಂದು ತಿಳಿಸಿದ್ದಾರೆ.

50 ಕೋಟಿ ಆಮಿಷ ಮತ್ತು ವಾಮಾಚಾರದ ಆರೋಪ: ನ್ಯಾಯಾಲಯದಲ್ಲಿ ನೇರವಾಗಿ ವಾದ ಮಂಡಿಸಿದ ಸ್ನೇಹಮಯಿ ಕೃಷ್ಣ, ಆರೋಪಿಗಳು ನನ್ನನ್ನು ಹತ್ತಿಕ್ಕಲು ಎಲ್ಲಾ ಪ್ರಯತ್ನ ಮಾಡುತ್ತಿದ್ದಾರೆ. ಸಿಎಂ ಪತ್ನಿ ಪಾರ್ವತಿ ಅವರ ಆಪ್ತ ಸಹಾಯಕ ಎಂದು ಹೇಳಿಕೊಂಡ ವ್ಯಕ್ತಿಯೊಬ್ಬರು ನನಗೆ 50 ಕೋಟಿ ರೂಪಾಯಿ ಲಂಚದ ಆಮಿಷ ನೀಡಿದ್ದರು. ಅಷ್ಟೇ ಅಲ್ಲದೆ, ಹರ್ಷ ಮತ್ತು ಶ್ರೀನಿಧಿ ಎಂಬುವವರು ಮೂಟೆಗಟ್ಟಲೆ ಹಣ ಹಿಡಿದುಕೊಂಡು ಬಂದಿದ್ದರು. ಈ ಬಗ್ಗೆ ವೀಡಿಯೊ ಸಮೇತ ನಾನು ಪೊಲೀಸ್ ಆಯುಕ್ತರಿಗೆ ದೂರು ನೀಡಿದ್ದರೂ ಯಾವುದೇ ಕ್ರಮವಾಗಿಲ್ಲ ಎಂದು ಅಳಲು ತೋಡಿಕೊಂಡರು. ಇದರ ಜೊತೆಗೆ, ಪ್ರಕರಣದಲ್ಲಿ ದೂರು ನೀಡಿದ್ದಕ್ಕಾಗಿ ತನ್ನ ವಿರುದ್ಧ ವಾಮಾಚಾರ ನಡೆಸಿ, ಕುರಿ ಬಲಿ ಕೊಡಲಾಗಿದೆ ಎಂದು ಗಂಭೀರವಾಗಿ ಆರೋಪಿಸಿದರು. ▶ 6ನೇ ಪುಟಕ್ಕೆ

ಅರಣ್ಯದಂಚಿನ ಜನರ ರಕ್ಷಣೆಗಿದ್ದಾರೆ ‘ಕಾಡಿನ ಮಿತ್ರರು’

ಮಾನವ–ವನ್ಯಜೀವಿ ಸಂಘರ್ಷ ತಡೆ; ಕಾಡಂಚಿನ ಗ್ರಾಮಸ್ಥರ ರಕ್ಷಣೆಗೆ ಅರಣ್ಯ ಸಿಬ್ಬಂದಿಗೆ ಸಾಥ್

ಮೈಸೂರು, ಫೆ.28(ಎಂಟಿವೈ)– ಮಾನವ–ವನ್ಯಜೀವಿ ಸಂಘರ್ಷ ಹೆಚ್ಚಾಗಿದ್ದ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಕಾಡಂಚಿನ ಗ್ರಾಮಗಳ ವ್ಯಾಪ್ತಿಯಲ್ಲಿ ಅರಣ್ಯ ಇಲಾಖೆಯೊಂದಿಗೆ ಕಾರ್ಯನಿರ್ವಹಿಸಲು ‘ಕಾಡಿನ ಮಿತ್ರ’ ಫೀಲ್ಡ್‌ಗೆ ಇಳಿದಿದ್ದು, ವನ್ಯಜೀವಿಗಳು ಕಾಡಿನಿಂದ ಹೊರಗೆ ಬರದಂತೆ ತಡೆಗಟ್ಟಲು ಗಸ್ತು ತಿರುಗಲಾರಂಭಿಸಿದ್ದಾರೆ.

ಮಾನವ–ವನ್ಯಜೀವಿ ಸಂಘರ್ಷದ ಅತೀ ಸೂಕ್ಷ್ಮ ಪ್ರದೇಶ ಎಂದು ಗುರುತಿಸಲ್ಪಟ್ಟಿರುವ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಹೆಡಿಯಾಲ ವಲಯ, ಮೊಳೆಯೂರು ವಲಯ, ನುಗು ಮತ್ತು ಎನ್.ಬೇಗೂರು ವಲಯದಲ್ಲಿ ಹುಲಿ ಮತ್ತು ಆನೆ ದಾಳಿಯಿಂದ ಮಾನವ ಜೀವಹಾನಿ ಸಂಭವಿಸಿದ್ದು, ವನ್ಯಜೀವಿಗಳ ದಾಳಿ ಪ್ರಕರಣ ಮರುಕಳಿಸದಂತೆ ಕಟ್ಟೆಚ್ಚರ ವಹಿಸಲು ಕ್ರಮ ಕೈಗೊಂಡಿದ್ದು, ಇದೀಗ ‘ಕಾಡಿನ ಮಿತ್ರ’ರನ್ನಾಗಿ ಸ್ಥಳೀಯ ಗ್ರಾಮದ ಕೆಲವರನ್ನು ಆಯ್ಕೆ ಮಾಡಿಕೊಂಡು ಸಿಬ್ಬಂದಿಯೊಂದಿಗೆ ಗಸ್ತು ತಿರುಗುವ ನೂತನ ವ್ಯವಸ್ಥೆಯನ್ನು ಸದ್ದಿಲ್ಲದೆ ಆರಂಭಿಸಲಾಗಿದೆ.




ಬಂಡೀಪುರದ ಹೆಡಿಯಾಲ ಉಪವಿಭಾಗದ ಕಾಡಂಚಿನ ಗ್ರಾಮಗಳಲ್ಲಿ ಗಸ್ತಿಗೆ ನಿಯೋಜನೆಗೊಂಡಿರುವ ‘ಕಾಡಿನ ಮಿತ್ರ’ರ ತಂಡ

‘ಕಾಡಿನ ಮಿತ್ರ’ರಾದ 50 ಮಂದಿ ರೈತರು: ಸಂಘರ್ಷ ಏರ್ಪಟ್ಟಿದ್ದ ಕಾಡಂಚಿನ ಗ್ರಾಮಗಳಲ್ಲಿ ಗಸ್ತು ಹೆಚ್ಚಿಸಲು ಕ್ರಮ ಕೈಗೊಳ್ಳುವಂತೆ ಅರಣ್ಯ ಸಚಿವ ಈಶ್ವರ್ ಬಿ.ಖಂಡ್ರೆ ನೀಡಿದ ಸೂಚನೆ ಮೇರೆಗೆ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಸಿಎಫ್ ಎಸ್.ಪ್ರಭಾಕರನ್ ವನ್ಯಜೀವಿ ತಜ್ಞರೊಂದಿಗೆ ಸಮಾಲೋಚಿಸಿ, ‘ಕಾಡಿನ ಮಿತ್ರ’ ಯೋಜನೆ ಜಾರಿಗೊಳಿಸಿದ್ದಾರೆ. ಪ್ರಮುಖವಾಗಿ ಹುಲಿ, ಆನೆ ದಾಳಿ ಪ್ರಕರಣ ಹೆಚ್ಚಾಗಿದ್ದ ಹೆಡಿಯಾಲ, ಮೊಳೆಯೂರು, ನುಗು ಮತ್ತು ಎನ್.ಬೇಗೂರು ವಲಯ ವ್ಯಾಪ್ತಿಯ ಗ್ರಾಮಗಳ ಗುರಿಯಾಗಿಸಿಕೊಂಡು ‘ಕಾಡಿನ ಮಿತ್ರ’ ಜಾರಿಗೊಳಿಸಲಾಗಿದೆ. ▶ 6ನೇ ಪುಟಕ್ಕೆ

ಮಾ.11ರಿಂದ ವೈದ್ಯಕೀಯ ಸಿಬ್ಬಂದಿ ಸಂಘಗಳ ಮುಷ್ಕರ

ಆರೋಗ್ಯ ಸೇವೆ ವ್ಯತ್ಯಯವಾದರೆ ಕಾನೂನು ಕ್ರಮದ ಎಚ್ಚರಿಕೆ ನೀಡಿದ ರಾಜ್ಯ ಸರ್ಕಾರ



ಬೆಂಗಳೂರು: ಸರ್ಕಾರಿ ವೈದ್ಯಕೀಯ ಸಿಬ್ಬಂದಿ ಸಂಘಗಳು ಮಾರ್ಚ್ 11ರಿಂದ ಸರ್ಕಾರಿ ಆರೋಗ್ಯ ಸಂಸ್ಥೆಗಳಲ್ಲಿ ಸೇವೆಗಳನ್ನು ಸ್ಥಗಿತಗೊಳಿಸುವುದಾಗಿ ಘೋಷಿಸಿರುವ ಹಿನ್ನೆಲೆಯಲ್ಲಿ, ಸರ್ಕಾರಿ ಆಸ್ಪತ್ರೆಗಳಲ್ಲಿ ಆರೋಗ್ಯ ಸೇವೆಗಳ ಲಭ್ಯತೆ ಕುರಿತು ಜನಸಾಮಾನ್ಯರಲ್ಲಿ ಆತಂಕ ವ್ಯಕ್ತವಾಗಿದೆ. ಈ ಹಿನ್ನೆಲೆಯಲ್ಲಿ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಕರ್ತವ್ಯಕ್ಕೆ ಗೈರಾಗುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವ ಆಯ್ಕೆಗಳನ್ನು ಸರ್ಕಾರ ಪರಿಶೀಲಿಸುತ್ತಿದೆ ಎಂದು ಎಚ್ಚರಿಕೆ ನೀಡಿದ್ದಾರೆ.

ಬಹುಕಾಲದಿಂದ ಬಾಕಿ ಇರುವ ಸೇವಾ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ವಿವಿಧ ವೈದ್ಯಕೀಯ ಸಿಬ್ಬಂದಿ ಸಂಘಗಳು ಹಂತ ಹಂತವಾಗಿ ಸೇವೆ ಸ್ಥಗಿತಗೊಳಿಸುವುದಾಗಿ ಘೋಷಿಸಿವೆ. ಎರಡೂವರೆ ವರ್ಷಕ್ಕೂ ಹೆಚ್ಚು ಕಾಲ ಕಾಯುತ್ತಿದ್ದೇವೆ. ಪದೋನ್ನತಿ, ಕೇಡರ್ ನಿಯಮಗಳು, ಹಿರಿಯ ಹುದ್ದೆಗಳ ಭರ್ತಿ ಬಗ್ಗೆ ಸರ್ಕಾರ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಕರ್ನಾಟಕ ಸರ್ಕಾರ ವೈದ್ಯಕೀಯ ಸಂಘದ ಅಧ್ಯಕ್ಷ ಡಾ.ರವೀಂದ್ರನಾಥ್ ಎಂ.ಮೇಟಿ ತಿಳಿಸಿದ್ದಾರೆ.

ಹೊರರೋಗಿ ವಿಭಾಗ ಸೇವೆಗಳು ಸ್ಥಗಿತಗೊಳ್ಳಲಿವೆ: ತುರ್ತು ಚಿಕಿತ್ಸೆ ಮಾತ್ರ ಮುಂದುವರಿಯಲಿದೆ. ಮಾರ್ಚ್ 16ರಿಂದ ಸರ್ಕಾರ ಕ್ರಮ ಕೈಗೊಳ್ಳದಿದ್ದರೆ ತುರ್ತು ಸೇವೆಗಳನ್ನು ಒಳಗೊಂಡಂತೆ ಸಂಪೂರ್ಣ ಕರ್ತವ್ಯ ಬಹಿಷ್ಕಾರ ಮಾಡಲಾಗುವುದು ಎಂದು ವೈದ್ಯರು ತಿಳಿಸಿದ್ದಾರೆ. ಸುಮಾರು 65 ಸಾವಿರದಿಂದ 80 ಸಾವಿರ ಸಿಬ್ಬಂದಿ, ಅದರಲ್ಲೂ ರಾಷ್ಟ್ರೀಯ ಆರೋಗ್ಯ ಮಿಷನ್ ಸಿಬ್ಬಂದಿ ಸೇರಿದಂತೆ, ಹಲವರು ಪ್ರತಿಭಟನೆಗೆ ಬೆಂಬಲ ನೀಡಿದ್ದಾರೆ. ಸರ್ಕಾರ ನಮ್ಮೆಲ್ಲರ ಮೇಲೂ ಕ್ರಮ ಕೈಗೊಳ್ಳಲಿ, ನಾವು ನಮ್ಮ ನಿರ್ಧಾರದಿಂದ ಹಿಂದೆ ಸರಿಯುವುದಿಲ್ಲ ಎಂದು ಮೇಟಿ ಹೇಳಿದರು. ದೀರ್ಘ ಕಾಲದಿಂದ ಖಾಲಿ ಇರುವ ಹುದ್ದೆಗಳ ಕಾರಣ ಹಿರಿಯ ವೈದ್ಯರು ಪದೋನ್ನತಿ ಇಲ್ಲದೇ ನಿವೃತ್ತಿಯಾಗುತ್ತಿದ್ದಾರೆ ಎಂದು ಹೇಳಿದರು.

ರೋಗಿಗಳಿಗೆ ಉಂಟಾಗುವ ತೊಂದರೆಗಳಿಗಾಗಿ ಸಂಘ ಕ್ಷಮೆಯಾಚಿಸಿದ್ದರೂ, ಜವಾಬ್ದಾರಿ ಸರ್ಕಾರದದ್ದೇ ಎಂದು ಹೇಳಿದೆ. ನಾವು ದಾಸರಲ್ಲ. ಸರ್ಕಾರ ವೈದ್ಯರು ಹಾಗೂ ▶ 6ನೇ ಪುಟಕ್ಕೆ

ಮಹಿಳೆಯರಿಗೆ ಕಂಟಕವಾಗಿರುವ ಗರ್ಭಕಂಠದ ಕ್ಯಾನ್ಸರ್ ವಿರುದ್ಧ ಸಮರ

ದೇಶಾದ್ಯಂತ ಹೆಚ್‌ಪಿವಿ ಲಸಿಕಾ ಅಭಿಯಾನಕ್ಕೆ ಪ್ರಧಾನಿ ಮೋದಿ ಚಾಲನೆ

ಬೆಂಗಳೂರು, ಫೆ.28(ಕೆಎಂಶಿ)– ಮಹಿಳೆಯರಲ್ಲಿ ಕಂಡುಬರುವ ಗರ್ಭಕಂಠದ ಕ್ಯಾನ್ಸರ್ ತಡೆಗಟ್ಟುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಮಹತ್ವದ ಹೆಜ್ಜೆಯಿಟ್ಟಿದ್ದು, ಶನಿವಾರ(ಫೆ.28) ರಾಜಸ್ಥಾನದ ಅಜ್ಮೀರ್‌ನಲ್ಲಿ ನಡೆದ ಬೃಹತ್ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ದೇಶಾದ್ಯಂತ ಹ್ಯೂಮನ್ ಪ್ಯಾಪಿಲೋಮಾ ವೈರಸ್(ಹೆಚ್‌ಪಿವಿ) ಲಸಿಕಾ ಅಭಿಯಾನಕ್ಕೆ ಅಧಿಕೃತವಾಗಿ ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ಪ್ರಧಾನಿ ಮೋದಿ, ನಮ್ಮ ಸರ್ಕಾರವು ದೇಶದ ಪ್ರತಿಯೊಂದು ಸ್ತರದಲ್ಲಿ ಅಭಿವೃದ್ಧಿ ತರಲು ಬದ್ಧವಾಗಿದೆ. ಈ ಹೆಚ್‌ಪಿವಿ ಲಸಿಕಾ ಅಭಿಯಾನವು ದೇಶದ ಹೆಣ್ಣುಮಕ್ಕಳ ಆರೋಗ್ಯ ರಕ್ಷಣೆಯಲ್ಲಿ ಮೈಲಿಗಲ್ಲಾಗಲಿದೆ. ಇಂದು ಕೇವಲ ಲಸಿಕೆಗೆ ಚಾಲನೆ ನೀಡಿರುವುದು ಮಾತ್ರವಲ್ಲದೆ, ಕೋಟ್ಯಾಂತರ ರೂ.ಮೌಲ್ಯದ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಶಂಕುಸ್ಥಾಪನೆ ಮತ್ತು ಯುವಜನತೆಗೆ ಉದ್ಯೋಗ ನೇಮಕಾತಿ ಪತ್ರಗಳನ್ನು ವಿತರಿಸುವ ಸೌಭಾಗ್ಯ ನಮಗೆ ಲಭಿಸಿದೆ ಎಂದು ಹರ್ಷ ವ್ಯಕ್ತಪಡಿಸಿದರು.

‘ಸ್ವಸ್ಥ ನಾರಿ ಸಶಕ್ತ ಪರಿವಾರ ಅಭಿಯಾನ’ದಡಿ ಪ್ರತಿ ವರ್ಷ ದೇಶದಾದ್ಯಂತ ಸುಮಾರು 1.15 ಕೋಟಿ ಹೆಣ್ಣುಮಕ್ಕಳಿಗೆ (14 ವರ್ಷ ವಯಸ್ಸಿನವರಿಗೆ) ಲಸಿಕೆ ನೀಡುವ ಗುರಿ ಹೊಂದಲಾಗಿದೆ. ಈ ಲಸಿಕೆಯನ್ನು ಸರ್ಕಾರಿ ಆಸ್ಪತ್ರೆಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ಜಿಲ್ಲಾ ಆಸ್ಪತ್ರೆಗಳಲ್ಲಿ ಸಂಪೂರ್ಣ ಉಚಿತವಾಗಿ ನೀಡಲಾಗುತ್ತದೆ ಎಂದರು.



ರಾಜಸ್ಥಾನದ ಅಜ್ಮೀರ್‌ನಲ್ಲಿ ನಡೆದ ಬೃಹತ್ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ದೇಶಾದ್ಯಂತ ಹ್ಯೂಮನ್ ಪ್ಯಾಪಿಲೋಮಾ ವೈರಸ್(ಹೆಚ್‌ಪಿವಿ) ಲಸಿಕಾ ಅಭಿಯಾನಕ್ಕೆ ಅಧಿಕೃತವಾಗಿ ಚಾಲನೆ ನೀಡಿದರು.

14 ವರ್ಷದ ಮಕ್ಕಳಿಗೆ ಒಂದು ಡೋಸ್ ಲಸಿಕೆ ನೀಡಿದರೂ ಅದು 2–3 ಡೋಸ್‌ಗಳಷ್ಟೇ ಪರಿಣಾಮಕಾರಿಯಾಗಿ ದೀರ್ಘಕಾಲದ ರಕ್ಷಣೆ ನೀಡುತ್ತವೆ ಎಂಬುದು ಸಾಬೀತಾಗಿದೆ. ಕಿರಿಯ ವಯಸ್ಸಿನಲ್ಲಿ ಲಸಿಕೆ ನೀಡುವುದರಿಂದ ದೇಹದ ರೋಗ ನಿರೋಧಕ ಶಕ್ತಿಯು ಹಿರಿಯರಿಗಿಂತ ಹೆಚ್ಚು ಪ್ರಬಲವಾಗಿ ಪ್ರತಿಕ್ರಿಯಿಸಿ, ಅಧಿಕ ಪ್ರಮಾಣದ ಪ್ರತಿಕಾಯಗಳು ಉತ್ಪತ್ತಿಯಾಗುತ್ತವೆ. ಈ ಹಿನ್ನೆಲೆಯಲ್ಲಿ ಈ ವಯಸ್ಸಿನ ಮಕ್ಕಳನ್ನೇ ಫಲಾನುಭವಿಗಳಾಗಿ ಆಯ್ಕೆ ಮಾಡಲಾಗಿದೆ.

ಆರಂಭದಲ್ಲೇ ಪತ್ತೆ ಅಗತ್ಯ: ಗರ್ಭಕಂಠದ ಕ್ಯಾನ್ಸರ್, ಗರ್ಭಕಂಠದ ಒಳಪದರದಲ್ಲಿ ಅಸಹಜ ಕೋಶಗಳ ಬೆಳವಣಿಗೆಯಿಂದ ಉಂಟಾಗುತ್ತದೆ. ಕ್ಯಾನ್ಸರ್ ಆಗಿ ಬೆಳೆಯಬಹುದಾದ ಅಸಹಜ ಕೋಶಗಳಿವೆಯೇ ಎಂಬುದನ್ನು ತಿಳಿಯಲು ಇರುವ ಏಕೈಕ ಮಾರ್ಗವೆಂದರೆ ಗರ್ಭಕಂಠದ ಸ್ಕ್ರೀನಿಂಗ್ ಪರೀಕ್ಷೆ. ಋತು ಚಕ್ರದ ನಡುವೆ ರಕ್ತಸ್ರಾವ, ಮುಟ್ಟಿನ ರಕ್ತ ಸ್ರಾವವು ಸಾಮಾನ್ಯಕ್ಕಿಂತ ಹೆಚ್ಚಿರುವುದು, ಅಸಾಮಾನ್ಯ ಬಣ್ಣ ಹೊಂದಿರುವುದು, ಇನ್ನಿತರ ಲಕ್ಷಣಗಳು ಕಾಣಿಸಿಕೊಂಡರೆ ವೈದ್ಯರನ್ನು ಸಂಪರ್ಕಿಸಿ, ಗರ್ಭಕಂಠ ಸ್ಕ್ರೀನಿಂಗ್ ಮಾಡಿಸುವುದು ಅಗತ್ಯ.

> “ಭಾರತದಲ್ಲಿ ಮಹಿಳೆಯರನ್ನು ಕಾಡುತ್ತಿರುವ ಕ್ಯಾನ್ಸರ್‌ಗಳಲ್ಲಿ ಗರ್ಭಕಂಠದ ಕ್ಯಾನ್ಸರ್ ಎರಡನೇ ಅತೀ ದೊಡ್ಡ ಕಾಯಿಲೆಯಾಗಿದೆ. ಅಂಕಿಅಂಶಗಳ ಪ್ರಕಾರ ಭಾರತದಲ್ಲಿ ಪ್ರತಿ ವರ್ಷ 1.20 ಲಕ್ಷಕ್ಕೂ ಹೆಚ್ಚು ಹೊಸ ಪ್ರಕರಣಗಳು ವರದಿಯಾಗುತ್ತಿದ್ದು, ಸುಮಾರು 80,000 ಮಹಿಳೆಯರು ಈ ಕಾಯಿಲೆಯಿಂದ ಸಾವನ್ನಪ್ಪುತ್ತಿದ್ದಾರೆ. ಈ ಕ್ಯಾನ್ಸರ್ ಬಾಧಿಸಲು ಮುಖ್ಯ ಕಾರಣ ಹೆಚ್‌ಪಿವಿ ವೈರಸ್. ಅದರಲ್ಲೂ 16 ಮತ್ತು 18ನೇ ಮಾದರಿಯ ವೈರಸ್‌ಗಳು ಶೇ.80ಕ್ಕಿಂತ ಹೆಚ್ಚು ಪ್ರಕರಣಗಳಿಗೆ ಕಾರಣವಾಗುತ್ತವೆ. ಇದನ್ನು ತಡೆಯಲು ಲಸಿಕೆ ಅತ್ಯಂತ ಪರಿಣಾಮಕಾರಿ ಮಾರ್ಗವಾಗಿದೆ.
> –ನರೇಂದ್ರ ಮೋದಿ, ಪ್ರಧಾನಿ

ಹತ್ತರಲ್ಲಿ ಎಂಟು ಮಹಿಳೆಯರು ಜೀವಿತಾವಧಿಯಲ್ಲಿ ಒಮ್ಮೆಯಾದರೂ ಹೆಚ್‌ಪಿವಿ ಸೋಂಕಿಗೆ ಒಳಗಾಗಬಹುದು. ಆದರೆ ಈ ಸೋಂಕು ಹೊಂದಿರುವ ಹೆಚ್ಚಿನ ಮಹಿಳೆಯರಲ್ಲಿ ಗರ್ಭಕಂಠದ ಕ್ಯಾನ್ಸರ್ ಇರುವುದಿಲ್ಲ. ಆದರೆ ಆರಂಭದಲ್ಲೇ ಸಮಸ್ಯೆ ಪತ್ತೆಹಚ್ಚಿ ಸೂಕ್ತ ಚಿಕಿತ್ಸೆ ಪಡೆಯದಿದ್ದರೆ ಸಮಸ್ಯೆ ಬಿಗಡಾಯಿಸುವ ಸಾಧ್ಯತೆ ಹೆಚ್ಚು. ಆರಂಭದಲ್ಲೇ ಪರೀಕ್ಷೆ ಮಾಡಿಸಿಕೊಳ್ಳುವುದರಿಂದ ಗರ್ಭ ಕಂಠದಲ್ಲಿ ಅಸಹಜ ಕೋಶಗಳು ಎಲ್ಲಿವೆ, ಯಾವ ಪ್ರಮಾಣದಲ್ಲಿವೆ ಎಂಬುದನ್ನು ಗುರುತಿಸಿ, ಚಿಕಿತ್ಸೆ ನೀಡಿ ಗುಣಪಡಿಸುತ್ತಾರೆ.

ಆಸ್ಟ್ರೇಲಿಯಾದಲ್ಲಿ 90ರ ದಶಕದಲ್ಲೇ ರಾಷ್ಟ್ರೀಯ ಗರ್ಭಕಂಠದ ತಪಾಸಣೆ ಕಾರ್ಯಕ್ರಮ ಜಾರಿಗೊಳಿಸಿರುವ ಪರಿಣಾಮ ಗರ್ಭಕಂಠದ ಕ್ಯಾನ್ಸರ್‌ನಿಂದ ಉಂಟಾಗುವ ಮರಣ ಪ್ರಮಾಣ ಅರ್ಧದಷ್ಟು ಕಡಿಮೆಯಾಗಿದೆ ಎನ್ನಲಾಗಿದೆ. 18ರಿಂದ 70 ವರ್ಷದೊಳಗಿನ ಮಹಿಳೆಯರಿಗೆ ನಿಗದಿತ ಸಮಯದಲ್ಲಿ ಉಚಿತ ಪ್ಯಾಪ್ ಸ್ಮೀಯರ್ ಪರೀಕ್ಷೆ ನಡೆಸುವುದು ಈ ಕಾರ್ಯಕ್ರಮದ ಭಾಗವಾಗಿದೆ. ಭಾರತದಲ್ಲೂ ಉಚಿತವಾಗಿ ಹೆಚ್‌ಪಿವಿ ಲಸಿಕಾ ಅಭಿಯಾನಕ್ಕೆ ಚಾಲನೆ ದೊರಕಿದ್ದು, ಗರ್ಭಕಂಠ ಕ್ಯಾನ್ಸರ್ ತಪಾಸಣೆ ಬಗ್ಗೆಯೂ ವ್ಯಾಪಕ ಪ್ರಚಾರ, ಸೌಲಭ್ಯ ಕಲ್ಪಿಸುವ ಅಗತ್ಯವಿದೆ.

ಮೈಸೂರು ಮಿತ್ರ ಭಾನುವಾರ 1 ಮಾರ್ಚ್ 2026

ನೇಮಕಾತಿ ವಿಚಾರದಲ್ಲಿ ಬಲಗೈ, ಎಡಗೈ ಸಮುದಾಯ ಗೊಂದಲಕ್ಕೊಳಗಾಗುವುದು ಬೇಡ

ಒಳ ಮೀಸಲಾತಿ ಗೊಂದಲ ನಿವಾರಣೆಯಾಗುವವರೆಗೂ ಹಳೇ ಮೀಸಲಾತಿಯಂತೆ ಹುದ್ದೆಗಳ ನೇಮಕಾತಿ

ಮೈಸೂರು,ಫೆ.28(ಜಿಎ)–ಒಳ ಮೀಸಲಾತಿ ಕುರಿತ ಗೊಂದಲ ಬಗೆಹರಿಯುವವರೆಗೂ ಹಿಂದಿನ ಮೀಸಲಾತಿ ಅನ್ವಯ ನೇಮಕಾತಿ ಮಾಡಿಕೊಳ್ಳಲು ಸಚಿವ ಸಂಪುಟ ನಿರ್ಧರಿಸಿದ್ದು, ಶೀಘ್ರದಲ್ಲಿಯೇ ಸರ್ಕಾರ ಸುಮಾರು 56 ಸಾವಿರ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳಲಿದೆ. ಹೀಗಾಗಿ ಬಲಗೈ, ಎಡಗೈ ಸಮುದಾಯದವರು ಗೊಂದಲಕ್ಕೊಳಗಾಗುವುದು ಬೇಡ ಎಂದು ರಾಜ್ಯ ಬಲಗೈ ಜಾತಿಗಳ ಒಕ್ಕೂಟದ ಪರವಾಗಿ ಮಾಜಿ ಮೇಯರ್ ಪುರುಷೋತ್ತಮ್ ಮನವಿ ಮಾಡಿದರು.


ಪುರುಷೋತ್ತಮ್

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ನೇಮಕಾತಿ ಪ್ರಕ್ರಿಯೆ ಶೀಘ್ರದಲ್ಲೇ ಪೂರ್ಣಗೊಳಿಸಲು ಸಂಪುಟ ನಿರ್ಧರಿಸಿದೆ. ಒಳ ಮೀಸಲಾತಿಯ ಗೊಂದಲ ಬಗೆಹರಿಯುವವರೆಗೂ ಹಳೇ ಮೀಸಲಾತಿ ಮುಂದುವರಿಸುವಂತೆ ಸಿಎಂ ಸಿದ್ದರಾಮಯ್ಯ ಹಾಗೂ ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರಿಗೆ ಒಕ್ಕೂಟ ಮನವಿ ಮಾಡಿತ್ತು. ಈ ವೇಳೆ ಸಾಮಾಜಿಕ ನ್ಯಾಯದ ಅಡಿಯಲ್ಲಿ ಸೂಕ್ತ ನಿರ್ಧಾರ ಕೈಗೊಳ್ಳುವುದಾಗಿ ನೀಡಿದ್ದ ಭರವಸೆ ಸಿಎಂ ಈಡೇರಿಸಿದ್ದಾರೆಂದು ಕೃತಜ್ಞತೆ ಸಲ್ಲಿಸಿದರು.

ನಾಗಮೋಹನದಾಸ್ ವರದಿ ಜಾರಿಗೂ ಮುನ್ನ ವರದಿ ಕುರಿತು ಸಂಪೂರ್ಣ ಹಾಗೂ ವಿಸ್ತೃತ ಚರ್ಚೆ ಆಗಬೇಕೆಂಬುದು ಎಲ್ಲರ ಬೇಡಿಕೆ ಆಗಿತ್ತು. ಹೀಗಾಗಿ ಸಂಪುಟ ಸಭೆಯಲ್ಲಿ ಚರ್ಚೆ ನಡೆದಿರುವುದು ಸ್ವಾಗತಾರ್ಹ. ಹಲವರು ಒಳ ಮೀಸಲಾತಿ ಕುರಿತ ಚರ್ಚೆ ಹೋರಾಟದ ಭರದಲ್ಲಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಹಾಗೂ ಇನ್ನಿತರ ಮುಖಂಡರನ್ನು ಅಪಮಾನಕರ ರೀತಿ ಬಿಂಬಿಸಿರುವುದು ಸರಿಯಲ್ಲ. ನಾವು ನಾವೇ ಟೀಕೆ ಮಾಡಿಕೊಂಡು ಬೀದಿಗೆ ಬರುವುದು ಬೇಡ. ಸಿಎಂ ಸ್ಥಾನ ಸಹಾ ಒಮ್ಮತದಿಂದಲೇ ಪಡೆಯಬೇಕು, ಕಿತ್ತಾಡಿಕೊಂಡಲ್ಲ ಎಂದು ಸಲಹೆ ನೀಡಿದರು.

ಪ್ರಧಾನಿ ಮೋದಿ ಅಧಿಕಾರಕ್ಕೆ ಬರುವ ಮುನ್ನ ನೀಡಿದ್ದ ವಾಗ್ದಾನ ಈಡೇರಿಸಿದ್ದರೆ ಈ ವೇಳೆಗಾಗಲೇ 12 ಕೋಟಿಗೂ ಹೆಚ್ಚು ಉದ್ಯೋಗ ಸೃಷ್ಟಿ ಆಗುತ್ತಿತ್ತು. ಸದಾ ವಿದೇಶ ಪ್ರವಾಸದಲ್ಲಿರುವ ಬದಲು ದೇಶದಲ್ಲಿಯೇ ಪ್ರವಾಸ ಮಾಡಿ ಜನರ ಸಮಸ್ಯೆ ಅರಿತಿದ್ದರೆ ದೇಶದ ಹಲವಾರು ಸಮಸ್ಯೆ ಬಗೆಹರಿಯುತ್ತಿತ್ತೆಂದು ಕಿಡಿಕಾರಿದರು. ಸುದ್ದಿಗೋಷ್ಠಿಯಲ್ಲಿ ಸೋಮಯ್ಯ ಮಲೆಯೂರು, ಭರತ್ ರಾಮಸ್ವಾಮಿ, ನಂಜುಂಡಸ್ವಾಮಿ ಕುಕ್ಕರಹಳ್ಳಿ, ಎಸ್.ರಾಜೇಶ್ ಉಪಸ್ಥಿತರಿದ್ದರು.

ಮಾ.3ರಂದು ಮಹಾ ಮೃತ್ಯುಂಜಯ ಹೋಮ

ಮೈಸೂರು: ದೇವರಾಜ ಮೊಹಲ್ಲಾದಲ್ಲಿರುವ ಶ್ರೀ ಅಮೃತೇಶ್ವರ ದೇವಸ್ಥಾನದಲ್ಲಿ ಹುಣ್ಣಿಮೆ ಪ್ರಯುಕ್ತ ಮಾ.3ರ ಬೆಳಿಗ್ಗೆ ಮಹಾ ಮೃತ್ಯುಂಜಯ ಹೋಮ ಹಮ್ಮಿಕೊಳ್ಳಲಾಗಿದೆ. ಮೇಷ, ಸಿಂಹ, ವೃಶ್ಚಿಕ, ಕುಂಭ, ಮೀನ ರಾಶಿಯವರಿಗೆ ಶನಿಮಹಾಶಾಂತಿ, ಬಾಧಾನಿವಾರಕ ಮಹಾ ಸುದರ್ಶನ ಹೋಮ, ಕುಜ ಶಾಂತಿ, ರಾಹು ಶಾಂತಿ ಸ್ವಯಂವರ ಪಾರ್ವತಿ ಹೋಮ ಮತ್ತು ಶ್ರೀ ಸತ್ಯನಾರಾಯಣ ಪೂಜೆ ಸಹ ನೆರವೇರಲ್ಪಡುತ್ತದೆ. ಬೆಳಿಗ್ಗೆ 9 ಗಂಟೆಗೆ ಪ್ರಾರಂಭವಾಗಿ ಮಧ್ಯಾಹ್ನ 12.30ಗೆ ಮಹಾಮಂಗಳಾರತಿ.

ಚಂದ್ರಗ್ರಹಣ ಶಾಂತಿ: ಶ್ರೀ ಅಮೃತೇಶ್ವರ ದೇವಸ್ಥಾನದಲ್ಲಿ ಮಾ.3ರಂದು ಚಂದ್ರಗ್ರಹಣ ಸಂಜೆ ಮೋಕ್ಷ ಕಾಲ ಮಾತ್ರ ಕಾಣುವುದರಿಂದ ಸಿಂಹ, ಕನ್ಯಾ, ವೃಷಭ ಮಕರ ರಾಶಿಯವರಿಗೆ ಮಾ.4ರ ಬುಧವಾರ ಬೆಳಗ್ಗೆ 9.30ರವರೆಗೆ ಶಾಂತಿ ಮಾಡಲಾಗುವುದು.

ಸನ್ಮಾನ...


ಗುಂಡ್ಲುಪೇಟೆ ಟಿಎಪಿಸಿಎಂಎಸ್‌ನಿಂದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ ಆಯ್ಕೆಯಾಗಿರುವ ಕೆಪಿಸಿಸಿ ಮಾಜಿ ಕಾರ್ಯದರ್ಶಿ ಸೋಮಹಳ್ಳಿ ಎಸ್.ಶಿವನಾಗಪ್ಪ ಅವರನ್ನು ಕೆಪಿಸಿಸಿ ಸಂಯೋಜಕರೂ ಆದ ಕರ್ನಾಟಕ ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎನ್.ಭಾಸ್ಕರ್ ಸನ್ಮಾನಿಸಿದರು. ಈ ವೇಳೆ ವಕೀಲರಾದ ತಿಮ್ಮಯ್ಯ, ಎನ್.ಕೆ.ಬಸವರಾಜು, ಮಂಜುಳಾ, ಡಿಸಿಸಿ ವಕ್ತಾರ ಕುಂಬ್ರಹಳ್ಳಿ ರಾಹುಲ್, ಡಿಸಿಸಿ ಕಿಸಾನ್ ಸೇಲ್ ಅಧ್ಯಕ್ಷ ಜಿ.ಮಹಾದೇವ, ಜಿಲ್ಲಾ ಮಡಿವಾಳ ಸಮಾಜದ ಅಧ್ಯಕ್ಷ ಸತ್ಯನಾರಾಯಣ ಉಪಸ್ಥಿತರಿದ್ದರು.

ನಾಳೆಯಿಂದ ರಂಗ ಸಂಭ್ರಮ ನಾಟಕೋತ್ಸವ

ಮೈಸೂರು,ಫೆ.28(ಜಿಎ)–ಮೈಸೂರಿನ ನಾದರಂಗ ರಂಗ ಸಂಸ್ಥೆ ವತಿಯಿಂದ ಮಾ.2, 3, 4ರಂದು ನಗರದ ಕಲಾ ಮಂದಿರದ ಆವರಣದ ಕಿರುರಂಗ ಮಂದಿರದಲ್ಲಿ ರಂಗ ಸಂಭ್ರಮ ನಾಟಕೋತ್ಸವ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಹಿರಿಯ ರಂಗಕರ್ಮಿ ರಾಜಶೇಖರ ಕದಂಬ ಈ ವಿಷಯ ತಿಳಿಸಿ, ಮಾ.2ರಂದು ಸಂಜೆ 6.45ಕ್ಕೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ ನಾಟಕೋತ್ಸವ ಉದ್ಘಾಟಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಹಿರಿಯ ರಂಗಭೂಮಿ ಕಲಾವಿದೆ ಇಂದಿರಾ ನಾಯರ್, ರಂಗ ಸಮಾಜದ ಸದಸ್ಯ ಹೆಚ್.ಎಸ್. ಸುರೇಶ್‌ಬಾಬು ಭಾಗವಹಿಸಲಿದ್ದಾರೆ.

ವೇದಿಕೆ ಕಾರ್ಯಕ್ರಮದ ನಂತರ ಸಂಜೆ 7 ಗಂಟೆಗೆ ರಂಗಾನಂದ ಕಲಾ ಸಂಘದಿಂದ ರಾಜೇಂದ್ರ ಕಾರಂತ ವಿರಚಿತ 'ಮುದ್ದಣ್ಣನ ಪ್ರಮೋಷನ್ ಪ್ರಸಂಗ', ಮಾ.3ರಂದು ಸಂಜೆ 5.45ಕ್ಕೆ ನಾದರಂಗ ತಂಡದಿಂದ ಪೌರಾಣಿಕ ರಂಗಗೀತೆಗಳನ್ನು ಪ್ರಸ್ತುತಪಡಿಸಲಿದ್ದಾರೆ.


ನಂತರ 7 ಗಂಟೆಗೆ ಅಭ್ಯಾಸಿ ಟ್ರಸ್ಟ್ ನಿಂದ ಡಾ.ಹೆಚ್.ಎಸ್.ಶಿವಪ್ರಕಾಶ್ ಅವರ 'ಮಾದಾರಿ ಮಾದಯ್ಯ', ಮಾ.4 ರಂದು ರಾತ್ರಿ 7ಕ್ಕೆ ಎನ್.ಎಸ್.ರಾವ್ ವಿರಚಿತ 'ಸಾಮ್ರಾಟ್ ಅಶೋಕ' ಐತಿಹಾಸಿಕ ನಾಟಕ ಪ್ರದರ್ಶನವಿದೆ ಎಲ್ಲಾ ನಾಟಕಕ್ಕೂ ಉಚಿತ ಪ್ರವೇಶ ವಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿ ಯಲ್ಲಿ ಕೃಷ್ಣ ಮೂರ್ತಿ, ಶಿವಪ್ರಕಾಶ್, ರಂಗಸ್ವಾಮಿ, ನಾಗೇಂದ್ರಕುಮಾರ್ ಉಪಸ್ಥಿತರಿದ್ದರು.

ನಾಳೆಯಿಂದ ಬೆನ್ನುಮೂಳೆ ಉಚಿತ ತಪಾಸಣೆ ಶಿಬಿರ

ಮೈಸೂರು,ಫೆ.28–ಮೈಸೂರಿನ ಸುಯೋಗ್ ಆಸ್ಪತ್ರೆಯಲ್ಲಿ ಮಾ.2ರಿಂದ 7ರವರೆಗೆ ಉಚಿತ ಬೆನ್ನುಮೂಳೆ ಮತ್ತು ನರ ಶಸ್ತ್ರಚಿಕಿತ್ಸಾ ಶಿಬಿರವನ್ನು ಆಯೋಜಿಸಲಾಗಿದೆ. ಶಿಬಿರದಲ್ಲಿ ಬೆನ್ನುನೋವು, ಕುತ್ತಿಗೆ ನೋವು, ಕಾಲು ಮತ್ತು ಕೈಗಳಲ್ಲಿ ಮರಗಟ್ಟುವಿಕೆ, ನಡೆಯುವಾಗ ಬಾಗಿದ ಭಂಗಿ, ಹೆಚ್ಚು ದೂರ ನಡೆಯಲು ಸಾಧ್ಯವಾಗದಿರುವುದು ಈ ಸಮಸ್ಯೆಗಳಿರುವವರು ಕೂಡಲೇ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ 0821–2533600, 9986399862 ಸಂಪರ್ಕಿಸಬಹುದಾಗಿದೆ.

ನಿಧನ

ಜಯರಾಮು




ಮೈಸೂರು: ಮೈಸೂರು ತಾಲೂಕಿನ ಕುಪ್ಪೇಗಾಲ ಗ್ರಾಮದ ನಿವಾಸಿ ಜಯರಾಮು (58) ಶುಕ್ರವಾರ ಬೆಳಿಗ್ಗೆ ತಮ್ಮ ನಿವಾಸದಲ್ಲಿ ನಿಧನರಾದರು. ಮೃತರು ಪತ್ನಿ ಜಯಮ್ಮ, ಪುತ್ರ ನವೀನ, ಸೊಸೆ ಅಂಜಲಿ, ಪುತ್ರಿ ವಿಜಯಲಕ್ಷ್ಮಿ, ಅಳಿಯ ಬಿಲ್ಡಿಂಗ್ ಕಂಟ್ರಾಕ್ಟರ್ ನಾಗರಾಜು, ಮೊಮ್ಮಗ ಧನುಷ್, ಮೊಮ್ಮಗಳು ಯಶಸ್ವಿ ಸೇರಿದಂತೆ ಅಪಾರ ಬಂಧು ವರ್ಗ ಆಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಕುಪ್ಪೇಗಾಲದ ರುದ್ರಭೂಮಿಯಲ್ಲಿ ಶುಕ್ರವಾರ ಸಂಜೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ನಾಗೇಶ್



ಮೈಸೂರು: ಮೈಸೂರಿನ ಕೆ.ಜಿ.ಕೊಪ್ಪಲಿನ ಮೆರವೇಗೌಡರ ಕುಟುಂಬಸ್ಥರಾದ ಎನ್. ನಾಗೇಶ್(53) ಶನಿವಾರ ರಾತ್ರಿ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ದಿವಂಗತರು ಪತ್ನಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಭಾನುವಾರ (ಮಾ. 1) ಬೆಳಗ್ಗೆ 11 ಗಂಟೆಗೆ ಕೆ.ಜಿ.ಕೊಪ್ಪಲಿನ ರುದ್ರಭೂಮಿಯಲ್ಲಿ ದಿವಂಗತರ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕೊತ್ತಿಬೀರೇಗೌಡ



ಮೈಸೂರು, ಫೆ.28– ಮೈಸೂರು ತಾಲೂಕಿನ ಡಿ.ಸಾಲುಂಡಿ ಗ್ರಾಮದ ಮುಖಂಡರಾದ 75ವರ್ಷದ ಕೊತ್ತಿಬೀರೇಗೌಡರು ಶುಕ್ರವಾರ ವಯೋಸಹಜ ಕಾಯಿಲೆಯಿಂದ ನಿಧನರಾಗಿದ್ದಾರೆ.

ಅವರು ಪತ್ನಿ ನಿಂಗಮ್ಮ, ಪುತ್ರರಾದ ಬಸವಣ್ಣ, ಶಿವರಾಜು ಪುತ್ರಿಯರಾದ ಮಹದೇವಮ್ಮ, ರತ್ನಮ್ಮ ಮತ್ತು ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅವರ ಅಂತ್ಯಕ್ರಿಯೆಯು ಸ್ವಗ್ರಾಮದಲ್ಲಿ ಶುಕ್ರವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಬಿಗಿ ಭದ್ರತೆಯಲ್ಲಿ ದ್ವಿತೀಯ ಪಿಯುಸಿ ಪರೀಕ್ಷೆ ಆರಂಭ

ಕನ್ನಡ ಪರೀಕ್ಷೆಗೆ 515 ಮಂದಿ ಗೈರು; ಶೇ.98.21ರಷ್ಟು ಹಾಜರಾತಿ

- ಪರೀಕ್ಷಾ ಕೇಂದ್ರಗಳಿಗೆ ಪೊಲೀಸರ ನಿಯೋಜನೆ
- ಪ್ರತಿ ಕೇಂದ್ರದಲ್ಲಿ ಸಿಸಿಟಿವಿ ಕ್ಯಾಮರಾ ಅಳವಡಿಕೆ
- ಜಿಲ್ಲಾಧಿಕಾರಿ ಕಚೇರಿಯಲ್ಲಿ ವೆಬ್‌ಕ್ಯಾಸ್ಟಿಂಗ್
- ಪರೀಕ್ಷಾ ಅಕ್ರಮ ನಡೆಯದಂತೆ ಕಟ್ಟುನಿಟ್ಟಿನ ಕ್ರಮ





ನೋ ಟೆನ್ಷನ್....ಮೈಸೂರಿನ ಮಹಾರಾಣಿ ಜೂನಿಯರ್ ಕಾಲೇಜಿನಲ್ಲಿ ಪರೀಕ್ಷಾ ಕೊಠಡಿಗೆ ತೆರಳುವ ಮುನ್ನ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳು ಪರೀಕ್ಷೆಗೆ ಸಂಬಂಧಿಸಿದಂತೆ ಪರಸ್ಪರ ಸಮಾಲೋಚಿಸಿದ ಕ್ಷಣ (ಎಡಚಿತ್ರ). ಮೈಸೂರು ಡಿಸಿ ಕಚೇರಿಯ ವೆಬ್‌ಕ್ಯಾಸ್ಟಿಂಗ್ ಕೇಂದ್ರಕ್ಕೆ ಎಡಿಸಿ ಡಾ.ಪಿ.ಶಿವರಾಜ್ ಭೇಟಿ ನೀಡಿ, ಪರಿಶೀಲಿಸಿದರು. (ಬಲಚಿತ್ರ)

ಮೈಸೂರು, ಫೆ.28(ಬಿಎಲ್‌ಯು)–ಮೈಸೂರು ಜಿಲ್ಲೆಯಲ್ಲಿ ಇಂದು ಪಿಯುಸಿ ಪರೀಕ್ಷೆಯು ಪೊಲೀಸರ ಬಿಗಿ ಭದ್ರತೆಯಲ್ಲಿ ಆರಂಭವಾಯಿತು. ಮೈಸೂರು ನಗರದ 28 ಸೇರಿದಂತೆ ಜಿಲ್ಲೆಯ ಒಟ್ಟು 51 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ಆರಂಭವಾಯಿತು.

ಮೊದಲ ದಿನವಾದ ಇಂದು ಕನ್ನಡ ಹಾಗೂ ಅರೇಬಿಕ್ ಪತ್ರಿಕೆಗಳ ಪರೀಕ್ಷೆ ಇಂದು ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 1 ಗಂಟೆವರೆಗೆ ನಡೆಯಿತು.

ಮೈಸೂರು ಜಿಲ್ಲೆಯಲ್ಲಿ ಒಟ್ಟು 35,835 ವಿದ್ಯಾರ್ಥಿಗಳು (15,660 ಹುಡುಗರು ಹಾಗೂ 20,122 ಹುಡುಗಿಯರು) ಪರೀಕ್ಷೆಗೆ ನೋಂದಾಯಿಸಿಕೊಂಡಿದ್ದರು.

ಇಂದಿನ ಕನ್ನಡ ಪರೀಕ್ಷೆಗೆ ಒಟ್ಟು 28,865 ವಿದ್ಯಾರ್ಥಿಗಳು ನೋಂದಾಯಿಸಿಕೊಂಡಿದ್ದರು. ಆದರೆ 28,350 ವಿದ್ಯಾರ್ಥಿಗಳು ಹಾಜರಾಗಿದ್ದು, 515 ವಿದ್ಯಾರ್ಥಿಗಳು ಪರೀಕ್ಷೆಗೆ ಗೈರು ಹಾಜರಾಗಿದ್ದರು. ಈ ಮೂಲಕ ಶೇ.98.21 ಹಾಜರಾತಿ ಇತ್ತು. ಅರೇಬಿಕ್ ಪರೀಕ್ಷೆಗೆ ಇಬ್ಬರು ವಿದ್ಯಾರ್ಥಿಗಳು ನೋಂದಾಯಿಸಿಕೊಂಡಿದ್ದರು. ಇಬ್ಬರು ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು.

ಕರ್ನಾಟಕ ಸೆಕ್ಯೂರ್ಡ್ ಎಕ್ಸಾಮಿನೇಷನ್ ಸಿಸ್ಟಂ ಅಡಿ ಜಿಲ್ಲಾ ಖಜಾನೆಯಲ್ಲಿ ಪ್ರಶ್ನೆ ಪತ್ರಿಕೆ ಇಡಲಾಗಿತ್ತು. ಇಂದು ಬೆಳಿಗ್ಗೆ ಇಲ್ಲಿಂದಲೆ ಪ್ರಶ್ನೆ ಪತ್ರಿಕೆಗಳನ್ನು ವ್ಯವಸ್ಥಿತವಾಗಿ ಪರೀಕ್ಷಾ ಕೇಂದ್ರಗಳಿಗೆ ವಿತರಣೆ ಮಾಡಲಾಯಿತು. ಖಜಾನೆಯ ಹೊರಗೆ ಮತ್ತು ಒಳಗೆ ದಿನದ 24 ಗಂಟೆ ಕಾರ್ಯನಿರ್ವಹಿಸುವ ಸಿಸಿಟಿವಿ ಕ್ಯಾಮರಾಗಳನ್ನು ಅಳವಡಿಸಲಾಗಿದೆ.

ಅಲ್ಲದೆ ಪ್ರತಿಯೊಂದು ಪರೀಕ್ಷಾ ಕೇಂದ್ರಗಳಲ್ಲಿ ಸಿಸಿಟಿವಿ ಕ್ಯಾಮರಾಗಳನ್ನು ಅಳವಡಿಸಲಾಗಿದ್ದು, ಇದರ ವೀಕ್ಷಣೆಗೆ ಜಿಲ್ಲಾಧಿಕಾರಿ ಕಚೇರಿಯಲ್ಲಿ ವೆಬ್ ಕ್ಯಾಸ್ಟಿಂಗ್ ವ್ಯವಸ್ಥೆ ಮಾಡಲಾಗಿತ್ತು. ಅಧಿಕಾರಿಗಳು ಹಾಗೂ ಸಿಬ್ಬಂದಿ ಅಲ್ಲಿಂದಲೇ ಕುಳಿತು ಪರೀಕ್ಷಾ ಕೇಂದ್ರಗಳ ಚಲನವಲನಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದರು.

> ಪಿಯುಸಿ ಪರೀಕ್ಷೆಯು ಇಂದು ಸುಸೂತ್ರವಾಗಿ ನಡೆದಿದ್ದು, ವಿದ್ಯಾರ್ಥಿಗಳಿಂದ ನಕಲು ಅಥವಾ ಕಾಪಿ ಮಾಡುವ ಯಾವುದೇ ಪ್ರಕರಣಗಳು ನಡೆದಿಲ್ಲ. ಯಾವುದೇ ರೀತಿಯ ಪರೀಕ್ಷಾ ಅಕ್ರಮ ನಡೆಯದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗಿದೆ. ಪ್ರತಿಯೊಂದು ಪರೀಕ್ಷಾ ಕೇಂದ್ರದಲ್ಲಿ ಸಿಸಿಟಿವಿ ಕ್ಯಾಮರಾ ಅಳವಡಿಸಿದ್ದು, ಜಿಲ್ಲಾಧಿಕಾರಿ ಕಚೇರಿಯಲ್ಲಿರುವ ವೆಬ್ ಕ್ಯಾಸ್ಟಿಂಗ್ ಮೂಲಕ ಎಲ್ಲಾ ಪರೀಕ್ಷಾ ಕೇಂದ್ರಗಳ ಚಲನವಲನಗಳನ್ನು ಗಮನಿಸಲಾಗುತ್ತಿದೆ. ಹಾಗಾಗಿ ಯಾವುದೇ ತೊಂದರೆ ಇಲ್ಲದೆ ಕನ್ನಡ ಮತ್ತು ಅರೇಬಿಕ್ ಪರೀಕ್ಷೆಯು ಸುಲಲಿತವಾಗಿ ನಡೆಯಿತು.
> –ಎಂ.ಸಿ.ನಾಗಮ್ಮ, ಡಿಡಿಪಿಯು, ಮೈಸೂರು.

ಪರೀಕ್ಷಾ ಕೇಂದ್ರದ 200 ಮೀಟರ್ ವ್ಯಾಪ್ತಿಯಲ್ಲಿ ನಿಷೇಧಾಜ್ಞೆ ವಿಧಿಸಲಾಗಿತ್ತು. ಪ್ರತಿಯೊಂದು ಪರೀಕ್ಷಾ ಕೇಂದ್ರಕ್ಕೆ ಇಬ್ಬರು ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು. ಆಯಾ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್‌ಗಳು ಪರೀಕ್ಷಾ ಕೇಂದ್ರಗಳಿಗೆ ಭೇಟಿ ನೀಡಿ ಭದ್ರತೆಯನ್ನು ಪರಿಶೀಲನೆ ನಡೆಸಿದರು. ಪರೀಕ್ಷಾ ಕೇಂದ್ರದೊಳಗೆ ಪರೀಕ್ಷಾ ಸಿಬ್ಬಂದಿ ಹೊರತುಪಡಿಸಿ ಪೊಲೀಸರು ಯಾರನ್ನು ಒಳಗೆ ಬಿಡುತ್ತಿರಲಿಲ್ಲ. ಪರೀಕ್ಷಾ ಕೇಂದ್ರದ ಸನಿಹದ ಜೆರಾಕ್ಸ್ ಅಂಗಡಿಗಳನ್ನು ಮುಚ್ಚಿಸಿದ್ದರು. ಈ ಮೂಲಕ ಯಾವುದೇ ಪರೀಕ್ಷಾ ಅಕ್ರಮ ನಡೆಯದಂತೆ ಮೈಸೂರು ನಗರ ಹಾಗೂ ಜಿಲ್ಲೆಯಲ್ಲಿ ಹಲವು ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿತ್ತು.

ಕಬಿನಿ ಹಿನ್ನೀರಿನ ಅಕ್ರಮ ಕಟ್ಟಡಗಳ ತೆರವು, ರೈತರ ಬೇಡಿಕೆಗಳ ಈಡೇರಿಸುವ ಭರವಸೆ

ಅಹೋರಾತ್ರಿ ಧರಣಿ ಹಿಂಪಡೆದ ರೈತರು

ಮೈಸೂರು,ಫೆ.28(ಜಿಎ)–ಕಬಿನಿ ಹಿನ್ನೀರಿನಲ್ಲಿ ಅಕ್ರಮವಾಗಿ ನಿರ್ಮಿಸಿರುವ ಕಟ್ಟಡಗಳನ್ನು ತೆರವುಗೊಳಿಸುವುದರೊಂದಿಗೆ ರೈತರ ಬೇಡಿಕೆ ಈಡೇರಿಸುವುದಾಗಿ ಅಧಿಕಾರಿಗಳು ಭರವಸೆ ನೀಡಿರುವ ಹಿನ್ನೆಲೆಯಲ್ಲಿ ಕಾರಣ ಅಹೋರಾತ್ರಿ ಧರಣಿ ತಾತ್ಕಾಲಿಕವಾಗಿ ಹಿಂಪಡೆಯುತ್ತಿದ್ದೇವೆ ಎಂದು ಸಾಮೂಹಿಕ ನಾಯಕತ್ವ ಕರ್ನಾಟಕ ರಾಜ್ಯ ರೈತ ಸಂಘದ ಹೊನ್ನೂರು ಪ್ರಕಾಶ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗೋಮಾಳ, ಅರಣ್ಯ ಪ್ರದೇಶಗಳ ಬಗ್ಗೆ ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯುತ್ತೇವೆ. ಚಾಮರಾಜನಗರ ಜಿಲ್ಲೆಯಲ್ಲಿ ಪೋಡಿ ದುರಸ್ತಿ ಕಾರ್ಯಕ್ರಮ ಆಯೋಜಿಸುತ್ತೇವೆ ಎಂದು ಜಿಲ್ಲಾಧಿಕಾರಿಗಳು ಪ್ರಾದೇಶಿಕ ಆಯುಕ್ತರಿಗೆ ತಿಳಿಸಿದ್ದಾರೆ ಎಂದರು.


ಹೊನ್ನೂರು ಪ್ರಕಾಶ್

ಸರ್ಕಾರವು ರೈತರಿಗೆ 7 ಗಂಟೆ ವಿದ್ಯುತ್ ನೀಡುವುದಾಗಿ ಘೋಷಿಸಿದ್ದರು, ಸೆಸ್ಕ್ 2ರಿಂದ 3 ಗಂಟೆಯಷ್ಟೇ ವಿದ್ಯುತ್ ನೀಡುತ್ತಿತ್ತು. ಕೃಷಿ ಪಂಪ್‌ಸೆಟ್‌ಗಳಿಗೆ ಹಣ ಪಡೆಯುತ್ತಿದ್ದಾರೆ. ಈ ಕಿರುಕುಳ ನಿಲ್ಲಿಸಬೇಕು ಎಂದು ಬೇಡಿಕೆ ಇಟ್ಟಿದ್ದೆವು ಈ ಬಗ್ಗೆ ಕ್ರಮ ಕೈಗೊಳ್ಳುವುದಾಗಿ ತಿಳಿಸಿದ್ದಾರೆ. ಕಬಿನಿಯಲ್ಲಿ 32 ಕ್ಯುಸೆಕ್ ನೀರು ತಮಿಳುನಾಡಿಗೆ ಹರಿದು ಹೋಗುತ್ತಿದೆ. ಇದನ್ನು ಉಳಿಸಿಕೊಂಡರೆ ಮತ್ತಷ್ಟು ಕೃಷಿ ಭೂಮಿಗೆ ನೀರಾವರಿ ಒದಗಿಸಬಹುದು ಎಂಬ ಸಲಹೆಗೂ ಸ್ಪಂದಿಸುವ ಭರವಸೆ ನೀಡಿದ್ದಾರೆ ಎಂದರು.

ಕಬಿನಿ ಹಿನ್ನೀರಿನಲ್ಲಿ ಆರು ಅಕ್ರಮ ಕಟ್ಟಡ ನಿರ್ಮಾಣಗೊಂಡಿರುವುದನ್ನು ಗುರುತಿಸಿದ್ದೇವೆ. ತಿಂಗಳೊಳಗಾಗಿ ಎಲ್ಲವನ್ನೂ ತೆರವು ಮಾಡುತ್ತೇವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಅರಣ್ಯ ಸಚಿವ ಈಶ್ವರ ಖಂಡ್ರೆ ರೈತರ ಪರವಾಗಿ ಕೆಲಸ ಮಾಡುತ್ತಿದ್ದಾರೆ ಎಂದು ಅಂದುಕೊಂಡಿದ್ದೆವು. ಆದರೆ ಅವರು ಉದ್ಯಮಿಗಳನ್ನು ಭಯಪಡಿಸಲು ಸಫಾರಿ ಬಂದ್ ಮಾಡಿ, ಹಣ ಸಿಕ್ಕಿದ ಬಳಿಕ ಆದೇಶ ವಾಪಸ್ ಪಡೆದಿದ್ದಾರೆ. ಹೀಗಾಗಿ ಯಾವುದೇ ಕ್ಷಣದಲ್ಲೂ ಹೋರಾಟ ಆರಂಭಿಸಲು ಸಿದ್ಧ ಎಂದು ಹೇಳಿದರು. ವಕೀಲ ರವಿಕುಮಾರ್, ಮಂಜು ಕಿರಣ್, ಪರಮೇಶ್ವರ್, ಸುರೇಶ್, ಮಂಜಣ್ಣ ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಜಾತಿ ವ್ಯವಸ್ಥೆ, ಮೌಢ್ಯ ನೀಗುವ ಶಿಕ್ಷಣದ ಅಗತ್ಯವಿದೆ

ಬೆಂಗಳೂರು,ಫೆ.28(ಕೆಎಂಶಿ)– ಜಾತಿ ವ್ಯವಸ್ಥೆ, ಮೌಢ್ಯ ಹಾಗೂ ಕಂದಾಚಾರಗಳನ್ನು ಹೋಗಲಾಡಿಸುವ ಶಿಕ್ಷಣದ ಅಗತ್ಯವಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಪ್ರತಿಪಾದಿಸಿದ್ದಾರೆ.


ಸಿದ್ದರಾಮಯ್ಯ

ರಾಜ್ಯಮಟ್ಟದ ಶೈಕ್ಷಣಿಕ ಮಹಾಸಮ್ಮೇಳನ ಹಾಗೂ ಸುವರ್ಣ ಮಹೋತ್ಸವದಲ್ಲಿ ಮಾತನಾಡಿದ ಅವರು, ಸಮಾಜದಲ್ಲಿ ಬದಲಾವಣೆ ಮತ್ತು ಅಸಮಾನತೆ ಹೋಗಲಾಡಿಸಿ ಮುಖ್ಯವಾಹಿನಿಗೆ ತರುವಂತಹ ಶಿಕ್ಷಣ ನೀಡಬೇಕಿದೆ. ಆದರೆ, ಜಾತಿ ವ್ಯವಸ್ಥೆ ಭದ್ರವಾಗಿ ನೆಲೆಯೂರಿರುವುದರಿಂದ ಇಂತಹ ಶಿಕ್ಷಣ ನೀಡಲು ಸಾಧ್ಯವಾಗುತ್ತಿಲ್ಲ. ರಾಷ್ಟ್ರಕ್ಕೆ ಸ್ವಾತಂತ್ರ್ಯ ಬಂದ ಸಮಯದಲ್ಲಿ ಶೇ.12ರಷ್ಟಿದ್ದ ಶಿಕ್ಷಣ ಪ್ರಮಾಣ ಇಂದು ಶೇ.75ಕ್ಕೆ ತಲುಪಿದೆ. ಆದರೆ, ಸ್ವಾಸ್ಥ್ಯ ಸಮಾಜ ನಿರ್ಮಿಸುವ ಶಿಕ್ಷಣ ನೀಡಲು ನಮ್ಮಿಂದ ಸಾಧ್ಯವಾಗುತ್ತಿಲ್ಲ. ಮಾಜಿ ಪ್ರಧಾನಿ ಜವಾಹರ ಲಾಲ್ ನೆಹರೂ ಹೇಳಿದಂತೆ, ಮಕ್ಕಳು ತರಗತಿಗಳಲ್ಲೇ ತಮ್ಮ ಭವಿಷ್ಯ ರೂಪಿಸಿಕೊಳ್ಳಬೇಕು. ಅಲ್ಲಿಂದಲೇ ಮುಂದೆ ನಾವು ಎಂತಹ ಶಿಕ್ಷಣ ಪಡೆಯಬೇಕೆಂಬ ನಿರ್ಧಾರದೊಂದಿಗೆ ಹೆಜ್ಜೆ ಇಟ್ಟರೆ, ಉತ್ತಮ ಸಮಾಜ ನಿರ್ಮಾಣ ಮಾಡಲು ಸಾಧ್ಯ.

ಸರ್ಕಾರಗಳು ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಿದರೂ ನಾವು ಎಲ್ಲರಿಗೂ ಶಿಕ್ಷಣ ನೀಡಲು ಸಾಧ್ಯವಾಗುತ್ತಿಲ್ಲ. ಇದಕ್ಕೆ ಜಾತಿ ವ್ಯವಸ್ಥೆಯೇ ಮೂಲಕಾರಣ. ಸಮಾಜ ಬದಲಾಗದೆ ಅಸಮಾನತೆ ಹೋಗಲಾಡಿಸಲು ಸಾಧ್ಯವಾಗದು. ತುಳಿತಕ್ಕೆ ಒಳಗಾದವರನ್ನು ಮುಖ್ಯವಾಹಿನಿಗೆ ತರಲೂ ಸಾಧ್ಯವಾಗದು ಎಂದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

1.3.2026 ಭಾನುವಾರ, ಮಳೆ ನಕ್ಷತ್ರ: ಶತಭಿಷ 19.02.2026 ರಿಂದ 03.03.2026
ವಿಶ್ವಾವಸು ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಶುಕ್ಲ ಪಕ್ಷ,
ತಿಥಿ: ತ್ರಯೋದಶಿ, ನಕ್ಷತ್ರ: ಪುಷ್ಯ, ರಾಹುಕಾಲ: ಸಂಜೆ 4.30ರಿಂದ 6ರವರೆಗೆ

- **ಶ್ರೀ ಪ್ರಸನ್ನ ನಂಜುಂಡೇಶ್ವರಸ್ವಾಮಿ ದೇವಸ್ಥಾನ, ಧಾರ್ಮಿಕ ದತ್ತಿ ಇಲಾಖೆ :** ಶ್ರೀ ಪ್ರಸನ್ನ ನಂಜುಂಡೇಶ್ವರ ಸ್ವಾಮಿಯವರ ಬ್ರಹ್ಮೋತ್ಸವ, ಶ್ರೀ ಮದ್ದಿವ್ಯ ರಥಾರೋಹಣ ಮಹೋತ್ಸವ, ರಾತ್ರಿ ಗಜಾರೋಹಣ, ಸ್ಥಳ: ಶ್ರೀ ಪ್ರಸನ್ನ ನಂಜುಂಡೇಶ್ವರಸ್ವಾಮಿ ದೇವಸ್ಥಾನ, ಹಳೇ ಸಂತೇಪೇಟೆ
- **ಎನ್.ಆರ್. ಮೊಹಲ್ಲಾ ಸಂಗೀತ ಸಭಾ ಚಾರಿಟಬಲ್ ಟ್ರಸ್ಟ್ :** ವಾರ್ಷಿಕ ಸಂಗೀತೋತ್ಸವ, ಶ್ರೀ ತ್ಯಾಗರಾಜರ ಮತ್ತು ಶ್ರೀ ಪುರಂದರದಾಸರ ಆರಾಧನಾ ಮಹೋತ್ಸವ, ಬೆಳಗ್ಗೆ 9 ರಿಂದ ನಾದಸ್ವರ ಮತ್ತು ಶ್ರೀ ತ್ಯಾಗರಾಜರ ಶ್ರೀ ಪುರಂದರದಾಸರ ಕೃತಿಗಳನ್ನು ಹಾಡಲು ಅವಕಾಶ, ಬೆಳಗ್ಗೆ 11 ರಿಂದ ವಿದುಷಿ ರೇವತಿ ಕಾಮತ್, ವಿದ್ವಾನ್ ವಿ.ಆರ್. ರಾಜಗೋಪಾಲ್ ಅವರಿಗೆ ಸನ್ಮಾನ, ಮಧ್ಯಾಹ್ನ 12 ರಿಂದ ಶ್ರೀ ತ್ಯಾಗರಾಜರ ಪಂಚರತ್ನ ಕೃತಿಗಳ ಗೋಷ್ಠಿಗಾಯನ, ಮಧ್ಯಾಹ್ನ 1.15ಕ್ಕೆ ಮಹಾಮಂಗಳಾರತಿ, ಮಧ್ಯಾಹ್ನ 1.30ಕ್ಕೆ ಪ್ರಸಾದ ವಿನಿಯೋಗ, ಸ್ಥಳ:ಗುರುಭವನ, ಶ್ರೀ ಶೃಂಗೇರಿ ಶಂಕರ ಮಠ, ಫೋರ್ಟ್ ಮೊಹಲ್ಲಾ.
- **ಶ್ರೀ ಕೃಷ್ಣ ಗಾನಸಭಾ :** ತ್ಯಾಗರಾಜ ಮತ್ತು ಪುರಂದರದಾಸರ ಆರಾಧನಾ ಮಹೋತ್ಸವ, ಡಾ. ಸುಕನ್ಯಾ ಪ್ರಭಾಕರ್ ನೇತೃತ್ವದಲ್ಲಿ ಗೋಷ್ಠಿ ಗಾಯನ, ವಿದ್ವಾನ್ ಎನ್. ಶ್ರೀನಾಥ್ ಅವರಿಂದ ಗಾಯನ, ವಿದ್ವಾನ್ ತಾಂಡವಮೂರ್ತಿ–ವಯೋಲಿನ್, ವಿದ್ವಾನ್ ಎಂ.ಆರ್. ಮಂಜುನಾಥ್–ಮೃದಂಗ, ವಿದ್ವಾನ್ ಎಸ್. ಮಂಜುನಾಥ್–ಘಟಂ, ಸ್ಥಳ: ಆಳ್ವಾರ್ ಕಲಾಭವನ, ಬೆಳಗ್ಗೆ 9.30 ರಿಂದ.
- **ಹೊಯ್ಸಳ ಕನ್ನಡ ಸಂಘ, ಸವಿಗನ್ನಡ ಪತ್ರಿಕಾ ಬಳಗ :** ಲೇಖಕಿ ಪಿ. ಕಾತ್ಯಾಯಿನಿ ವಿರಚಿತ ಬಚ್ಚಿಟ್ಟ ಭಾವಗಳು, ಚಿಕ್ಕಕಥೆಗಳ ಚುಕ್ಕಿ ರಂಗೋಲಿ ಕೃತಿಗಳ ಲೋಕಾರ್ಪಣೆ ಸಮಾರಂಭ, ಉದ್ಘಾಟನೆ : ಹಿರಿಯ ಲೇಖಕ ಡಿ.ಬಿ. ರಾಘವೇಂದ್ರರಾವ್, ಕೃತಿಗಳ ಲೋಕಾರ್ಪಣೆ : ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಅಧ್ಯಕ್ಷತೆ : ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಉಪಸ್ಥಿತರು : ಹಿರಿಯ ಪತ್ರಕರ್ತ ಗಣೇಶ್ ಪ್ರಸಾದ್ ಪಾಂಡೇಲು, ರಂಗನಾಥ್ ಮೈಸೂರು, ಬಾಳಗುಣಸೆ ಮಂಜುನಾಥ್, ಸ್ಥಳ : ಜಿಲ್ಲಾ ಸಾಹಿತ್ಯ ಭವನ, ವಿಜಯನಗರ 1ನೇ ಹಂತ, ಬೆಳಗ್ಗೆ 10 ರಿಂದ.
- **ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತ್ಯೋತ್ಸವ ಸಮಿತಿ :** ಬೆಳಗ್ಗೆ 8ರಿಂದ ಶ್ರೀ ಜಗದ್ಗುರು ಪಂಚಾಚಾರ್ಯರ ಯುಗಮಾನೋತ್ಸವ, ರುದ್ರಾಭಿಷೇಕ, ಅಷ್ಟೋತ್ತರ ಮತ್ತು ಮಹಾಮಂಗಳಾರತಿ, ಬೆಳಗ್ಗೆ 10ರಿಂದ ಸಾಂಸ್ಕೃತಿಕ ಕಾರ್ಯಕ್ರಮ ಮತ್ತು ಸಭಾ ಕಾರ್ಯಕ್ರಮ, ಸಾನ್ನಿಧ್ಯ: ಡಾ. ಮುಮ್ಮಡಿ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ಅಧ್ಯಕ್ಷತೆ: ಶಾಸಕ ಕೆ. ಹರೀಶ್‌ಗೌಡ, ಉಪಸ್ಥಿತರು: ಸಮಿತಿ ಅಧ್ಯಕ್ಷ ಬಿ.ಎಸ್.ಶ್ರೀಶೈಲ, ಸಂಸದ ಯದುವೀರ್ ಒಡೆಯರ್, ಶಾಸಕ ಟಿ.ಎಸ್‌ಶ್ರೀವತ್ಸ, ಜಿಲ್ಲಾ ವೀರಶೈವ ಮಹಾಸಭಾ ಅಧ್ಯಕ್ಷ ಹಿನಕಲ್ ಬಸವರಾಜು, ಡಾ.ಮೀನಾಕ್ಷಿ ಖಂಡಿ ಮಠ, ಸ್ಥಳ: ಕಲಾಮಂದಿರ.
- **ಶ್ರೀ ಶಾಂತಮಲ್ಲಪ್ಪ ಸ್ನೇಹ ಬಳಗ :** ನಿವೃತ್ತ ಡಿವೈಎಸ್ಪಿ ಶಾಂತಮಲ್ಲಪ್ಪ ಅವರಿಗೆ ಅಭಿನಂದನಾ ಸಮಾರಂಭ, ಸಾನ್ನಿಧ್ಯ: ಶ್ರೀ ಆದಿಚುಂಚನಗಿರಿ ಶಾಖಾ ಮಠದ ಕಾರ್ಯದರ್ಶಿ ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ಅಭಿನಂದನಾ ಭಾಷಣ : ಖ್ಯಾತ ವಾಗ್ಮಿ ಹಾಗೂ ಸಂಸ್ಕೃತಿ ಚಿಂತಕ ಪ್ರೊ ಎಂ. ಕೃಷ್ಣೇಗೌಡ, ಮುಖ್ಯ ಅತಿಥಿಗಳು : ಪಂಚಾಯತ್ ರಾಜ್ ನಿವೃತ್ತ ನಿರ್ದೇಶಕ ಎಂ.ಕೆ. ಕೆಂಪೇಗೌಡ, ಸ್ಪೆಷಲ್ ಆಕ್ಷನ್ ಫೋರ್ಸ್ (ಎಸ್‌ಎಎಫ್) ಡಿಐಜಿಪಿ ಡಾ. ಎ.ಎನ್. ಪ್ರಕಾಶ್‌ಗೌಡ, ಚಾಮರಾಜನಗರ ಎಸ್ಪಿ ಎಂ. ಮುತ್ತುರಾಜ್, ಸ್ಥಳ: ರಿಯೋ ಮೆರಿಡಿಯನ್ ಸಭಾಂಗಣ, ಹೈವೇ ಸರ್ಕಲ್ ಹತ್ತಿರ, ಬೆಳಗ್ಗೆ 10.30ಕ್ಕೆ
- **ಶ್ರೀ ಶಾರದಾ ಗಾನ ಕಲಾ ಮಂದಿರ :** ಶ್ರೀ ಕನಕದ, ಪುರಂದರ ಮತ್ತು ತ್ಯಾಗರಾಜರ ಆರಾಧನಾ ಮಹೋತ್ಸವ, ಪಂಚರತ್ನ ಕೃತಿ ಗೋಷ್ಠಿ ಗಾಯನ, ಮಹಾಪ್ರಸಾದ, ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ, ಸ್ಥಳ: ಗಂಗೂಬಾಯಿ ಹಾನಗಲ್ ವಿವಿ ಸಭಾಂಗಣ, ಲಕ್ಷ್ಮೀಪುರಂ, ಬೆಳಗ್ಗೆ 10.30ಕ್ಕೆ
- **ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮೈಸೂರು ಮಹಾನಗರ ಪಾಲಿಕೆ, ಶ್ರೀ ರೇಣುಕಾಚಾರ್ಯ ಜಯಂತ್ಯೋತ್ಸವ ಸಮಿತಿ :** ಶ್ರೀ ರೇಣುಕಾಚಾರ್ಯ ಜಯಂತಿ, ಘನ ಉಪಸ್ಥಿತರು : ಮುಖ್ಯಮಂತ್ರಿ ಸಿದ್ದರಾಮಯ್ಯ, ಕೇಂದ್ರ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಉದ್ಘಾಟನೆ : ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಉಪಸ್ಥಿತರು: ಸಚಿವ ಕೆ.ವೆಂಕಟೇಶ್, ಶಾಸಕರಾದ ಅನಿಲ್‌ಕುಮಾರ್, ರಮೇಶ್ ಬಂಡಿಸಿದ್ದೇಗೌಡ, ಅಧ್ಯಕ್ಷತೆ: ಶಾಸಕ ಕೆ.ಹರೀಶ್‌ಗೌಡ, ಮುಖ್ಯ ಅತಿಥಿಗಳು: ಸಂಸದರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸುನೀಲ್ ಬೋಸ್, ಡಾ. ಮಾನಸ, ಎಂ. ರಾಮಪ್ಪ, ಎಚ್.ಡಿ.ಗಣೇಶ್, ಎನ್.ರಂಗಸ್ವಾಮಿ, ಸ್ಥಳ: ಕರ್ನಾಟಕ ಕಲಾಮಂದಿರ, ಬೆಳಗ್ಗೆ 10.30ಕ್ಕೆ
- **ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಪುಸ್ತಕ ಪ್ರಾಧಿಕಾರ, ಜಿಲ್ಲಾ ಜಾಗೃತಿ ಸಮಿತಿ :** ಡಾ. ರಾಜಶೇಖರ ಕದಂಬ ಅವರ ಮನೆಯಲ್ಲಿ ಮನೆಗೊಂದು ಗ್ರಂಥಾಲಯ ಅನುಷ್ಠಾನ ಸಮಾರಂಭ, ಉದ್ಘಾಟನೆ: ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ. ಮಾನಸ, ಪ್ರಗತಿಪರ ಚಿಂತಕ ಪ್ರೊ. ಕಾಳೇಗೌಡ ನಾಗವಾರ ಅವರಿಂದ ಪುಸ್ತಕ ಸಂಸ್ಕೃತಿ ಕುರಿತು ಉಪನ್ಯಾಸ, ಅಧ್ಯಕ್ಷತೆ : ಮನೆಗೊಂದು ಗ್ರಂಥಾಲಯ ಅನುಷ್ಠಾನ ಸಮಿತಿ ಸಂಚಾಲಕ ಎಂ. ಚಂದ್ರಶೇಖರ್, ಉಪಸ್ಥಿತರು : ರಂಗಕರ್ಮಿ ಡಾ. ರಾಜಶೇಖರ ಕದಂಬ, ಶರಣ ದೇವರಾಜು ಪಿ. ಚಿಕ್ಕಹಳ್ಳಿ, ಸ್ಥಳ: 435, ದಿವ್ಯಶ್ರೀ, 6ನೇ ಕ್ರಾಸ್, ಕೃಷ್ಣಮೂರ್ತಿಪುರಂ, ಬೆಳಗ್ಗೆ 11ಕ್ಕೆ
- **ಬಸವ ಸಮಿತಿ :** ಶರಣ ಸಂಗಮ–315, ವಿಶ್ರಾಂತ ಹಿರಿಯ ಉದ್ಘೋಷಕರಾದ ಪ್ರಭುಸ್ವಾಮಿ ಮಳಿಮಠ ಅವರಿಂದ ವಚನಗಳಲ್ಲಿ ಮಾತಿನ ಮಹತ್ವ ಕುರಿತು ಉಪನ್ಯಾಸ, ಅಧ್ಯಕ್ಷತೆ : ಬಸವ ಸಮಿತಿ ಅಧ್ಯಕ್ಷ ಹೆಚ್.ವಿ. ಬಸವರಾಜು, ಸ್ಥಳ: ಬಸವ ಭವನ, ವಿಜಯನಗರ 1ನೇ ಹಂತ, ಬೆಳಗ್ಗೆ 11ಕ್ಕೆ.
- **ಸಮತಾ ಅಧ್ಯಯನ ಕೇಂದ್ರ, ಕರ್ನಾಟಕ ಲೇಖಕಿಯರ ಸಂಘ, ಜಿಲ್ಲಾ ಘಟಕ :** ಪ್ರತಿಭಾ ನಂದಕುಮಾರ್ ಕೃತಿಗಳ ಬಿಡುಗಡೆ, ಸಂವಾದ, ಅಧ್ಯಕ್ಷತೆ: ಸಮತಾ ಅಧ್ಯಯನ ಕೇಂದ್ರದ ಅಧ್ಯಕ್ಷೆ ಡಾ.ಸಬಿಹಾ ಭೂಮಿಗೌಡ, ಪ್ರಸ್ತಾವನೆ: ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಉಷಾ ನರಸಿಂಹನ್, ಕೃತಿಗಳ ಬಿಡುಗಡೆ: ಸಂಘದ ಅಧ್ಯಕ್ಷೆ ಡಾ.ಆರ್.ಸುನಂದಮ್ಮ, ಸ್ಥಳ: ಶ್ರೀರಂಗ ಸಭಾಂಗಣ, ರಂಗಾಯಣ, ಮಧ್ಯಾಹ್ನ 2.30ಕ್ಕೆ
- **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ :** ವಿಶೇಷ ಪ್ರವಚನ ಕಾರ್ಯಕ್ರಮ, ವಿದ್ವಾನ್ ಖೇಡಾ ವೇದವ್ಯಾಸಾಚಾರ್ ಅವರಿಂದ ರುಕ್ಮಿಣೀಶವಿಜಯ ಪ್ರವಚನ, ಸ್ಥಳ: ಶ್ರೀ ರಾಘವೇಂದ್ರಸ್ವಾಮಿ ಮಠ, ಜಯಲಕ್ಷ್ಮೀಪುರಂ, ಸಂಜೆ 5ಕ್ಕೆ.
- **ರಂಗಾಯಣ :** ರಂಗಾಯಣ ರೆಪರ್ಟರಿ ಕಲಾವಿದರಿಂದ ಅಂಬೇಡ್ಕರ್ ಕೊಲಾಜ್ ನಾಟಕ ಪ್ರದರ್ಶನ, ನಿರ್ದೇಶನ : ಚಿದಂಬರರಾವ್ ಜಂಬೆ, ಸ್ಥಳ: ಭೂಮಿಗೀತ ರಂಗಮಂದಿರ, ಸಂಜೆ 6.30ಕ್ಕೆ.
- **ಅಭಿಯಂತರರು :** ರಾಷ್ಟ್ರೀಯ ರಂಗ ಉತ್ಸವ, ಥಿಯೇಟರ್ ನಿಶಾ, ಚೆನ್ನೈ ಅರ್ಪಿಸುವ ಯಯಾತಿ (ಇಂಗ್ಲೀಷ್) ನಾಟಕ ಪ್ರದರ್ಶನ, ನಿರ್ದೇಶನ : ವಿ. ಬಾಲಕೃಷ್ಣನ್, ಸ್ಥಳ: ಕಿರು ರಂಗಮಂದಿರ, ಸಂಜೆ 7ಕ್ಕೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಡಾ.ಡಿ.ಸಿ.ಗೀತಾ, 6.15 ಗೀತಾರಾಧನ, 6.35 ಮತ್ತುಸಂಜೆ 6.10 ಸಿನೆಮಾ ಯಾನ– ಜನ ಮೆಚ್ಚಿದ ಕನ್ನಡ ಚಿತ್ರಗಳ ನೆನಪಿನ ಮಾಲೆ, ಪ್ರಸ್ತುತಿ : ಶ್ರೀನಿವಾಸ್ ಪ್ರಸಾದ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ : ಕೆ.ಶ್ರೇಯಾ, ಎ.ಎಸ್. ನಾಗಲಕ್ಷ್ಮಿ ಹಾಗೂ ಟಿ.ಎಸ್. ಸ್ನೇಹ, ವ್ಯಾಖ್ಯಾನ–ಡಾ. ಬಿ.ವಿ. ವಸಂತಕುಮಾರ್, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ ಡಾ.ಎಸ್.ಎಲ್.ಭೈರಪ್ಪ ಅವರ 'ದೂರ ಸರಿದರು' ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ –ಉಮೇಶ್ ಎಸ್.ಎಸ್., 8.30 ಚಿತ್ರಗೀತೆಗಳು, 9.05 ಕ್ಯಾನ್ಸರ್ ಕುರಿತ ಮಿಥ್ಯೆಗಳು, ಪ್ರಾಯೋಜಕರು–ಇಂಡಿಯನ್ ಕ್ಯಾನ್ಸರ್ ಸೊಸೈಟಿ, ಕರ್ನಾಟಕ ಛಾಪ್ಟರ್, 9.40 ನಮ್ಮ ಆರೋಗ್ಯ–ವಿಶ್ವಶ್ರವಣ ದಿನದ ಸಂದೇಶ, ಧ್ಯೇಯವಾಕ್ಯ ಹಾಗೂ ಮಹತ್ವ ಈ ಕುರಿತು ಮೈಸೂರಿನ ಜೆ.ಎಸ್.ಎಸ್ ವಾಕ್ ಮತ್ತು ಶ್ರವಣ ಸಂಸ್ಥೆಯ ಆಡಿಯಾಲಜಿ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ವಿಪಿನ್ ಘೋಷ್ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ತೇಜಸ್ವಿನಿ ಗಿರೀಶ್, 10.00 ಕೇಳಿಗಿಳಿಗಳೇ–ಕಥೆ ಹೇಳ್ತಿಯೋ ಹಾಡು ಹೇಳ್ತಿಯೋ–ನೇರ ಫೋನ್ ಇನ್ ಕಾರ್ಯಕ್ರಮ, 10.30 ಮಕ್ಕಳ ಮಂಟಪ ಪರೀಕ್ಷೆಗೆ ಸಿದ್ಧರಾಗೋಣ ಬನ್ನಿ ಎಸ್.ಎಸ್.ಎಲ್.ಸಿ ಪರೀಕ್ಷಾ ಸಿದ್ಧತೆ ಕುರಿತು ಬಾನುಲಿ ಸರಣಿ ಕಾರ್ಯಕ್ರಮ. ವಿಷಯ–ಹಿಂದಿ, ಭಾಗವಹಿಸುವವರು–ಮೈಸೂರಿನ ಜೈಪುರ ಹೋಬಳಿ ಹಾರೋಹಳ್ಳಿಯ ಸರ್ಕಾರಿ ಪ್ರೌಢಶಾಲೆಯ ಶಿಕ್ಷಕಿಯಾದ ಲಕ್ಷ್ಮಿ.ಜಿ., ಇವರೊಂದಿಗೆ ಭಾಗವಹಿಸುತ್ತಾರೆ–ದಿಗ್ವಿಜಯ್.ಬಿ., 11.00 ಮಿಶ್ರಮಾಧುರ್ಯ

ಮಧ್ಯಾಹ್ನ: 12.05 ವನಿತಾ ವಿಹಾರ–ಆತ್ಮವಿಶ್ವಾಸದ ಹೆಜ್ಜೆಗಳು–ಇಮೇಜ್ ಕನ್ಸಲ್ಟೆಂಟ್ ಶ್ವೇತಾ ನರಸಿಂಹ ಉಪಾಧ್ಯಾಯ ಅವರೊಂದಿಗೆ ಮಾತುಕತೆ, 12.35 ಭಕ್ತಿಗೀತೆಗಳು: ಅಮೃತಾ.ವಿ, 12.45 ಜನಪದ ಸಂಗೀತ: ಚಾಮರಾಜನಗರ ಜಿಲ್ಲೆ ದೊಡ್ಡರಾಯ ಪೇಟೆಯ ಮಹದೇವಸ್ವಾಮಿ ಸಂಗಡಿಗರಿಂದ ತತ್ವಪದಗಳು, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ ಪ್ರಧಾನಮಂತ್ರಿ ವಿಕಸಿತ ಭಾರತ ರೋಜಗಾರ್ ಯೋಜನೆ ಕುರಿತು ಮಾಹಿತಿ ನೀಡುತ್ತಾರೆ ಶರಶ್ಚಂದ್ರ ರಾನಡೆ, 1.20 ಭಾವಗೀತೆಗಳು–ಕಿರಣ್.ಎಚ್.ಪಿ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ನಕ್ಷತ್ರಲೋಕ–ಸಿನಿ ಸೆಲೆಬ್ರಿಟಿಗಳೊಂದಿಗೆ ಮಾತುಕತೆ, ಭಾಗವಹಿಸುವವರು: ಹಿರಿಯ ನಟ ಅಭಿಜಿತ್ ಅವರೊಂದಿಗೆ ಸಂವಾದ, ಪ್ರಸ್ತುತಿ–ಶ್ರೀಮಾನ್.ಎಸ್., 3.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ.ರವೀಂದ್ರಕುಮಾರ್, 3.45 ಯಕ್ಷಗಾನ–ತಾಳಮದ್ದಲೆ, ಪ್ರಸಂಗ–ಮೋಕ್ಷ ಸಂಗ್ರಾಮ, ಪ್ರಸ್ತುತಿ–ಧರ್ಮಸ್ಥಳದ ಬಿ. ಭುಜಬಲಿ ಮತ್ತು ಸಂಗಡಿಗರು, 4.45 ಚಿತ್ರಗೀತೆಗಳು, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.30 ಐಸಿಸಿ ಟಿ20 ಪುರುಷರ ವಿಶ್ವಕಪ್ ಪಂದ್ಯಾವಳಿ–2026 ಭಾರತ ಹಾಗೂ ವೆಸ್ಟ್ ಇಂಡೀಸ್ ತಂಡಗಳ ನಡುವೆ ಕೋಲ್ಕತ್ತಾದ ಈಡನ್ ಗಾರ್ಡನ್‌ನಲ್ಲಿ ನಡೆಯುವ ಸೂಪರ್ 8 ಹಂತದ ಪಂದ್ಯದ ವೀಕ್ಷಕ ವಿವರಣೆ.

ಪಿ.ಎಂ. ಶ್ರೀ ಕೇಂದ್ರೀಯ ವಿದ್ಯಾಲಯ ಮೈಸೂರು
ಜಿ.ಐ.ಟಿ.ಬಿ ಪ್ರೆಸ್ ಕ್ಯಾಂಪಸ್. ಸಿದ್ದಾರ್ಥನಗರ. ಮೈಸೂರು–570011
पी.एम.श्री केन्द्रीय वद्यिालय मैसूरु,
जी.आई.टी.बी प्रेस परसिर, सद्धिार्थनगर, मैसूरु - 570011
(शक्षिा मंत्रालय, भारत सरकार के अधीन एक स्वायत्त नकिाय)
PM SHRI KENDRIYA VIDYALAYA, MYSURU,
GITB, Press Campus, Siddharthanagar, Mysuru - 570011
(An Autonomous Body under MOE, Govt. of India)
Tel:0821-2473515, Website : https://mysore.kvs.ac.in
E-mail: kvmysore@gmail.com

F.NO.13-49/PM SHRI KVMys/2025-26 Date: 24.2.2026

2026–27ನೇ ಸಾಲಿನ ಗುತ್ತಿಗೆ ಶಿಕ್ಷಕರಿಗಾಗಿ ಸಂದರ್ಶನ

2026–2027ರ ಅವಧಿಗೆ ಒಪ್ಪಂದದ ಆಧಾರದ ಮೇಲೆ ಭಾಗಕಾಲಿಕ ಶಿಕ್ಷಕರ ನೇಮಕಾತಿ ಪಟ್ಟಿ ತಯಾರಿಸಲು ವಿವಿಧ ಹುದ್ದೆಗಳಿಗೆ 10.3.2026ರಂದು ಪಿ.ಎಂ. ಶ್ರೀ ಕೇಂದ್ರೀಯ ವಿದ್ಯಾಲಯದಲ್ಲಿ ಸಂದರ್ಶನ ನಡೆಯಲಿದೆ.
ನೋಂದಣಿ ಸಮಯ – ಬೆಳಿಗ್ಗೆ 9:30 ರಿಂದ 10:30 ರವರೆಗೆ.
ಸಂದರ್ಶನ ಸಮಯ – ಬೆಳಿಗ್ಗೆ 11:00 ರಿಂದ

ದಿನಾಂಕ	ಬೊಧಕ ಹುದ್ದೆ ಮತ್ತು ವಿವರ
10.3.2026	ಹುದ್ದೆ: ಪಿಜಿಟಿ–ಭೌತಶಾಸ್ತ್ರ, ವಾಣಿಜ್ಯ, ಜೀವಶಾಸ್ತ್ರ, ರಸಾಯನಶಾಸ್ತ್ರ, ಹಿಂದಿ,ಇಂಗ್ಲಿಷ್, ಅರ್ಥಶಾಸ್ತ್ರ, ಕಂಪ್ಯೂಟರ್ ವಿಜ್ಞಾನ, ಗಣಿತ
	ಹುದ್ದೆ: ಟಿಜಿಟಿ– ಸಂಸ್ಕೃತ, ಸಮಾಜ ವಿಜ್ಞಾನ, ವಿಜ್ಞಾನ, ಇಂಗ್ಲಿಷ್, ಎಐ, ಹಿಂದಿ, ಗಣಿತ
	ಹುದ್ದೆ: ಪ್ರಾಥಮಿಕ ಶಿಕ್ಷಕ
	ಇತರ ಹುದ್ದೆಗಳು: ಕನ್ನಡ ಅಧ್ಯಾಪಕರು, ಕಂಪ್ಯೂಟರ್ ಬೋಧಕ, ಕೌನ್ಸಿಲರ್, ಕ್ರೀಡಾ ತರಬೇತುದಾರ. ನೃತ್ಯ ಶಿಕ್ಷಕರು, ಯೋಗ, ಕಲಾ ಶಿಕ್ಷಕರು, ನರ್ಸ್ ATL ಲ್ಯಾಬ್ ಬೋಧಕ, ವಿಶೇಷ ಶಿಕ್ಷಕರು.
	1. ಅಭ್ಯರ್ಥಿಗಳು ನೋಂದಣಿಗಾಗಿ ಸರಿಯಾಗಿ ಭರ್ತಿ ಮಾಡಿದ ಅರ್ಜಿ ನಮೂನೆ, ಅರ್ಹತೆಯ ಮೂಲ ಪ್ರಮಾಣಪತ್ರಗಳ ಒಂದು ಸೆಟ್ ಸ್ವಯಂ ದೃಢೀಕರಿಸಿದ ಪ್ರಮಾಣಪತ್ರದ ಪ್ರತಿಗಳು ಮತ್ತು 2 ಪಾಸ್‌ಪೋರ್ಟ್ ಗಾತ್ರದ ಛಾಯಾಚಿತ್ರಗಳೊಂದಿಗೆ ಹಾಜರಾಗಬೇಕು. 2. ಸಂದರ್ಶನಕ್ಕೆ ಯಾವುದೇ ಟಿಎ/ಡಿಎ ಒದಗಿಸಲಾಗುವುದಿಲ್ಲ. 3. ಅರ್ಜಿ ನಮೂನೆಯನ್ನು ಅರ್ಹತಾ ಮಾನದಂಡಗಳು, ಕನಿಷ್ಠ ಅರ್ಹತೆ, ಸಂಬಳ ಇತ್ಯಾದಿಗಳನ್ನು ಡೌನ್‌ಲೋಡ್ ಮಾಡಲು. ದಯವಿಟ್ಟು ವೆಬ್‌ಸೈಟ್‌ಗೆ ಭೇಟಿ ನೀಡಿ: https://mysore.kvs.ac.in/

ಸಹಿ/– ಪ್ರಾಂಶುಪಾಲರು, ಪಿ.ಎಂ ಶ್ರೀ ಕೇಂದ್ರೀಯ ವಿದ್ಯಾಲಯ
ಸಿದ್ಧಾರ್ಥನಗರ, ಮೈಸೂರು–570011





WANTED

For a Pvt Ltd Company in Metagalli Industrial Estate, Mysore -570016
- **STORE KEEPER** – B.Com/ BBA, Engineering Stores (Fasteners, Tools, Raw Materials)
- **MECHANICAL DESIGN ENGINEER** – BE- Mech, Proficient in Solidworks, AutoCad, Inventor, etc.
- **AUTOMATION ENGINEER** - BE, E&C, Proficient in process control Instrumentation, with experience in HMI, PLC, SCADA
- **MECHANICAL ENGINEER** – BE, Mech, with Shop floor experience.

EXPERIENCE : 3-5 YEARS
Call : 93435 82235 / 97928 82235

ಹೊಸ ಮನೆ ಮಾರಾಟಕ್ಕಿದೆ

22 ಚದರವುಳ್ಳ ಮೂರು ಬೆಡ್ ರೂಂ ಇರುವ ಮನೆ ಜಯನಗರದಲ್ಲಿ ಇದೆ. ಸಸ್ಯಹಾರಿಗಳಿಗೆ ಮಾತ್ರ
9945248951

Hi! TAXI
ONLY ONE WAY TAXI CHARGE
MYSORE to BANGALORE
City drop or Pick up
BANGALORE to MYSORE
Airport drop or Pick up
MYSURU
9611177599

ಹೊಸ ಮನೆ ಮಾರಾಟಕ್ಕಿದೆ

30 X 40 ದಕ್ಷಿಣ ದಿಕ್ಕು, ಪೂರ್ವ ಬಾಗಿಲು 3 ಅಂತಸ್ತಿನ ಆಧುನಿಕ ಸೌಲಭ್ಯವುಳ್ಳ ಮನೆ ವಾಸ್ತು ಪ್ರಕಾರವಿರುವ (ಕೆಳಮಹಡಿ, 1ನೇ ಮತ್ತು 2ನೇ ಮಹಡಿಯ ಮನೆ ಪಿಎನ್‌ಟಿ ಲೇಔಟ್, ಡಾ. ರಾಜಕುಮಾರ್ ರಸ್ತೆ ಹತ್ತಿರ, ಮೈಸೂರು
Call: 9035666078

HOUSE FOR SALE

30x40, W/N Door, 2 BHK, 8 years old, Single floor, Dattagalli, Mysore.
RS. 1.60 CRORE SLIGHTLY NEGO. Brokers Excuse
96631 66809

Mega Walk-in Drive

rProcess Works. For You.


rProcess is hiring for Data Annotation Specialists.

Role Overview: Work on Artificial Intelligence projects by creating, labeling, and managing high-quality data that powers AI systems.

Who Can Apply: Candidate with Strong analytical and logical thinking, Computer savvy, quality-focused and result-oriented.

Walk-in with all Documents:
2nd March 2026 till 6th March 2026 (9AM to 3 PM)
Preferred Qualifications: Any Degree / Diploma.
WALK-IN VENUE:
1. Gunamba towers No. 579/2, D Subbaiah Road, Lakshmipuram, Mysuru - 04
2. "Meghna Haven", T N Pura Main Rd, Nadanahalli, Mysuru-28

Contact for more info - 99800 07732 / 7829573628 /7975364055
Apply to Email: careers@rprocess.net
www.rprocess.ai



ಇಂಪೀರಿಯಲ್ ಸಿಟಿ

HP HYLAND PROPERTIES
ಕೇವಲ ₹749/ ಪ್ರತಿ ಚದರ ಅಡಿ
ಮೆಗಾ ರೆಸಿಡೆನ್ಸಿಯಲ್ ವಿಲ್ಲಾ ಟೌನ್‌ಶಿಪ್
ಮೈಸೂರು - ಹುಣಸೂರು ಮುಖ್ಯರಸ್ತೆ, ಮೈಸೂರು
ಬುಕಿಂಗ್ ಪ್ರಾರಂಭವಾಗಿದೆ
ಇಲವಾಲ ಸ್ಯಾಟ್‌ಲೈಟ್ ಬಸ್ ನಿಲ್ದಾಣದಿಂದ ಕೇವಲ 4 ಕಿ.ಮೀ
MUDA LIMITS
ಸುಲಭ 4 ಕಂತುಗಳ ಸೌಲಭ್ಯವಿದೆ
30x40 | 30x50
40x60 | 50x80
ಅಚತೆಯ ಎಲ್ಲಾ ಸೌಲಭ್ಯಗಳನ್ನು ಒಳಗೊಳ್ಳುವ ನಿವೇಶನಗಳು
ಹೈಲ್ಯಾಂಡ್ ಪ್ರಾಪರ್ಟೀಸ್
ಕಾಳಿದಾಸ ರಸ್ತೆ, ವಿಜಯನಗರ 1ನೇ ಹಂತ, ಮೈಸೂರು
90713 86615
95133 01854

SITES FOR SALE

30x40 sites in D & E Block Vijayanagar 3rd Stage
80x43 Commercial Site
South-East corner in 80ft-60ft road In middle of Vasathnagar
40 x 50 North- East corner park facing premium Site for Rs. 5,100/-
40 x 75 Site Rs. 3,750/-
47 x 83 Site Rs. 3,750/-
Brokers Excuse
Contact: 89702 15128

MM CONSTRUCTIONS

ನಿಮ್ಮ ಕನಸಿನ ಮನೆಯನ್ನು ಗುಣಮಟ್ಟದ ನಿರ್ಮಾಣದೊಂದಿಗೆ ಕಟ್ಟಿಸಲು ಇಂದೇ ಸಂಪರ್ಕಿಸಿ! ಮೈಸೂರು ಹಾಗೂ ಸುತ್ತಮುತ್ತ ಮನೆ ಹಾಗೂ ವಾಣಿಜ್ಯ ಕಟ್ಟಡಗಳ ನಿರ್ಮಾಣ ಸೇವೆಗಳು.
20+ ವರ್ಷಗಳ ವಿಶ್ವಾಸಾರ್ಹ ಅನುಭವ ಟರ್ನ್‌ಕಿ ಯೋಜನೆಗಳು ಪೂರ್ಣ ಜವಾಬ್ದಾರಿಯೊಂದಿಗೆ
99866 21579 , 76249 87329
"ಗುಣಮಟ್ಟ । ನಿಷ್ಠೆ । ಸಮಯಪಾಲನೆ । ನಮ್ಮ ಬದ್ಧತೆ"

46
ಮೈಸೂರು ಮಿತ್ರ

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

HOUSE FOR SALE

As Per Your Requirement Architect Designed.

AT MYSURU	*AT HUNSUR*
Near Vajamangala, Bannur Road.	Near KSRTC Bus Depot.
20x30 30.5 Lakhs	20x30 24 Lakhs
20x40 34 Lakhs	20x40 24.6 Lakhs
30x40 54 Lakhs	30x40 29 Lakhs.
Near St. Josheph School.	
20x40 - 44 Lakhs	
30x50 - 82 Lakhs	

Contact
8123387555 / 7259348777

COMMERCIAL SHOPS FOR RENT

Size: 10x13 near Gundlupet circle Ch.nagar.
Contact :
8310585050

ಬೇಕಾಗಿದ್ದಾರೆ

ಮೈಸೂರಿನ ಕಂಪನಿಗಳಲ್ಲಿ ಕೆಲಸ ಮಾಡಲು ಅನುಭವವುಳ್ಳ ಸೆಕ್ಯೂರಿಟಿ ಸೂಪರ್‌ವೈಸರ್ ಹಾಗೂ ಗಾರ್ಡ್ ಬೇಕಾಗಿದ್ದಾರೆ. ವಯೋಮಿತಿ 50 ವರ್ಷದ ಒಳಗೆ.
Duty - 12 hour's
ಸ್ಥಳ: ಇನ್ಫೋಸಿಸ್ ಹತ್ತಿರ, ಹೆಬ್ಬಾಳ
ಸಂಪರ್ಕಿಸಿ:
9035050652
9900212487

WANTED

A reputed manufacturing company located in Hebbal & Metagalli Industrial Area requires the following personnel

Mechanical Engineer / ITI Fitter / Tool Maker (Tool Room) / Lathe Operator / Milling Operator / Wire Cutting Operator & Maintenance

NOTE : Salary: Best in Industry (Based on Experience)
FACILITIES : Attractive Salary (Best in Industry), ESI & PF Benefits, Overtime Allowance,

9886391611 / 9945302902 / 9845490005
Email: essennautobrakeshr@gmail.com

20ನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ 20 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ ದುಃಖತಪ್ತರು ಧರ್ಮಪತ್ನಿ ಲಕ್ಷ್ಮಿದೇವಿ, ನಿಮ್ಮ ಮಗ: ಮಕ್ಕಳು ರಾಘವೇಂದ್ರ, ಸಿದ್ದಪ್ಪ ಮತ್ತು ಪ್ರಶಾಂತ್, ಸೊಸೆಯಂದಿರು ಮತ್ತು ಮೊಮ್ಮಕ್ಕಳು

ಎಸ್.ನಾಗರಾಜು ಜಾವ
ನಿಧನ: 01-03-2006

20ನೇ ವರ್ಷದ ಸವಿನೆನಪು



ನಾಗರಾಜು (ಜಾವ)
ನಿಧನ: 01.02.2006

ನೀವು ನಮ್ಮನ್ನು ಅಗಲಿ ಇಂದಿಗೆ 20ವರ್ಷ ಕಳೆದರೂ ನೀವು ನುಡಿಯುತ್ತಿದ್ದ ಹಾಗೆ ಹಾಗೂ ತೋರಿಸಿಕೊಟ್ಟಿರುವ ಹಾದಿಯಲ್ಲಿ ನಾನು ಸಾಗುತ್ತಿದ್ದೇನೆ. ನೀವು ಹೇಳಿದ ನುಡಿಯಂತೆ "ಈಸಬೇಕು ಈಸಿ ಜೈಸಬೇಕು" ಅನ್ನೋ ಹಾದಿಯಲ್ಲಿ ನಾನು ಸಾಗುತ್ತಿದ್ದೇನೆ.
ನಿಮ್ಮ ಮಗನಾದ ಎಸ್.ಎನ್. ಸತ್ಯನಾರಾಯಣ ಹಾಗೂ ನಿಮ್ಮ ಸೊಸೆಯಾದ ಡಿ. ಧನಲಕ್ಷ್ಮಿ ಹಾಗೂ ನಿಮ್ಮ ಮೊಮ್ಮಗಳಾದ ಎನ್.ಎಸ್ ಕನಿಷ್ಕ ಗೌಡ ಮತ್ತು ನಿಮ್ಮ ತಮ್ಮನಾದ ಶ್ರೀಕಂಠಯ್ಯ ರವರ ಕುಟುಂಬದವರು

SHREE MYSORE BOOK AGENCY

WE HAVE MOVED
OUR NEW LOCATION
#131/2, G6, Udboor Village, Behind Pinjarpole, Off. Jayapura Hobli, Mysuru-08.

Previously Our Office at
#1131/2, Sarvajanika Hotel Main Road, 9th Cross, Vidyaranayapuarm, Near Silk Factory Circle, Mysuru-08
Call: 94492 71504

PUBLIC NOTICE

Notice is hereby issued to the General Public that (1) Smt. SHASHIREKHA C. P. W/O. Late. K. S. Rajashekhara, Residing at # 430/431, Flat No. 17, Contour Road, Gokulam 3rd Stage, Mysuru 570 002 (2) Sri. RAVISHANKAR N. R. S/O. Late. K. S. Rajashekhar, Residing at # 262, 1st Floor, Eeshanya Nilaya, 4th Main, 5th Cross, Near Kudlu Gate Junction, Aces Layout, B Block, Hosur Main Road, Singasandra, Begur, Bengaluru -560 114 (3) Smt. BINDU N. R. D/O. Late. Rajashekhar K. S. Residing at #2556, 5/A Cross, 17th Main, Snake Shyam Road, Vijaynagar II Stage, Mysuru 570 017 and (4) Sri. DEEPAK N. RAJASHEKAR S/O. Late. K. S. Rajashekhar, Residing at # 17, Srivara Manor, 430 Gokulam 3rd Stage, Mysuru 570 002 have agreed to Sell the Schedule Property to my client/s.

Any person/s asserting any right, title, interest or claim, pending litigation or demand of any nature in or upon the schedule property or any part thereof, the same may be brought to the notice of the undersigned along with documentary evidence at # L-50/2A, 1st Floor, Ashoka Road, Mysuru -570 001 within SEVEN (07) days from the date of this Public Notice, failing which such claim/s shall be considered to have been waived and/or given up and my client/s shall be entitled to complete the sale transaction that there are no claims of whatsoever nature with respect of the schedule property.

SCHEDULE

ALL THAT PIECE AND PARCEL OF INDUSTRIAL PROPERTY BEARING SHED NO. MF-15, E-KHATA No. 32-1-550-MF-15, MEASURING EAST TO WEST 34.35 MTS AND NORTH TO SOUTH 29.1 MTS, TOTALLY MEASURING 999.585 SQUARE METERS, SITUATED AT INDUSTRIAL ESTATE, YADAVGIRI, DEVARAJA MOHALLA, MYSURU HAVING CONSTRUCTED A.C SHEET SHED AND BOUNDED ON: EAST BY : ROAD, WEST BY : CONSERVANCY ROAD, NORTH BY: CANTEEN BUILDING, SOUTH BY: SHED NO. MF-16

Sd/- M. SANJAY JAIN
B.B.M., LL.B., Advocate,
#L, 50/2A, 1st Floor, Ashoka Road, Mysore-570001
Email:msj186@yahoo.co.in
Mobile: 9341464636
Place: Mysuru
Date: 27/02/2026



ನಕ್ಕರೆ ಅದೇ ಸ್ವರ್ಗ

ಸುಬ್ಬು : ಡಾಕ್ಟರೇ, ನನಗೆ ನೂರು ವರ್ಷವಾದರೂ ಬದುಕಬೇಕು ಅಂತ ಆಸೆ ಇದೆ. ದೀರ್ಘಾಯುಷ್ಯಕ್ಕೆ ಏನಾದರೂ ಔಷಧಿ ಇದ್ರೆ ಕೊಡಿ.
ಡಾಕ್ಟರ್ : ನೀವೊಂದು ಕೆಲ್ಸ ಮಾಡಿ, ಆದಷ್ಟು ಬೇಗ ಮದುವೆ ಆಗಿ..
ಸುಬ್ಬು : ಅದರಿಂದ ನನ್ನ ಆಯುಷ್ಯ ಹೆಚ್ಚಾಗುತ್ತಾ ಡಾಕ್ಟರೆ?
ಡಾಕ್ಟರ್ : ಇಲ್ಲ... ಇಲ್ಲ... ಆದ್ರೆ ಇಂಥ ಯೋಚನೆ ಬರೋದು ನಿಲ್ಲುತ್ತೆ!

ಮೈಸೂರು ಮಿತ್ರ

ಭಾನುವಾರ, ಮಾರ್ಚ್ 1, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಜೀವನದಲ್ಲಿ ಒಂಟಿಯಾಗಿರುವುದಕ್ಕೆ ಆದಷ್ಟು ಪ್ರಯತ್ನಿಸು. ಏಕೆಂದರೆ, ಜೀವನ ಪೂರ್ತಿ ನಿನ್ನ ಜೊತೆಯಲ್ಲೇ ಇರ್ತೀನಿ ಅಂತ ಹೇಳಿದವರೇ ನಿನ್ನನ್ನು ಬಿಟ್ಟು ಹೋಗುತ್ತಾರೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಮಂಗನ ಕೈಗೆ ಮಾಣಿಕ್ಯ ಕೊಟ್ಟ ಹಾಗೆ

ನಿಮ್ಮ ಪತ್ರಗಳು

ಹೆಚ್ಚಿನ ಬಸ್ ಸೌಲಭ್ಯ ಕಲ್ಪಿಸಲು ಮನವಿ

ಮಾನ್ಯರೆ,

ಸರಗೂರು ತಾಲೂಕಿನ ಮುಳ್ಳೂರು, ಚಾಮಲಾಪುರ, ಕುಂದೂರು, ಕಲ್ಲಂಬಾಳು, ನಂಜೀಪುರ, ಕಟ್ಟೆಹುಣಸೂರು ಈ ಗ್ರಾಮಗಳ ಮಾರ್ಗವಾಗಿ ಹೆಚ್ಚಿನ ಸರ್ಕಾರಿ ಬಸ್ಸುಗಳ ಸಂಚಾರವಿಲ್ಲದೆ ಸಾರ್ವಜನಿಕರಿಗೆ, ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ, ನೌಕರರಿಗೆ, ವ್ಯಾಪಾರಸ್ಥರಿಗೆ, ರೈತರಿಗೆ, ರೋಗಿಗಳಿಗೆ, ಹಿರಿಯ ಜೀವಗಳಿಗೆ ತುಂಬಾ ತೊಂದರೆಯಾಗಿ ದಿನಂಪ್ರತಿ ನರಕಯಾತನೆ ಅನುಭವಿಸುತ್ತಿದ್ದಾರೆ. ಆದ್ದರಿಂದ ನಂಜನಗೂಡು ತಾಲೂಕಿನ ಹುಲ್ಲಹಳ್ಳಿ ಹೋಬಳಿಯ ರಾಜೂರು, ಕಡಬೂರು, ಶೆಟ್ಟಿಹಳ್ಳಿ, ದುಗ್ಗಳ್ಳಿ ಈ ಮೇಲಿನ ಗ್ರಾಮಗಳ ಮಾರ್ಗವಾಗಿ ಎರಡು ಬಸ್ಸುಗಳು ಸರಗೂರಿನಿಂದ ಹುಲ್ಲಹಳ್ಳಿ, ಹುಲ್ಲಹಳ್ಳಿಯಿಂದ ಸರಗೂರಿಗೆ ಪ್ರತಿನಿತ್ಯ ಬೆಳಿಗ್ಗೆಯಿಂದ ರಾತ್ರಿಯವರೆಗೆ ಈ ಮಾರ್ಗವಾಗಿ ಸಂಚರಿಸಿದರೆ ತುಂಬಾ ಅನುಕೂಲವಾಗುತ್ತದೆ. ಅನೇಕ ಬಾರಿ ಎರಡು ತಾಲೂಕಿನ ಶಾಸಕರು, ಡಿಪೋ ವ್ಯವಸ್ಥಾಪಕರಿಗೆ ಬಸ್ಸು ಹೊರಡುವ ವೇಳೆ ಹಾಗೂ ತಲುಪುವ ವೇಳೆಯನ್ನು ಸ್ಪಷ್ಟವಾಗಿ ಬರೆದು ಈ ಭಾಗದ ಗ್ರಾಮಸ್ಥರು ಅನೇಕ ಬಾರಿ ಮನವಿ ನೀಡಿದರೂ ಪ್ರಯೋಜನವಾಗಿಲ್ಲ.

ಶಾಲಾ-ಕಾಲೇಜು ಮಕ್ಕಳಿಗಂತು ತುಂಬಾ ಅನಾನುಕೂಲವಾಗಿದೆ. ಈ ಮಾರ್ಗವಾಗಿ ಒಂದೇ ಬಸ್ಸು ಮೂರು ಬಾರಿ ಸಂಚರಿಸುತ್ತದೆ. ಅದು ಕೂಡ ಸರಿಯಾದ ವೇಳೆಗೆ ಬರುವುದಿಲ್ಲ. ಇದರಿಂದ ಬೇಸತ್ತ ಜನರು ಜನಪ್ರತಿನಿಧಿಗಳಿಗೆ, ಡಿಪೋದ ವ್ಯವಸ್ಥಾಪಕರಿಗೆ ಮತ್ತು ಸರ್ಕಾರಕ್ಕೆ ಇಡೀ ಶಾಪ ಹಾಕುತ್ತಿದ್ದಾರೆ. ಇದು ಪ್ರತಿದಿನವೂ ರೋಧನೆಯಾಗಿದೆ. ಒಮ್ಮೊಮ್ಮೆ ಈ ಬಸ್ಸು ಬರದಿದ್ದರೆ ಅಧೋಗತಿ. ಈ ಬಸ್ಸಿನಲ್ಲಿ ಕಂಡಕ್ಟರ್ ರಹಿತವಾಗಿರುವುದರಿಂದ ಡ್ರೈವರ್ ಪ್ರಯಾಣಿಕರಿಗೆ ಟಿಕೆಟ್ ನೀಡಿ ಮುಂದೆ ಹೋಗಬೇಕಾಗಿರುವುದರಿಂದ ಇಲ್ಲೂ ಕೂಡ ಇನ್ನೂ ತಡವಾಗುತ್ತದೆ. ಸರಿಯಾದ ವೇಳೆಗೆ ತಲುಪುವ ಸ್ಥಳವನ್ನು ತಲುಪದೇ ಸಾರ್ವಜನಿಕರು ತುಂಬಾ ತೊಂದರೆ ಅನುಭವಿಸುತ್ತಿದ್ದಾರೆ. ಇರುವುದೊಂದೇ ಬಸ್ಸು ಈ ಬಸ್ಸು ಪ್ರತಿನಿತ್ಯ ಯಾವಾಗಲೂ ಜನ ಜಂಗುಳಿಯಿಂದ ತುಂಬಿರುತ್ತದೆ. ಮಳೆಗಾಲದಲ್ಲಂತೂ ದೇವರೇ ಕಾಪಾಡಬೇಕು. ಇದಕ್ಕೆ ಸಂಬಂಧಪಟ್ಟವರು ತುರ್ತಾಗಿ ಸ್ಪಂದಿಸಿ ಹೆಚ್ಚಿನ ಬಸ್ ಸೌಲಭ್ಯವನ್ನು ಕಲ್ಪಿಸಿ ಕೊಡಬೇಕೆಂದು ಮನವಿ.

–ಪರಶಿವಮೂರ್ತಿ ಎನ್.ಪಿ. ನಂಜೀಪುರ, ಸರಗೂರು ತಾ.

ಸುಪ್ರೀಂಕೋರ್ಟ್‌ನ ತೀರ್ಪು ಶ್ಲಾಘನೀಯ

ಮಾನ್ಯರೆ,

ಕೇಂದ್ರೀಯ ಪಠ್ಯಕ್ರಮದ (ಎನ್‌ಸಿಇಆರ್‌ಟಿ) 8ನೇ ತರಗತಿಯ ಪಠ್ಯ ಪುಸ್ತಕದಲ್ಲಿ ನಮ್ಮ ದೇಶದ ನ್ಯಾಯಾಂಗ ವ್ಯವಸ್ಥೆಯನ್ನೇ ಅನುಮಾನ ಪಡುವಂತೆ, ನ್ಯಾಯಾಂಗ ವ್ಯವಸ್ಥೆಯಲ್ಲೂ ಭ್ರಷ್ಟಾಚಾರ ಇದೆ ಎನ್ನುವಂತೆ ಪಠ್ಯಪುಸ್ತಕ ಸಿದ್ಧಪಡಿಸಿದ್ದಾರೆ ಎಂದು ತಿಳಿದು ಸ್ವತಹ ಸುಪ್ರೀಂಕೋರ್ಟ್ ಇದರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ, ಪುಸ್ತಕವನ್ನು ವಾಪಸ್ ಪಡೆಯಲು ಎನ್‌ಸಿಇಆರ್‌ಟಿಗೆ ಆದೇಶ ನೀಡಿ ಈ ಪುಸ್ತಕ ಸಿದ್ಧಪಡಿಸಿದವರ ವಿರುದ್ಧ ಕ್ರಮ ಕೈಗೊಳ್ಳಲು ಸುಪ್ರೀಂ ಕೋರ್ಟ್ ಆದೇಶ ನೀಡಿದೆ.

ಶಿಕ್ಷಣವು, ಸಮಾಜ ಮತ್ತು ದೇಶವನ್ನು ಕಟ್ಟಲು ಹೊಸ ಪೀಳಿಗೆಯನ್ನು ರೂಪಿಸುವಂತಾಗಬೇಕು. ವಿದ್ಯಾರ್ಥಿಗಳು ಕಲಿಯುವ ವಯಸ್ಸಿನಲ್ಲಿ ನ್ಯಾಯಾಂಗದ ವ್ಯವಸ್ಥೆಯ ಮೇಲೆಯೇ ಅನುಮಾನ ಪಡುವಂತಾದರೆ, ಇನ್ನಾರನ್ನು ನಂಬಬೇಕು.? ದೇಶದ ಬಗ್ಗೆ ಅಭಿಮಾನ ಬರುವುದಾದರೂ ಹೇಗೆ? ಇಂತಹ ತಪ್ಪು ಮಾಹಿತಿ ನೀಡಿದವರ ವಿರುದ್ಧ ಕ್ರಮ ಕೈಗೊಳ್ಳಬೇಕು. ಸುಪ್ರೀಂಕೋರ್ಟ್‌ನ ಈ ತೀರ್ಪು ಸಾರ್ವಜನಿಕ ವಲಯದಲ್ಲಿ ಮೆಚ್ಚುಗೆಗೆ ಪಾತ್ರವಾಗಿದೆ.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

ಫಿಲೇಚರ್ ಮುಚ್ಚಬೇಡಿ ಸಮಸ್ಯೆ ಬಗೆಹರಿಸಿ

ಮಾನ್ಯರೆ,

ತಿ.ನರಸೀಪುರ ಕೆಎಸ್‌ಐಸಿ ಘಟಕದ ಜಾಗದಲ್ಲಿ ಕ್ರೀಡಾಂಗಣ ನಿರ್ಮಾಣಕ್ಕೆ ಜಾಗ ನೀಡಿರುವುದರಿಂದ ನಮಗೆ ಕಲ್ಲಿದ್ದಲು ದಾಸ್ತಾನು ಇಟ್ಟುಕೊಳ್ಳಲು ಹಾಗೂ ಬಾಯ್ಲರ್ ಜಾಗ ಉಳಿಯುವುದಿಲ್ಲ. ಅಲ್ಲದೆ ತ್ಯಾಜ್ಯ ನೀರು ಸಂಸ್ಕರಣಾ ಘಟಕ ಕಟ್ಟಬೇಕೆಂದು ಕೆಎಸ್‌ಐಸಿಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ನೋಟಿಸ್ ಬಂದಿದ್ದು, ಪ್ರಸ್ತುತ ಬೆಳವಣಿಗೆಯಿಂದ ಅದಕ್ಕೂ ಅವಕಾಶ ಸಿಗುತ್ತಿಲ್ಲ. ಈ ಸಮಸ್ಯೆಗಳನ್ನು ಪರಿಹರಿಸಿಕೊಡಬೇಕು ಎಂದು ಮನವಿ ಮಾಡಿರುವ ಕೆಎಸ್‌ಐಸಿ ವ್ಯವಸ್ಥಾಪಕ ನಿರ್ದೇಶಕ ಜಾಹೀರ್ ನಾಸಿಮ್ ಅವರ ನಡೆ ಶ್ಲಾಘನೀಯ. ಇಲ್ಲಿ 500ಕ್ಕೂ ಹೆಚ್ಚು ಮರಗಳಿವೆ. ಶ್ರೀಗಂಧ, ತೇಗ, ಅಡಿಕೆ, ತೆಂಗಿನ ಮರಗಳು ಧೂಳು ಮತ್ತು ಬೂದಿಯನ್ನು ಹೀರಿಕೊಂಡು ಆಮ್ಲಜನಕ ನೀಡುತ್ತಿವೆ. ಅಲ್ಲದೆ ನೂರಕ್ಕೂ ಹೆಚ್ಚು ವರ್ಷಗಳ ವೃಕ್ಷಗಳಿದ್ದು 40ಕ್ಕೂ ಹೆಚ್ಚು ಪ್ರಭೇದದ ಪಕ್ಷಿಗಳ ವಾಸಸ್ಥಳವಾಗಿದ್ದು, ಇವೆಲ್ಲಕ್ಕೂ ಸಂಚಕಾರ ಒದಗುವ ದುಸ್ಥಿತಿ ಎದುರಾಗಿದೆ. ಈ ಕೆಲಸವನ್ನೇ ನಂಬಿಕೊಂಡಿರುವ ಒಂದು ಸಾವಿರಕ್ಕೂ ಹೆಚ್ಚು ಬಡ ಕಾರ್ಮಿಕರ ಬದುಕು ಬೀದಿಪಾಲಾಗುವುದರಲ್ಲಿ ಸಂಶಯವಿಲ್ಲ. ಪ್ರತಿದಿನ ಸರಾಸರಿ 200 ಕೆಜಿ ರೇಷ್ಮೆ ನೂಲು ತಯಾರಾಗಿ ಮೈಸೂರು ಮತ್ತು ಚನ್ನಪಟ್ಟಣ ಕಾರ್ಖಾನೆಗೆ ರೇಷ್ಮೆ ಸೀರೆ ತಯಾರಿಸಲು ಸರಬರಾಜಾಗುತ್ತಿದೆ. ಜಾಗತಿಕ ಮಟ್ಟದಲ್ಲಿ ಮೈಸೂರು ರೇಷ್ಮೆ ಸೀರೆ ಮನ್ನಣೆ ಗಳಿಸಿರುವುದು ಪ್ರತಿಯೊಬ್ಬರಿಗೂ ಗೊತ್ತಿರುವ ಸಂಗತಿ. ಶಾಸಕರು ಹಾಗೂ ಉಸ್ತುವಾರಿ ಸಚಿವರಾದ ಡಾ. ಎಚ್.ಸಿ. ಮಹದೇವಪ್ಪ ಹಾಗೂ ಸಂಸದ ಸುನೀಲ್ ಬೋಸ್ ಅವರು ತಿ.ನರಸೀಪುರದ ಮುಕುಟ ಮಣಿಯಂತೆ ಇರುವ ಈ ಸಿಲ್ಕ್ ಫಿಲೇಚರ್ ಅನ್ನು ಉಳಿಸಿಕೊಳ್ಳುವತ್ತ ಗಮನಹರಿಸಿ ಕ್ರೀಡಾಂಗಣಕ್ಕೆ ಬೇರೆಡೆ ಜಾಗ ಗುರುತಿಸಲು ಅಧಿಕಾರಿಗಳಿಗೆ ಸೂಚಿಸುವುದು ಒಳ್ಳೆಯದು.

–ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು.

ಕಳ್ಳಸಾಗಣೆ ಕಪಿಮುಷ್ಠಿಯಲ್ಲಿ ದೇಶದ ಆರ್ಥಿಕತೆ

ಮಾನ್ಯರೇ,

ಇತ್ತೀಚಿನ ಅಂಕಿ ಅಂಶಗಳ ಪ್ರಕಾರ, ಭಾರತದಲ್ಲಿ ಅಕ್ರಮ ಸಿಗರೇಟ್ ಮಾರುಕಟ್ಟೆಯು ವಾರ್ಷಿಕವಾಗಿ ಸುಮಾರು 15,000 ಕೋಟಿಗೂ ಅಧಿಕ ನಷ್ಟವನ್ನು ಸರ್ಕಾರಕ್ಕೆ ಉಂಟುಮಾಡುತ್ತಿದೆ. ತೆರಿಗೆ ಏರಿಕೆಯು ಜನರ ಆರೋಗ್ಯ ಸುಧಾರಿಸುವ ಬದಲು, ಶೇ. 25–30 ರಷ್ಟು ಮಾರುಕಟ್ಟೆಯನ್ನು ಕಳ್ಳಸಂತೆಯ ಪಾಲಾಗುವಂತೆ ಮಾಡಿದೆ. ಇದು ಕೇವಲ ಆರ್ಥಿಕ ಅಪರಾಧವಲ್ಲ; ರಾಷ್ಟ್ರೀಯ ಭದ್ರತೆಗೆ ಹೊಡೆತ ನೀಡುವ ಆರ್ಥಿಕ ಭಯೋತ್ಪಾದನೆ. ಅಕ್ರಮವಾಗಿ ಬರುವ ವಿದೇಶಿ ಉತ್ಪನ್ನಗಳಲ್ಲಿ ಯಾವುದೇ ಶಾಸನಬದ್ಧ ಎಚ್ಚರಿಕೆಗಳಿಲ್ಲದಿರುವುದು ಯುವಜನತೆಯನ್ನು ದಾರಿ ತಪ್ಪಿಸುತ್ತಿದೆ. ಸರ್ಕಾರವು ಈ ದಂಧೆಯನ್ನು ಬುಡಸಮೇತ ಕಿತ್ತೆಸೆಯಲು 'ಶೂನ್ಯ ಸಹನೆ' ನೀತಿ ಅನುಸರಿಸಬೇಕು. ಕಳ್ಳಸಾಗಾಣಿಕೆದಾರರ ಮೇಲೆ ಕಠಿಣ ಕ್ರಮ ಜರುಗಿಸಬೇಕು. ಕೂಡಲೇ ಸರ್ಕಾರ ಎಚ್ಚೆತ್ತುಕೊಳ್ಳದಿದ್ದರೆ ಪ್ರಾಮಾಣಿಕ ತೆರಿಗೆದಾರರು ಮತ್ತು ದೇಶೀಯ ಉತ್ಪಾದಕರು ಸಂಕಷ್ಟ ಪರಿಸ್ಥಿತಿ ಎದುರಿಸಬೇಕಾಗುತ್ತದೆ.

–ಡಾ.ಎಚ್.ಕೆ. ವಿಜಯಕುಮಾರ, ಮೈಸೂರು.



ಡಾ.ರಮಾ ವಿ. ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346

ನಾದಲಹರಿ

ಕನ್ನಡಕೆ ಹೋರಾಡು ಕನ್ನಡದ ಕಂದಾ?


ಕನ್ನಡಕ್ಕಾಗಿ ದುಡಿದಿರುವ ಅದೆಷ್ಟು ಮಂದಿಯನ್ನು ನಾವು ಸ್ಮರಿಸುತ್ತೇವೆ ಹಗಲಿರುಳೂ ಕನ್ನಡದ ಏಳಿಗೆಯನ್ನು ಕುರಿತೇ ಚಿಂತಿಸುತ್ತಿದ್ದ ಅನೇಕ ಮಹನೀಯರು ನಮ್ಮ ಕನ್ನಡ ನಾಡಿನ ಉದ್ದಕ್ಕೂ ಇದ್ದರು ಎಂಬುದು ಅದೆಷ್ಟು ಹೆಮ್ಮೆಯ ಸಂಗತಿ!

ತಾವು ಎಷ್ಟೇ ಚಿಕ್ಕ ಊರಿನಲ್ಲಿರಲಿ, ತಮ್ಮ ಮಾತೃಭಾಷೆಯ ಬಗೆಗೆ ಅವರಿಗೆ ಇದ್ದ ಪ್ರೀತಿ, ಅದೆಷ್ಟು ಉತ್ಕೃಷ್ಟವಾದುದು ನನ್ನ ತಾಯಿನುಡಿಗಾಗಿ ನಾನು ಸಲ್ಲಿಸುವ ಅಳಿಲು ಸೇವೆ ಇದೇ ಎಂದು ಅಂತಹ ಅನೇಕ ಮಹನೀಯರು ಕನ್ನಡವನ್ನು ಕಟ್ಟಿ, ಬೆಳೆಸಲು ದುಡಿದಿದ್ದಾರೆ. ಕನ್ನಡ ಪುಸ್ತಕಗಳ ಗಂಟನ್ನು ತಲೆಯ ಮೇಲೆ ಹೊತ್ತು, ಊರೂರು ತಿರುಗಿ, ಮನೆಮನೆಗೆ ಹೋಗಿ ಮಾರಿದ್ದಾರೆ.


ಮಕ್ಕಳಿಗಾಗಿ ನೀತಿ ಕತೆಗಳನ್ನು, ಚಂದದ ಪದ್ಯಗಳನ್ನು, ನಾಟಕಗಳನ್ನು ಬರೆದವರಿದ್ದಾರೆ. ಭಾರತದ ಬೇರೆ ಬೇರೆ ಭಾಷೆಗಳಿಂದ ಅತ್ಯುತ್ತಮ ಎನಿಸಿದ ಕಾದಂಬರಿಗಳನ್ನು, ನಾಟಕಗಳನ್ನು ಅನುವಾದಿಸಿದವರಿದ್ದಾರೆ. ಇವರ್ಯಾರೂ ತಮ್ಮ ಹೆಸರಿಗಾಗಿ, ಕೀರ್ತಿಗಾಗಿ ಅಥವಾ ಮತ್ಯಾವುದೋ ಲೋಭಕ್ಕಾಗಿ ಇವನ್ನು ಮಾಡಿದವರಲ್ಲ. ಅವರ ಮನದಲ್ಲಿ ಇದ್ದುದು ಕೇವಲ ಕನ್ನಡದ ಮೇಲಿನ ಪ್ರೀತಿ, ಅಭಿಮಾನ ಅಷ್ಟೆ. ಅಂತಹವರು ನಿಜಕ್ಕೂ ಪ್ರಾತಃಸ್ಮರಣೀಯರು. ಅವರೆಲ್ಲರಿಗೆ ನಮ್ಮ ತುಂಬು ಹೃದಯದ ನಮನ.

19ನೆಯ ಶತಮಾನದ ಕೊನೆಯ ಭಾಗದಲ್ಲಿ ಹೀಗೆ ಕನ್ನಡಕ್ಕಾಗಿ ಮಿಡಿದ ಜೀವಿಗಳಲ್ಲಿ ಎಂ.ಎಸ್.ಪುಟ್ಟಣ್ಣನವರೂ ಒಬ್ಬರು. ಹೊಸಗನ್ನಡದ ರೂವಾರಿಗಳಲ್ಲಿ ಅವರೂ ಒಬ್ಬರು. ಅವರು ಕನ್ನಡ ಪಠ್ಯ ಪುಸ್ತಕಗಳನ್ನು ಬರೆದುದಲ್ಲದೆ, ಷೇಕ್ಸ್‌ಪಿಯರನ ಹ್ಯಾಮ್ಲೆಟ್ ನಾಟಕದ ರೂಪಾಂತರ, ಕತೆ–ಕಾದಂಬರಿ, ಜೀವನ ಚರಿತ್ರೆಗಳು ಮತ್ತು ವಿಶೇಷವಾಗಿ ಮಕ್ಕಳಲ್ಲಿ ಒಳ್ಳೆಯ ನೀತಿ ಉಂಟಾಗಲೆಂದು ಬರೆದ ನೀತಿ ಚಿಂತಾಮಣಿ ಮುಂತಾದವು ಅವರ ವಿಸ್ತಾರವಾದ ಬರಹಕ್ಕೆ ಮತ್ತು ಓದಿಗೆ ಹಿಡಿದ ಕೈಗನ್ನಡಿ. ನಮ್ಮ ಪುರಾಣ, ಇತಿಹಾಸಗಳಿಂದ ಆಯ್ದ ನೀತಿ ಕತೆಗಳನ್ನು ಮಕ್ಕಳಲ್ಲಿ ಒಳ್ಳೆಯ ಸಂಸ್ಕಾರವನ್ನು ಉಂಟುಮಾಡುವ ಸದುದ್ದೇಶದಿಂದಲೇ ಬರೆದ ನೀತಿ ಚಿಂತಾಮಣಿಯು ಅದೆಷ್ಟು ಜನಪ್ರಿಯವಾಗಿತ್ತು ಎಂದರೆ, ಇದುವರೆಗೆ ಅದು 33 ಬಾರಿ ಮರುಮುದ್ರಣಗೊಂಡಿದೆ ಎಂಬುದೇ ಅದಕ್ಕೆ ಸಾಕ್ಷಿ.

ಮೈಸೂರಿನಲ್ಲಿ 1854ರಲ್ಲಿ ಜನಿಸಿದ ಪುಟ್ಟಣ್ಣನವರ ಆರಂಭಿಕ ಓದು ರಾಜಾ ಶಾಲೆಯಲ್ಲಿ ಆಯಿತು. ಈ ಸಂಸ್ಥೆಯೇ ಮುಂದೆ ಮಹಾರಾಜ ಕಾಲೇಜು ಆದುದು. ಇಲ್ಲಿ ಎಫ್.ಎ ಓದಿ, ಕೆಲವು ಕಾಲ ಶಿಕ್ಷಕರಾಗಿ ಕೆಲಸ ಮಾಡಿದ ಅವರು ಮತ್ತೆ ಮದರಾಸಿನ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಎಂ.ಎ.ಪದವಿಯನ್ನು ಗಳಿಸುತ್ತಾರೆ. ಮುಂದೆ ತಾವು ಓದಿದ ಶಾಲೆಯಲ್ಲೇ ಕೆಲಕಾಲ ಶಿಕ್ಷಕರಾಗಿದ್ದ ಅವರು ಅದನ್ನು ತೊರೆದು ನ್ಯಾಯಾಲಯದಲ್ಲಿ ಭಾಷಾಂತರಕಾರರಾಗಿ ಸೇವೆ ಸಲ್ಲಿಸುತ್ತಾರೆ. ಇದರ ನಂತರ ಅವರು ಅಮಲ್ದಾರರಾಗಿ ತಮ್ಮ ವೃತ್ತಿ ಬದುಕಿನ ಮತ್ತೊಂದು ಅಧ್ಯಾಯವನ್ನು ಆರಂಭಿಸಿ, ಕನ್ನಡ ನಾಡಿನ ಹತ್ತು ಹಲವು ಊರುಗಳಲ್ಲಿ ಕಾರ್ಯನಿರ್ವಹಿಸುತ್ತಾರೆ. ಹತ್ತೊಂಬತ್ತನೆಯ ಶತಮಾನದ ಕೊನೆಯ ಭಾಗದಲ್ಲಿ ಅವರು ಬರವಣಿಗೆಯನ್ನು ಆರಂಭಿಸಿದುದು. ಸಂಶೋಧನೆಯ ಪರಿಣಾಮವಾಗಿ ಅವರು ಹಲವು ಕೃತಿಗಳನ್ನು ರಚಿಸಲು ಸಾಧ್ಯವಾಯಿತು. ಹಿಂದೂಚರಿತ್ರ ಸಂಗ್ರಹ, ಪಾಳೆಯಗಾರರು, ಕಾಂಪೂಷನ ಚರಿತ್ರೆ, ಮಹಮೂದ್ ಗವಾನನ ಚರಿತ್ರೆ, ಮಾಡಿದ್ದುಣ್ಣೋ ಮಹಾರಾಯ, ಮುಸುಗು ತೆಗೆಯೇ ಮಾಯಾಂಗನೆ, ಹೇಮಚಂದ್ರ ರಾಜವಿಲಾಸ (ಷೇಕ್ಸ್‌ಪಿಯರನ ಕಿಂಗ್ ಲಿಯರ್), ಹೇಮಲತಾ ರಾಜಕುಮಾರರ ಚರಿತ್ರೆ (ಷೇಕ್ಸ್‌ಪಿಯರನ ಹ್ಯಾಮ್ಲೆಟ್) ಹೀಗೆ ಅನೇಕ ಕತೆ, ಕಾದಂಬರಿ, ಲೇಖನಗಳನ್ನು ಬರೆದರು. 1930ರಲ್ಲಿ ಬೆಂಗಳೂರಿನಲ್ಲಿ ತಮ್ಮ ಎಪ್ಪತ್ತಾರನೆಯ ವಯಸ್ಸಿನಲ್ಲಿ ಪುಟ್ಟಣ್ಣ ಅವರು ತೀರಿಕೊಂಡರು.



ಎಂ.ಎಸ್.ಪುಟ್ಟಣ್ಣ



ಗಳಗನಾಥರು

> "ಅನೇಕ ಮಹನೀಯರು ಕನ್ನಡ ಕಟ್ಟಿ, ಬೆಳೆಸಲು ದುಡಿದಿದ್ದಾರೆ. ಕನ್ನಡ ಪುಸ್ತಕಗಳ ಗಂಟನ್ನು ತಲೆಯ ಮೇಲೆ ಹೊತ್ತು, ಊರೂರು ತಿರುಗಿ, ಮನೆಮನೆಗೆ ಹೋಗಿ ಮಾರಿದ್ದಾರೆ. ಮಕ್ಕಳಿಗಾಗಿ ನೀತಿ ಕತೆಗಳನ್ನು, ಚಂದದ ಪದ್ಯಗಳನ್ನು, ನಾಟಕಗಳನ್ನು ಬರೆದವರಿದ್ದಾರೆ. ಭಾರತದ ಬೇರೆ ಬೇರೆ ಭಾಷೆಗಳಿಂದ ಅತ್ಯುತ್ತಮ ಎನಿಸಿದ ಕಾದಂಬರಿಗಳನ್ನು, ನಾಟಕಗಳನ್ನು ಅನುವಾದಿಸಿದವರಿದ್ದಾರೆ. ಇವರ್ಯಾರೂ ತಮ್ಮ ಹೆಸರಿಗಾಗಿ, ಕೀರ್ತಿಗಾಗಿ ಅಥವಾ ಮತ್ಯಾವುದೋ ಲೋಭಕ್ಕಾಗಿ ಇವನ್ನು ಮಾಡಿದವರಲ್ಲ. ಅವರ ಮನದಲ್ಲಿ ಇದ್ದುದು ಕೇವಲ ಕನ್ನಡದ ಮೇಲಿನ ಪ್ರೀತಿ, ಅಭಿಮಾನ ಅಷ್ಟೆ. ಅಂತಹವರು ನಿಜಕ್ಕೂ ಪ್ರಾತಃಸ್ಮರಣೀಯರು. ಅವರೆಲ್ಲರಿಗೆ ನಮ್ಮ ತುಂಬು ಹೃದಯದ ನಮನ.

ಇವರ ಸಮಕಾಲೀನರಾಗಿದ್ದ ಗಳಗನಾಥರು ಕನ್ನಡಕ್ಕಾಗಿ ಅಹರ್ನಿಶಿ ದುಡಿದ ಮತ್ತೊಬ್ಬ ಮಹಾನುಭಾವರು. ಉರ್ದು ಪ್ರಭಾವದಿಂದ ಕನ್ನಡವನ್ನು ಹೊರತೆಗೆದುದು ಪುಟ್ಟಣ್ಣನವರಾದರೆ, ಮರಾಠಿ ಪ್ರಭಾವದಿಂದ ಹೊರತಂದು, ಅದಕ್ಕೆ ತನ್ನದೇ ಆದ ಭಾಷಾ ಸಂಪತ್ತು ಇದೆಯೆಂಬುದನ್ನು ಮನವರಿಕೆ ಮಾಡಿಕೊಟ್ಟವರು ಕನ್ನಡ ಕಾದಂಬರಿಗಳ ಪಿತಾಮಹ ಎಂದೇ ವರ್ಣಿಸಲ್ಪಡುವ ಗಳಗನಾಥರು. 1869ರಲ್ಲಿ ಹಾವೇರಿ ಜಿಲ್ಲೆಯ ಗಳಗನಾಥ ಎಂಬ ಊರಿನಲ್ಲಿ ಜನಿಸಿದ ಇವರ ಮೂಲ ಹೆಸರು ವೆಂಕಟೇಶ ತಿ.ಕುಲಕರ್ಣಿ. ಹಾವನೂರಿನಲ್ಲಿ ಮುಲ್ಕಿ ಪರೀಕ್ಷೆ ಮುಗಿಸಿದ ಗಳಗನಾಥರ ಬದುಕಿನಲ್ಲಿ ಧಾರವಾಡವು ಮಹತ್ತರ ಪಾತ್ರ ವಹಿಸಿದೆ ಎಂದರೆ ತಪ್ಪಾಗಲಾರದು. ಎಂದಿನಿಂದಲೂ ಧಾರವಾಡವು ತನ್ನ ಸುಸಂಸ್ಕೃತಿ ಮತ್ತು ಸಾಹಿತ್ಯದ ಸೊಗಡಿಗೆ ಹೆಸರುವಾಸಿ ಆಗಿದೆ.

ಇಲ್ಲಿ ತಮ್ಮ ಶಿಕ್ಷಕ ಟ್ರೈನಿಂಗಿಗೆ ಬಂದ ಗಳಗನಾಥರಲ್ಲಿ ಸಾಹಿತ್ಯದ ರುಚಿ ಹುಟ್ಟಿಸಿ, ಅವರನ್ನು ಒಬ್ಬ ಲೇಖಕರನ್ನಾಗಿ ಮಾಡಿದ ಅಗ್ಗಳಿಕೆಯೂ ಅದಕ್ಕೇ ಸಲ್ಲುತ್ತದೆ. ಅವರ ಮೇಲೆ ಪ್ರಭಾವ ಬೀರಿದ ವ್ಯಕ್ತಿಗಳಲ್ಲಿ ರೊದ್ದ ಶ್ರೀನಿವಾಸ ರಾವ್, ಕರಂದೀಕರರು, ಕಿತ್ತೂರ ಅಯ್ಯನವರು, ಧೋಂಡೋ ನರಸಿಂಹ ಮುಳಬಾಗಿಲ ಮುಂತಾದ ಮಹನೀಯರು ಇದ್ದಾರೆ. ಮಹಾರಾಷ್ಟ್ರ ಮತ್ತು ಮರಾಠಿಯ ದಟ್ಟ ಪ್ರಭಾವವಿದ್ದ ಉತ್ತರ ಕರ್ನಾಟಕದಲ್ಲಿ ಆಗ ಬಾಲಗಂಗಾಧರ ತಿಲಕರ ಹಾಗೂ ಹರಿನಾರಾಯಣ ಆಪ್ಟೆಯವರ ಹೆಸರು ಮನೆಮಾತಾಗಿದ್ದಿತು. ಕನ್ನಡಿಗರು ಓದುತ್ತಿದ್ದುದೂ ಇವರ ಕೇಸರಿ ಮತ್ತು ಕರಮಣೂಕ ಮರಾಠಿ ಪತ್ರಿಕೆಗಳನ್ನೇ. ತಿಲಕರ ವಿಚಾರಧಾರೆ ಮತ್ತು ಆಪ್ಟೆಯವರ ರಮಣೀಯ ಶೈಲಿಯು ಇವರನ್ನು ಆಕರ್ಷಿಸಿತು. ಮರಾಠಿ ಭಾಷೆಯಲ್ಲಿದ್ದ ತಿಲಕರ ವಿಚಾರಧಾರೆಯನ್ನೂ, ಆಪ್ಟೆಯವರ ಕಾದಂಬರಿಗಳನ್ನು ಕನ್ನಡದಲ್ಲಿಯೇ ಏಕೆ ಪರಿಚಯ ಮಾಡಿಸಬಾರದು ಎಂಬ ವಿಚಾರ ಇವರಲ್ಲಿ ಮೂಡಿದುದೇ ಇವರ ಅನೇಕ ಅನುವಾದಿತ ರಚನೆಗಳಿಗೆ ಪ್ರೇರಕವಾಯಿತು.

ಧಾರವಾಡದ ವಿದ್ಯಾವರ್ಧಕ ಸಂಘದವರು ಆಗಷ್ಟೇ ಏರ್ಪಡಿಸಿದ್ದ ಕನ್ನಡ ಸಾಹಿತ್ಯರಚನಾ ಸ್ಪರ್ಧೆಯಲ್ಲಿ ಇವರ ಚೊಚ್ಚಿಲ ಕಾದಂಬರಿ ಪದ್ಮನಯನೆಗೆ ಬಂದ ಬಹುಮಾನವು ಬರೆಯಲು ಇವರಿಗೆ ಮತ್ತಷ್ಟು ಉತ್ತೇಜನ ನೀಡಿತು. ಅಗಡಿಯ ಶ್ರೀ ಶೇಷಾಚಲ ಸ್ವಾಮಿಗಳ ವಿಶೇಷ ಪ್ರಭಾವಕ್ಕೆ ಒಳಗಾಗಿದ್ದ ಇವರು ತಮ್ಮ ಸರಕಾರಿ ನೌಕರಿಯಲ್ಲಿ ಸ್ವಲ್ಪ ಅಹಿತ ಎನಿಸಿದಾಗ, ಅದಕ್ಕೆ ರಾಜೀನಾಮೆ ಕೊಟ್ಟು, ಶೇಷಾಚಲರ ಆನಂದವನ ಆಶ್ರಮದಲ್ಲಿಯೇ ಇರತೊಡಗಿದರು. ಅಲ್ಲಿದ್ದಾಗಲೇ ಸದ್ಬೋಧ ಚಂದ್ರಿಕ ಎಂಬ ಪತ್ರಿಕೆಯನ್ನೂ ಆರಂಭಿಸಿದರು. ಅಲ್ಲಿಯೂ ಸರಿ ಹೋಗದಾದ ಪರಿಸ್ಥಿತಿ ಉಂಟಾದಾಗ ನೇರ ಹಾವೇರಿಗೆ ಹೋಗಿ, ಅಲ್ಲಿಯ ರಾಮದೇವರ ಗುಡಿಯನ್ನೇ ತಮ್ಮ ವಾಸಸ್ಥಾನವನ್ನಾಗಿ ಮಾಡಿಕೊಂಡು ಇರತೊಡಗಿದರು. ಅಲ್ಲಿಂದಲೇ ಸದ್ಗುರು ಎಂಬ ಪತ್ರಿಕೆಯನ್ನು ಆರಂಭಿಸಿ, ಅದರ ಮೂಲಕ ತಮ್ಮ ಬರವಣಿಗೆಗಳನ್ನು ಪ್ರಕಟಿಸತೊಡಗಿದರು. ಶಾಲಾ ಶಿಕ್ಷಕರಾಗಿ ದುಡಿಯುತ್ತ, ತಮ್ಮ ನಿರಂತರ ಬರವಣಿಗೆ ಮೂಲಕ, ಮಕ್ಕಳಲ್ಲಿ ಸುಸಂಸ್ಕೃತಿಯನ್ನು ಬಿತ್ತುವುದರ ಮೂಲಕ ಸಮಾಜ ಸೇವೆಯನ್ನು ಮುಂದುವರೆಸಿದರು. ಎಲ್ಲರ ಮನದಲ್ಲಿ ಒಂದು ದಿವ್ಯ ಆದರ್ಶ, ಪ್ರೀತಿ, ಕರುಣೆ, ಸಹಾನುಭೂತಿ, ತ್ಯಾಗ, ಸ್ವಾತಂತ್ರ್ಯ, ಸ್ವಾಭಿಮಾನ ಮೂಡಬೇಕು ಎಂಬ ಹೆಬ್ಬಯಕೆ ಅವರದು.

ಅವರ ಸಾಹಿತ್ಯವು ವಿವಿಧ ಮುಖಗಳನ್ನು, ವೈವಿಧ್ಯವನ್ನು ಸೂಸುತ್ತವೆ. ಅವು ಅನುವಾದಿತ, ಸ್ವತಂತ್ರ ಕಾದಂಬರಿಗಳನ್ನು, ಚರಿತ್ರಾರ್ಹ ವ್ಯಕ್ತಿಗಳ, ಮಹಾ ಪುರುಷರ ಜೀವನ ಚರಿತ್ರೆಯನ್ನು, ಪೌರಾಣಿಕ ಕತೆಗಳನ್ನು, ನಿಬಂಧಗಳನ್ನು ಒಳಗೊಂಡಿವೆ. ಒಬ್ಬ ಶಾಲಾ ಮಾಸ್ತರ, ಅದರಲ್ಲೂ ಇತರರ ಸಹಾಯಕ್ಕೆ ಮೊದಲು ಧಾವಿಸುವ ಸ್ವಭಾವದ ವ್ಯಕ್ತಿಯ ಬಳಿ ಲಕ್ಷ್ಮಿ ನೆಲೆ ನಿಲ್ಲಲು ಸಾಧ್ಯವೇ ಗಳಗನಾಥರ ಸಾಲವೂ ಏರುತ್ತಲೇ ಹೋದಾಗ ಅವರು ಬರೆದು ಬರೆದು, ಪುಸ್ತಕಗಳನ್ನು ತಲೆಯ ಮೇಲಿರಿಸಿಕೊಂಡು ಊರೂರು, ಮನೆ ಮನೆ ಅಲೆದು ಪುಸ್ತಕ ಮಾರಾಟ ಮಾಡಲು ಉಪಕ್ರಮಿಸಿದರು. ಆದರೂ ಅವರ ಸಾಲದ ಹೊರೆ ಕಡಿಮೆ ಆಗಲಿಲ್ಲ. ಸರಳತೆ, ಕರುಣೆ, ತ್ಯಾಗ, ಸ್ವಾಭಿಮಾನಗಳ ಸಾಕಾರ ರೂಪದಂತಿದ್ದ ಗಳಗನಾಥರು ಕ್ಯಾನ್ಸರ್ ರೋಗದಿಂದ 1942ರಲ್ಲಿ ತೀರಿಕೊಂಡರು.

ಕೃಷಿ ಪಂಪ್‌ಸೆಟ್‌ಗಳಿಗೆ ಹಗಲು 7 ಗಂಟೆ ವಿದ್ಯುತ್

ಇಂಧನ ಸಚಿವ ಕೆ.ಜೆ.ಜಾರ್ಜ್ ಸ್ಪಷ್ಟನೆ

ಬೆಂಗಳೂರು: ರೈತರ ಕೃಷಿ ಪಂಪ್‌ಸೆಟ್‌ಗಳಿಗೆ ಹಗಲು ವೇಳೆ ನಿರಂತರ 7 ಗಂಟೆ ವಿದ್ಯುತ್ ನೀಡಲು ಸರ್ಕಾರ ಬದ್ಧವಾಗಿದ್ದು, ಅದಕ್ಕಾಗಿ ಕುಸುಮ–ಸಿ ಯೋಜನೆಯಡಿ ಕೃಷಿ ಫೀಡರ್‌ಗಳ ಸೌರೀಕರಣ ಕಾರ್ಯವನ್ನು ತ್ವರಿತಗೊಳಿಸಲಾಗುತ್ತಿದೆ ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ಹೇಳಿದ್ದಾರೆ.



ಪ್ರದೇಶ ಕಾಂಗ್ರೆಸ್ ಕಚೇರಿಗೆ ಶುಕ್ರವಾರ ಭೇಟಿ ನೀಡಿ ಮುಖಂಡರು ಮತ್ತು ಕಾರ್ಯಕರ್ತರ ಅಹವಾಲು ಸ್ವೀಕರಿಸಿದ ಬಳಿಕ ಮಾತನಾಡಿದ ಅವರು, ಕುಸುಮ್–ಸಿ ಯೋಜನೆ ಮೂಲಕ ಕೃಷಿಗೆ ವಿದ್ಯುತ್ ಒದಗಿಸುವ ಉಪ ಕೇಂದ್ರಗಳನ್ನು ಸೌರೀಕರಣಗೊಳಿಸಿ, 2500 ಮೆಗಾ ವ್ಯಾಟ್ ಸೌರ ವಿದ್ಯುತ್ ಉತ್ಪಾದಿಸುವ ಗುರಿಯೊಂದಿಗೆ ರೈತರಿಗೆ ಹಗಲು ವೇಳೆ 7 ಗಂಟೆ ವಿದ್ಯುತ್ ನೀಡಲು ಕ್ರಮ ವಹಿಸಲಾಗುತ್ತಿದೆ.

ದೇಶದಲ್ಲೇ ಅತೀ ಹೆಚ್ಚು ಅದರೆ ಶೇ.80ರಷ್ಟು ಸಬ್ಸಿಡಿಯೊಂದಿಗೆ ಕುಸುಮ್–ಬಿ ಯೋಜನೆಯಡಿ ಸೋಲಾರ್ ಪಂಪ್‌ಸೆಟ್ ಒದಗಿಸುತ್ತಿದ್ದೇವೆ. ಇದು ಕೃಷಿ ಕ್ಷೇತ್ರಕ್ಕೆ ಇಂಧನ ಇಲಾಖೆಯ ಕ್ರಾಂತಿಕಾರಕ ಹೆಜ್ಜೆಯಾಗಿದೆ ಎಂದು ತಿಳಿಸಿದರು.

ರೈತರರಿಗೆ ವಿದ್ಯುತ್ ನೀಡುವ ಮೂಲಕ ಇಂಧನ ಇಲಾಖೆ ರಾಜ್ಯದ ಪ್ರಗತಿಗೆ ಮಹತ್ತರ ಕೊಡುಗೆ ನೀಡುತ್ತಿದೆ. ಗೃಹಜ್ಯೋತಿ ಯೋಜನೆಯಡಿ ಗೃಹ ಬಳಕೆದಾರರಿಗೆ 200 ಯೂನಿಟ್‌ವರೆಗೂ ಉಚಿತ ವಿದ್ಯುತ್ ನೀಡುತ್ತಿದ್ದು 1.65 ಕೋಟಿ ಕುಟುಂಬಗಳಿಗೆ ಬೆಳಕಾಗಿದೆ. ಇಂಧನ ಇಲಾಖೆ ಇರುವ ಸದಾವಕಾಶಗಳನ್ನು ಬಳಸಿಕೊಂಡು ನಾಡಿನ ಜನರ, ಮುಖ್ಯವಾಗಿ ರೈತರ ಏಳಿಗೆಗೆ ಶ್ರಮಿಸುತ್ತಿದೆ ಎಂದರು.

ಸೌರಶಕ್ತಿಯನ್ನು ಕೃಷಿ ಚಟುವಟಿಕೆಗಳಿಗೆ ಸಂಯೋಜಿಸುವ ಮೂಲಕ ವಿದ್ಯುತ್ ಪರಿವರ್ತಕಗಳ ಮೇಲೆ ಬೀಳುತ್ತಿದ್ದ ಒತ್ತಡ ಹಾಗೂ ವಿದ್ಯುತ್ ಕಳ್ಳತನಗಳಿಗೆ ಕಡಿವಾಣ ಹಾಕಲಾಗುತ್ತಿದೆ. ವಿದ್ಯುತ್ ಉತ್ಪಾದನೆಯಲ್ಲಿ ಪ್ರಗತಿ ಸಾಧಿಸಿದ್ದು, ವಿಶ್ವಾಸಾರ್ಹ ಪ್ರಸರಣವನ್ನು ಕಾಯ್ದುಕೊಂಡಿದ್ದೇವೆ ಎಂದು ಹೇಳಿದರು.

ನಮ್ಮ ಗ್ಯಾರಂಟಿ ಯೋಜನೆಗಳು ಜನರಿಗೆ ಆರ್ಥಿಕ ಶಕ್ತಿ ನೀಡಿದೆ. ಸರ್ಕಾರ ಗ್ಯಾರಂಟಿಗಳಿಗೆ ಕಳೆದ ಸಾಲಿನಲ್ಲಿ 55,000 ಕೋಟಿ ರೂ. ಮೀಸಲಿಟ್ಟಿದೆ. ಇದರಲ್ಲಿ ಪ್ರತಿ ಕುಟುಂಬಕ್ಕೆ 5,000 ರೂ. ಸಿಗುತ್ತಿದೆ. ಪ್ರತಿಯಾಗಿ ಕರ್ನಾಟಕ ತಲಾ ಆದಾಯದಲ್ಲಿ ದೇಶದಲ್ಲೇ ನಂಬರ್ ಒನ್ ಸ್ಥಾನದಲ್ಲಿದೆ. ನಾವು ಕಟ್ಟುವ ನಾಲ್ಕು ಲಕ್ಷ ಕೋಟಿ ರೂ. ತೆರಿಗೆ ಹಣದಲ್ಲಿ ಕೇಂದ್ರ ಸರ್ಕಾರ ಕೇವಲ 60,000 ಕೋಟಿ ಹಣವನ್ನು ಮಾತ್ರ ರಾಜ್ಯಕ್ಕೆ ವಾಪಸ್ ನೀಡುತ್ತಿದೆ. ನಮ್ಮ ರಾಜ್ಯದ ಅಭಿವೃದ್ಧಿಗೆ ಕೇಂದ್ರವೇ ಅಡ್ಡಗಾಲಾಗಿದೆ ಎಂದು ಸಚಿವರು ಆರೋಪಿಸಿದರು.

ಗಾಂಜಾ ಮಾರಾಟಕ್ಕೆ ಯತ್ನ ; ಒಬ್ಬನ ಬಂಧನ

ಮತ್ತೊಬ್ಬ ಪರಾರಿ ; ಬಂಧಿತನಿಂದ 12.52 ಲಕ್ಷ ರೂ. ಮೌಲ್ಯದ 25.06 ಕೆಜಿ ಗಾಂಜಾ ವಶಕ್ಕೆ

ಮೈಸೂರು,ಫೆ.28(ಪಿಎಂ)– ಗಾಂಜಾ ಮಾರಾಟಕ್ಕೆ ಯತ್ನಿಸುತ್ತಿದ್ದ ಇಬ್ಬರ ಪೈಕಿ ಒಬ್ಬನನ್ನು ಬಂಧಿಸುವಲ್ಲಿ ಉದಯಗಿರಿ ಪೊಲೀಸರು ಯಶಸ್ವಿಯಾಗಿದ್ದು, ಮತ್ತೊಬ್ಬ ಪರಾರಿಯಾಗಿದ್ದಾನೆ. ಬಂಧಿತನಿಂದ 12.52 ಲಕ್ಷ ರೂ. ಮೌಲ್ಯದ 25.06 ಕೆಜಿ ಗಾಂಜಾ ವಶ ಪಡಿಸಿಕೊಳ್ಳಲಾಗಿದೆ.

ಚನ್ನರಾಯಪಟ್ಟಣದ ವೈ.ವರುಣ್ (26) ಬಂಧಿತ ಆರೋಪಿ. ಈತ ಪ್ಲಂಬಿಂಗ್ ಕೆಲಸಗಾರನಾಗಿದ್ದು, ಈತನ ಜೊತೆಯಿದ್ದ ಶಬ್ಬಿರ್ ಎಂಬಾತ ಪರಾರಿಯಾಗಿದ್ದಾನೆ. ಫೆ.24ರಂದು ಮಧ್ಯಾಹ್ನ ಉದಯಗಿರಿ ಪೊಲೀಸರು ಗಸ್ತಿನಲ್ಲಿದ್ದಾಗ ರಾಜೀವನಗರ 2ನೇ ಹಂತದದಲ್ಲಿನ ಶ್ರೀನಿಧಿ ಲೇಔಟ್ ಬಳಿ ಗಾಂಜಾ ಮಾರಾಟಕ್ಕೆ ಯತ್ನಿಸುತ್ತಿದ್ದ ಈತ ಸಿಕ್ಕಿಬಿದ್ದಿದ್ದಾನೆ. ಈ ವೇಳೆ ಈತನೊಂದಿಗೆ ಇದ್ದ ಶಬ್ಬಿರ್ ಸ್ಕೂಟರ್‌ನಲ್ಲಿ ಪರಾರಿಯಾಗಿದ್ದಾನೆ.

ಗಾಂಜಾವನ್ನು ಶಬ್ಬಿರ್ ಖರೀದಿಸಿ ತಂದಿದ್ದ. ಇಂದು ನಾವಿಬ್ಬರು ಅದನ್ನು ಮಾರಾಟ ಮಾಡಲು ಬಂದಿದ್ದೆವು ಎಂದು ವಿಚಾರಣೆ ವೇಳೆ ವರುಣ್ ತಪ್ಪೊಪ್ಪಿಕೊಂಡಿದ್ದಾನೆ. ವರುಣ್ ಬಳಿಯಿದ್ದ ಚೀಲದೊಳಗೆ ಎರಡು ಪ್ರತ್ಯೇಕ ಪೊಟ್ಟಣಗಳಿದ್ದು, ಅದರಲ್ಲಿ ಹೂವು, ಕಾಂಡಾ ಮತ್ತು ಎಲೆಗಳಿಂದ ಕೂಡಿದ ಗಾಂಜಾ ಪತ್ತೆಯಾಗಿದೆ. ಪೊಟ್ಟಣಗಳಲ್ಲಿ ಕ್ರಮವಾಗಿ 13 ಕೆಜಿ 485 ಗ್ರಾಂ ಮತ್ತು 11 ಕೆಜಿ 575 ಗ್ರಾಂ ಗಾಂಜಾ ಸಿಕ್ಕಿದೆ. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿರುವ ಉದಯಗಿರಿ ಪೊಲೀಸರು, ಮತ್ತೊಬ್ಬ ಆರೋಪಿ ಶಬ್ಬಿರ್‌ಗಾಗಿ ಶೋಧ ನಡೆಸುತ್ತಿದ್ದಾರೆ.

ಮೈಸೂರು ಪಾರಂಪರಿಕ ಕಟ್ಟಡಗಳ ರಕ್ಷಣೆಗೆ 500 ಕೋಟಿ ರೂ. ಮೀಸಲಿಡಿ; ಸರ್ಕಾರಕ್ಕೆ ಪಾರಂಪರಿಕ ತಜ್ಞ ಪ್ರೊ.ರಂಗರಾಜು ಆಗ್ರಹ

- ಖಾಸಗಿ ಮಾಲೀಕತ್ವದ ಪಾರಂಪರಿಕ ಕಟ್ಟಡಗಳ ರಕ್ಷಣೆಗೆ ಪಾಲಿಕೆ ನಿರಾಸಕ್ತಿ
- ಮೈಸೂರು ವಿವಿ ವ್ಯಾಪ್ತಿಯಲ್ಲೇ 22 ಪಾರಂಪರಿಕ ಕಟ್ಟಡಗಳಿವೆ; ಇವುಗಳ ರಕ್ಷಣೆಗೆ ಏನು ಕ್ರಮ ಇಲ್ಲ

ಮೈಸೂರು, ಫೆ.28(ಎಂಟಿವೈ)– ರಾಜ್ಯ ಸರ್ಕಾರ ಮೈಸೂರಲ್ಲಿ ಅಪಾಯಕಾರಿ ಸ್ಥಿತಿಯಲ್ಲಿರುವ ಪಾರಂಪರಿಕ ಕಟ್ಟಡಗಳ ರಕ್ಷಣೆಗಾಗಿ ಬಜೆಟ್‌ನಲ್ಲಿ 500 ಕೋಟಿ ರೂ. ಮೀಸಲಿಡಬೇಕು. ಖಾಸಗಿ ಮಾಲೀಕತ್ವದ ಪಾರಂಪರಿಕ ಕಟ್ಟಡಗಳ ಸಂರಕ್ಷಣೆಗೆ ಮೈಸೂರು ಮಹಾನಗರ ಪಾಲಿಕೆ ನೆರವಾಗಬೇಕು ಎಂದು ಪಾರಂಪರಿಕ ತಜ್ಞ ಪ್ರೊ. ಎನ್.ಎಸ್.ರಂಗರಾಜು ಒತ್ತಾಯಿಸಿದ್ದಾರೆ.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಅವರು, ಮೈಸೂರಲ್ಲಿರುವ ಪಾರಂಪರಿಕ ಕಟ್ಟಡಗಳ ಸಂರಕ್ಷಣೆಗೆ ಮೈಸೂರು ಮಹಾನಗರ ಪಾಲಿಕೆ ಈಗ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ. ಮೈಸೂರನ್ನು ಕೇವಲ ಪಾರಂಪರಿಕ ನಗರ ಎಂದು ಘೋಷಿಸಿದರೆ ಸಾಲದು, ಇಲ್ಲಿನ ಪಾರಂಪರಿಕ ಕಟ್ಟಡಗಳ ಸಂರಕ್ಷಣೆಗೂ ಒತ್ತು ನೀಡಬೇಕು. ಆದರೆ, ಇದುವರೆಗೂ ಪಾರಂಪರಿಕ ಕಟ್ಟಡಗಳ ರಕ್ಷಣೆಗೆ ಯಾವುದೇ ಕ್ರಮ ಕೈಗೊಳ್ಳದ ಕಾರಣ ಲ್ಯಾನ್ಸ್‌ಡೌನ್ ಕಟ್ಟಡ, ಮಹಾರಾಣಿ ವಿಜ್ಞಾನ ಕಾಲೇಜಿನ ಕಟ್ಟಡವನ್ನು ಕಳೆದುಕೊಂಡಿದ್ದೇವೆ. ದೇವರಾಜ ಮಾರುಕಟ್ಟೆಯ ಒಂದು ಭಾಗ ಕುಸಿದಿದೆ. ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ 22 ಪಾರಂಪರಿಕ ಕಟ್ಟಡಗಳಿದ್ದು ಕೆಲವು ದುರ್ಬಲಗೊಂಡಿವೆ. ಅವುಗಳ ರಕ್ಷಣೆಗೆ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ವಿಷಾದಿಸಿದರು.

ಸಮಿತಿ ರಚನೆಗೆ ಆಗ್ರಹ: ದುರ್ಬಲಗೊಂಡಿರುವ ಪಾರಂಪರಿಕ ಕಟ್ಟಡಗಳ ಸಮೀಕ್ಷೆ ಮಾಡಲು ಮೈಸೂರು ಮಹಾನಗರ ಪಾಲಿಕೆ ಸಮಿತಿಯೊಂದನ್ನು ರಚಿಸಬೇಕು. ಆ ಸಮಿತಿ ಅಪಾಯಕಾರಿ ಸ್ಥಿತಿ ತಲುಪಿರುವ ಪಾರಂಪರಿಕ ಕಟ್ಟಡ ಹಾಗೂ ಅವುಗಳ ಮಾಲೀಕರ ಪಟ್ಟಿ ತಯಾರಿಸಬೇಕು. ಪಾಲಿಕೆಯಿಂದ ಖಾಸಗಿ ಒಡೆತನದ ಶಿಥಿಲಗೊಂಡಿರುವ ಪಾರಂಪರಿಕ ಕಟ್ಟಡಗಳ ಮಾಲೀಕರಿಗೆ ನೋಟಿಸ್ ನೀಡಬೇಕು. ಅಲ್ಲದೆ, ಅಪಾಯಕಾರಿ ಕಟ್ಟಡದ ತೆರವಿಗೆ ಅನುಮತಿ ನೀಡಿ, ಅದರಿಂದಾಗುವ ಅನಾಹುತಗಳಿಗೆ ಪಾಲಿಕೆ ಹೊಣೆಯಲ್ಲ ಎಂದು ಸಂದೇಶ ನೀಡಬೇಕು. ಆಗ ಮಾತ್ರ ಅಪಾಯಕಾರಿ ಕಟ್ಟಡಗಳ ತೆರವಿಗೆ ಅದರ ಮಾಲೀಕರು ಕ್ರಮ ಕೈಗೊಳ್ಳುತ್ತಾರೆ. ಇಲ್ಲದಿದ್ದರೆ, ಆ ಕಟ್ಟಡಗಳು ಹಠಾತ್ ಕುಸಿದು, ಅದರಿಂದ ಜೀವ ಹಾನಿ ಸಂಭವಿಸಿದರೆ ಪಾಲಿಕೆಯನ್ನೇ ಹೊಣೆ ಮಾಡುತ್ತಾರೆ. ಈ ಹಿನ್ನೆಲೆಯಲ್ಲಿ ಪಾಲಿಕೆ ಕಟ್ಟುನಿಟ್ಟಿನ ಕ್ರಮ ಕೈಗೊಂಡು ಮಳೆಗಾಲ ಆರಂಭಕ್ಕು ಮುನ್ನ ದುರ್ಬಲ ಕಟ್ಟಡಗಳ ತೆರವಿಗೆ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.




ಪ್ರೊ.ರಂಗರಾಜು

ತೆರಿಗೆ ವಿನಾಯಿತಿಗೆ ಸಲಹೆ: ಮೈಸೂರಿಗೆ ಪಾರಂಪರಿಕ ಕಟ್ಟಡಗಳೇ ಹೆಗ್ಗುರುತು. ಅವುಗಳ ರಕ್ಷಣೆಗೆ ರಾಜ್ಯ ಸರ್ಕಾರವೂ ಮುಂದಾಗಬೇಕು. ಸರ್ಕಾರ ಬಜೆಟ್‌ನಲ್ಲಿ 500 ಕೋಟಿ ಮೀಸಲಿಟ್ಟು ಪಾರಂಪರಿಕ ಕಟ್ಟಡಗಳ ಸಂರಕ್ಷಣೆಗೆ ಕ್ರಮ ಕೈಗೊಳ್ಳಬೇಕು. ಖಾಸಗಿ ಒಡೆತನದ ಪಾರಂಪರಿಕ ಕಟ್ಟಡಗಳ ರಕ್ಷಣೆಗೆ ಕ್ರಮ ಕೈಗೊಳ್ಳಲು ಕೆಲವು ವಿನಾಯಿತಿ ನೀಡಬೇಕು. ಅಂತಹ ಕಟ್ಟಡಗಳಿಗೆ ಉಚಿತ ವಿದ್ಯುತ್, ಉಚಿತ ನೀರು ಪೂರೈಸುವುದರೊಂದಿಗೆ ತೆರಿಗೆ ವಿನಾಯಿತಿ ನೀಡಬೇಕು. ಕಟ್ಟಡದ ದುರಸ್ಥಿಗೆ ಧನಸಹಾಯ ಮಾಡಬೇಕು. ಇಂತಹ ಕ್ರಮದಿಂದ ಪಾರಂಪರಿಕ ಕಟ್ಟಡಗಳನ್ನು ಉಳಿಸಿಕೊಳ್ಳಬಹುದು ಎಂದು ಅಭಿಪ್ರಾಯಪಟ್ಟರು.

ಸಿಎಸ್‌ಆರ್ ಫಂಡ್ ಬಳಸಬಹುದು: ಮೈಸೂರಲ್ಲಿರುವ ಪಾರಂಪರಿಕ ಕಟ್ಟಡಗಳ ಸಂರಕ್ಷಣೆಗೆ ಸಿಎಸ್‌ಆರ್ ಫಂಡ್ ಬಳಸಬಹುದಾಗಿದೆ. ವಿವಿಧ ಬೃಹತ್ ಕಂಪನಿಗಳನ್ನು ಸಂಪರ್ಕಿಸಿ, ಸರ್ಕಾರಿ ಸ್ವಾಮ್ಯದ ಪಾರಂಪರಿಕ ಕಟ್ಟಡಗಳನ್ನು ಸಿಎಸ್‌ಆರ್ ಫಂಡ್‌ನಲ್ಲಿ ಅವುಗಳನ್ನು ದುರಸ್ತಿ ಮಾಡಿಸಲು ಕೋರಬಹುದು. ಸಿಎಸ್‌ಆರ್ ಫಂಡ್ ಬಳಸಿ ದುರಸ್ತಿ ಮಾಡಿಸಿದ ನಂತರ ಕಟ್ಟಡದ ಮುಂದೆ ಆ ಕಂಪನಿಯ ಹೆಸರಿನ ಫಲಕ ಅಳವಡಿಸಲು ಅವಕಾಶ ನೀಡಬೇಕು. ಇದರಿಂದ ದೊಡ್ಡ ದೊಡ್ಡ ಕಂಪನಿಗಳು ಪಾರಂಪರಿಕ ಕಟ್ಟಡಗಳ ಸಂರಕ್ಷಣೆಗೆ ಮುಂದೆ ಬರುತ್ತವೆ. ಮೈಸೂರಿನ ಮಹಾರಾಜ ಹಾಗೂ ಯುವರಾಜ ಕಾಲೇಜು ಸೇರಿದಂತೆ ವಿವಿಧ ಕಾಲೇಜಿನ ಕಟ್ಟಡಗಳನ್ನು ತುರ್ತಾಗಿ ದುರಸ್ತಿ ಮಾಡಲು ಕ್ರಮ ಕೈಗೊಳ್ಳಬೇಕಾಗಿದೆ ಎಂದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಜ್ಯೋತಿಷಿ ಹೇಳಿದ 'ನೀನು ಅಲ್ಪಾಯುಷಿ'; ನೇಣು ಬಿಗಿದುಕೊಂಡು ಟೆಕ್ಕಿ ಆತ್ಮಹತ್ಯೆ!



ಬೆಂಗಳೂರು, ಫೆ.28– ಜ್ಯೋತಿಷಿಯೊಬ್ಬರ ಮಾತು ನಂಬಿ ಬೆಂಗಳೂರಿನ ಮಹಿಳಾ ಟೆಕ್ಕಿಯೊಬ್ಬರು ನೇಣು ಬಿಗಿದು ಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಬೆಂಗಳೂರಿನ ಬಾಗಲಗುಂಟೆಯ ಎಂಇಐ ಲೇಔಟ್‌ನಲ್ಲಿ ಸಂಭವಿಸಿದೆ.

ವಿದ್ಯಾಜ್ಯೋತಿ (29) ನೇಣುಬಿಗಿದು ಕೊಂಡು ಆತ್ಮಹತ್ಯೆ ಶರಣಾಗಿರುವ ಯುವತಿ. ಖಾಸಗಿ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದು, ಸದ್ಯ ವರ್ಕ್ ಫ್ರಂ ಹೋಮ್‌ನಲ್ಲಿದ್ದರು. ಮೃತ ವಿದ್ಯಾಜ್ಯೋತಿಗೆ ಜ್ಯೋತಿಷಿಯೊಬ್ಬರು ನೀನು ಅಲ್ಪಾಯುಷಿ ಎಂದು ಭವಿಷ್ಯ ನುಡಿದಿದ್ದರಂತೆ.

ಕೊಡಗು ಮೂಲದ ಯುವಕನನ್ನ ಪ್ರೀತಿಸುತ್ತಿದ್ದ ವಿದ್ಯಾ ಇಷ್ಟದಂತೆ ಎರಡೂ ಮನೆಯವರು ಒಪ್ಪಿಗೆ ಸೂಚಿಸಿ, ಮದುವೆ ಮಾಡಿಕೊಡಲು ಒಪ್ಪಿಕೊಂಡಿದ್ದರು. ಜ್ಯೋತಿಷಿ 9 ದಿನ ಪೂಜೆ ಮಾಡಲು ಸೂಚಿಸಿದ್ದರು. ಅದರಂತೆ ಮನೆಯಲ್ಲಿ ಒಂಬತ್ತನೇ ದಿನದ ಪೂಜೆ ನಡೆಯುತ್ತಿತ್ತು. ಕೊನೆಯ ದಿನವಾದ್ದರಿಂದ ಮಾರಮ್ಮ ದೇವರಿಗೆ ತಾಳಿ ಕೊಡುವಂತೆ ಜ್ಯೋತಿಷಿ ತಿಳಿಸಿದ್ದರು.

ಮನೆಯಲ್ಲಿ ಎಲ್ಲಾ ಸಿದ್ಧತೆ ಮಾಡಿಕೊಂಡಿದ್ದರು. ಊಟದ ನಂತರ ವಿದ್ಯಾ ರೂಂಗೆ ಹೋಗಿದ್ದಳು. ಸಂಜೆ ತಾಯಿ ಕೂಗಿದ್ದರೂ ವಿದ್ಯಾ ಹೊರ ಬಂದಿರಲಿಲ್ಲ. ಕೆಲಸ ಮಾಡುತ್ತಿರಬೇಕೆಂದು ಎಲ್ಲರೂ ಸುಮ್ಮನಾಗಿದ್ದರು. ರಾತ್ರಿ 8 ಗಂಟೆ ಸುಮಾರಿಗೆ ತಾಯಿ ದೇವಸ್ಥಾನಕ್ಕೆ ತೆರಳಲು ವಿದ್ಯಾಳನ್ನು ಕರೆದಿದ್ದರು.

ಬಾಗಿಲನ್ನು ತೆಗೆಯದೇ ಇದ್ದಾಗ ಅನುಮಾನಗೊಂಡು ಕಿಟಕಿಯಲ್ಲಿ ನೋಡಿದಾಗ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವುದು ಬೆಳಕಿಗೆ ಬಂದಿದೆ. ಘಟನೆ ಸಂಬಂಧ ಬಾಗಲಗುಂಟೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಿದ್ದಾರೆ.

ಎಂ.ಯೋಗೇಂದ್ರ ಅವರಿಗೆ ಸನ್ಮಾನ



ಕೇಂದ್ರ ಜಿಎಸ್‌ಟಿ ಮತ್ತು ಕಸ್ಟಮ್ಸ್ ಕ್ರೀಡಾ ಮತ್ತು ಸಾಂಸ್ಕೃತಿಕ ಸಂಘವು, ಕ್ರೀಡಾ ಕ್ಷೇತ್ರದಲ್ಲಿನ ಸಾಧನೆಗಾಗಿ ನಿವೃತ್ತ ಕಸ್ಟಮ್ಸ್ ಮತ್ತು ಕೇಂದ್ರ ಅಬಕಾರಿ ಅಧೀಕ್ಷಕ ಎಂ ಯೋಗೇಂದ್ರ ಅವರನ್ನು ಶನಿವಾರ ಬೆಂಗಳೂರಿನ ಎನ್‌ಎಸಿಐಎನ್ ನಲ್ಲಿ ನಿವೃತ್ತ ಪ್ರಧಾನ ಆಯುಕ್ತ ಜಿ ನಾರಾಯಣಸ್ವಾಮಿ, ಆಯುಕ್ತರಾದ ಎರಿಖಲ್ಮತಿ ಕೆ, ಹೆಚ್ಚುವರಿ ಆಯುಕ್ತ ಸುಜಿತ್ ಕುಮಾರ್ ಸೋಂಪುರೆ ಸನ್ಮಾನಿಸಿದರು.

ಯುರೋ ಕಿಡ್ಸ್ ಶಾಲೆಯಲ್ಲಿ ಹೆಲ್ತ್‌ಇಸ್ ವೆಲ್ತ್



ಯುರೋ ಕಿಡ್ಸ್‌ನ ಮಕ್ಕಳು ಹೆಲ್ತ್‌ಇಸ್ ವೆಲ್ತ್ ಕ್ರೀಡಾಚಟುವಟಿಕೆಯಲ್ಲಿ ಭಾಗವಹಿಸಿದ್ದರು


ಮೈಸೂರು, ಫೆ.28– ನಗರದ ಆಲನಹಳ್ಳಿ ಬಡಾವಣೆಯ ಡಾಕ್ಟರ್ಸ್ ಕಾರ್ನರ್‌ನಲ್ಲಿರುವ ಹೆಲ್ತ್‌ಇಸ್ ವೆಲ್ತ್ (ಆರೋಗ್ಯವೇ ಭಾಗ್ಯ) ಕಾರ್ಯಕ್ರಮಕ್ಕೆ ಶನಿವಾರ ಶಾಲೆಯ ಆವರಣದಲ್ಲಿ ಅಂತರರಾಷ್ಟ್ರೀಯ ಅಥ್ಲೇಟಿಕ್ಸ್ ತರಬೇತಿದಾರ ಸುಮಂತ್ ಕೆ.ಪಿ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಇಂದಿನ ಮಕ್ಕಳು ಕ್ರೀಡೆಯಲ್ಲಿ ಭಾಗವಹಿಸುವುದು ಆರೋಗ್ಯಕರ ಬೆಳವಣಿಗೆ. 4 ವರ್ಷ ಮೇಲ್ಪಟ್ಟ ಎಲ್ಲಾ ಮಕ್ಕಳು ಕ್ರೀಡೆಯಲ್ಲಿ ತೊಡಗಿಸಿ ಕೊಳ್ಳುವಂತೆ ಪೋಷಕರು ಪ್ರೋತ್ಸಾಹ ನೀಡಬೇಕೆಂದು ತಿಳಿಸಿದರು. ಸಧೃಡ ಆರೋಗ್ಯವನ್ನು ಹೊಂದಲು ಪೌಷ್ಠಿಕ ಆಹಾರಗಳನ್ನು ಪ್ರತಿನಿತ್ಯವೂ ಸೇವಿಸಬೇಕು. ಶಾಲಾ ಕಾಲೇಜಿನಲ್ಲಿ ಬೌದ್ಧಿಕ ಹಾಗೂ ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಹೊಂದಲು ಕ್ರೀಡಾ ಚಟುವಟಿಕೆಗಳು ಅತ್ಯಂತ ಸಹಕಾರಿ ಎಂದರು.

ಶಾಲೆಯ ಸಂಸ್ಥಾಪಕ ಅಧ್ಯಕ್ಷ ಕೃಷ್ಣೇಗೌಡ ಹಾಗಲಹಳ್ಳಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಸಂಸ್ಥೆ ಗೌರವ ಕಾರ್ಯದರ್ಶಿ ಶ್ರೀಮತಿ ಶಿಲ್ಪಾ, ಮುಖ್ಯೋ ಪಾಧ್ಯಾಯರಾದ ಶ್ರೀಮತಿ ಚೈತ್ರಾ, ಶಿಕ್ಷಕಿಯರಾದ ಅಮೃತ, ನವ್ಯ, ಕುಸುಮ, ಹರ್ಷಿತಾ, ಶಿಲ್ಪ ಉಪಸ್ಥಿತರಿದ್ದರು. ನಂತರ ಶಾಲೆಯ ಚಿಣ್ಣರು ವಿವಿಧ ಕ್ರೀಡೆಗಳಲ್ಲಿ ಭಾಗವಹಿಸಿ ಬಹುಮಾನ ಪಡೆದು ಕೊಂಡರು.

130ನೇ ಮಾಸಿಕ ಸಾಮೂಹಿಕ ವಿವಾಹ



ಸುತ್ತೂರು ಶ್ರೀಮಠದಲ್ಲಿ ಜರುಗಿದ 130ನೇ ಮಾಸಿಕ ಸಾಮೂಹಿಕ ವಿವಾಹದಲ್ಲಿ ಒಂಭತ್ತು ಜೋಡಿಗಳು ಸತಿ–ಪತಿಗಳಾದರು. ಚಿತ್ರದಲ್ಲಿ ಸಂಸ್ಥೆಯ ಮುಖ್ಯಸ್ಥರು ಹಾಗೂ ಸಿಬ್ಬಂದಿ ವರ್ಗದವರಿದ್ದಾರೆ.

ಜೆಎಸ್‌ಎಸ್ ಮಹಿಳಾ ಕಾಲೇಜಿಗೆ ಮೈಸೂರು ವಿಶ್ವವಿದ್ಯಾನಿಲಯ ಅಂತರ ಕಾಲೇಜು ಚಾಮುಂಡಿ ವಲಯ ಕ್ರೀಡಾಕೂಟದ ಚಾಂಪಿಯನ್ಸ್




ಮೈಸೂರಿನ ಸರಸ್ವತಿಪುರಂ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ನಡೆದ ಮೈಸೂರು ವಿಶ್ವವಿದ್ಯಾನಿಲಯ ಅಂತರ ಕಾಲೇಜುಗಳ ಚಾಮುಂಡಿ ವಲಯ ಮಹಿಳಾ ಕ್ರೀಡಾಕೂಟದಲ್ಲಿ ಜೆಎಸ್‌ಎಸ್ ಮಹಿಳಾ ಕಾಲೇಜಿನ ಕ್ರೀಡಾಪಟುಗಳು ಭಾಗವಹಿಸಿ ಕಬಡ್ಡಿ ಪ್ರಥಮ ಸ್ಥಾನ, ಥ್ರೋಬಾಲ್ ಪ್ರಥಮ ಸ್ಥಾನ, ಬ್ಯಾಡ್ಮಿಂಟನ್ ಪ್ರಥಮ ಸ್ಥಾನ, ಟೆನ್ನಿಕಾಯ್ಟ್ ದ್ವಿತೀಯ ಸ್ಥಾನ, ಬಾಲ್ ಬ್ಯಾಡ್ಮಿಂಟನ್ ದ್ವಿತೀಯ ಸ್ಥಾನ, ವಾಲಿಬಾಲ್ ದ್ವಿತೀಯ ಸ್ಥಾನ ಪಡೆದುಕೊಂಡರು. ವಿಜೇತರಾದ ಕ್ರೀಡಾಪಟುಗಳಿಗೆ ಜೆಎಸ್‌ಎಸ್ ಮಹಿಳಾ ಕಾಲೇಜಿನ ಅಕಾಡೆಮಿಕ್ ಕೌನ್ಸಿಲ್‌ನ ಸದಸ್ಯ ಡಾ. ಸಿ ನಾಗಣ್ಣ, ವಿಶ್ರಾಂತ ಇಂಗ್ಲೀಷ್ ಪ್ರಾಧ್ಯಾಪಕ ಡಾ. ಕೆ ರಾಮಚಂದ್ರ, ಚಾರ್ಟರ್ಡ್ ಅಕೌಂಟೆಂಟ್ ಶಿವಾನಂದ, ಕಾಲೇಜಿನ ಪ್ರಾಂಶುಪಾಲ ಡಾ. ರೇಚಣ್ಣ, ದೈಹಿಕ ಶಿಕ್ಷಣ ನಿರ್ದೇಶಕರಾದ ಶ್ರೀಮತಿ ರಶ್ಮಿ ಎ, ಅಧ್ಯಾಪಕ ಮತ್ತು ಅಧ್ಯಾಪಕೇತರರು ಹಾಗೂ ವಿದ್ಯಾರ್ಥಿನಿಯರು ಅಭಿನಂದಿಸಿದ್ದಾರೆ.

ಭಯ ಹುಟ್ಟಿಸುತ್ತಿರುವ ಮೈಸೂರು ಪಾರಂಪರಿಕ ಕಟ್ಟಡಗಳು

● ಸ್ಥಳೀಯ ಆಡಳಿತ ಏನೂ ಕ್ರಮ ಕೈಗೊಳ್ಳದೆ ಒಂದೊಂದಾಗಿ ಧರೆಗುರುಳುವ ಭೀತಿ ● ಬರೀ ಬಾಯಲ್ಲಿ 'ಪಾರಂಪರಿಕ ನಗರಿ' ಎಂದರೆ ಪ್ರಯೋಜನವಾಗದು; ರಕ್ಷಣೆ ಕೈಗೊಳ್ಳದ ಬಗ್ಗೆ ಜನರ ಬೇಸರ





ಮೈಸೂರಿನ ಸಯ್ಯಾಜಿರಾವ್ ರಸ್ತೆಯಲ್ಲಿರುವ ಖಾಸಗಿ ಒಡೆತನದ ಪಾರಂಪರಿಕ ಕಟ್ಟಡದ ಮೇಲ್ಛಾವಣಿಯ ಸಜ್ಜಾ ಕುಸಿದಿರುವುದು.

ಮೈಸೂರು, ಫೆ.28(ಎಂಟಿವೈ)– ಪಾರಂಪರಿಕ ನಗರ ಹೆಗ್ಗಳಿಕೆಗೆ ಪಾತ್ರವಾಗಿರುವ ಮೈಸೂರಲ್ಲಿರುವ ಪಾರಂಪರಿಕ ಕಟ್ಟಡಗಳು ನಿರ್ವಹಣೆ ಕೊರತೆಯಿಂದಾಗಿ ಶಿಥಿಲಾವಸ್ಥೆ ತಲುಪಿ, ಅಪಾಯದ ಮುನ್ಸೂಚನೆ ನೀಡುತ್ತಿದ್ದು, ಕೂಡಲೇ ಮೈಸೂರು ಮಹಾನಗರ ಪಾಲಿಕೆ ಸೂಕ್ತ ಕ್ರಮ ಕೈಗೊಂಡು ಸಂಭವನೀಯ ಅನಾಹುತ ತಡೆಗೆ ಕ್ರಮ ಕೈಗೊಳ್ಳುವಂತೆ ನಾಗರಿಕರು ಆಗ್ರಹಿಸಿದ್ದಾರೆ.

ಮೈಸೂರಲ್ಲಿ ಸರ್ಕಾರಿ ಹಾಗೂ ಖಾಸಗಿ ಒಡೆತನದ 500ಕ್ಕೂ ಪಾರಂಪರಿಕ ಕಟ್ಟಡಗಳಿದ್ದು, ಅವುಗಳಲ್ಲಿ ಬಹುತೇಕ ನಿರ್ವಹಣೆ ಕೊರತೆಯಿಂದ ಅಪಾಯಕಾರಿ ಸ್ಥಿತಿ ತಲುಪಿವೆ. ಈಗಾಗಲೇ ಲ್ಯಾನ್ಸ್‌ಡೌನ್ ಬಿಲ್ಡಿಂಗ್, ಮಹಾರಾಣಿ ವಿಜ್ಞಾನ ಕಾಲೇಜು ಕಟ್ಟಡ ಹಾಗೂ ದೇವರಾಜ ಮಾರುಕಟ್ಟೆಗೆ ಸೇರಿದ ಒಂದು ಭಾಗ ಕುಸಿದು ಬಿದ್ದಿವೆ. ದಶಕಗಳೇ ಕಳೆದರೂ ಲ್ಯಾನ್ಸ್‌ಡೌನ್ ಬಿಲ್ಡಿಂಗ್ ದುರಸ್ತಿ ಅಥವಾ ಮರು ನಿರ್ಮಾಣ ಸಂಬಂಧ ಸರ್ಕಾರ ಯಾವುದೇ ಕ್ರಮ ಕೈಗೊಳ್ಳದೇ ಇರುವುದರಿಂದ ಪಾರಂಪರಿಕ ಕಟ್ಟಡಗಳ ದುಸ್ಥಿತಿ ಕೇಳುವವರೇ ಇಲ್ಲದಂತಾಗಿದೆ. ಅಧಿಕಾರಿಗಳ ನಿರ್ಲಕ್ಷ್ಯದಿಂದಾಗಿ ಅಮಾಯಕರ ಜೀವ ಬಲಿ ಪಡೆಯುವ ಸ್ಥಿತಿಯಲ್ಲಿ ಹಲವು ಕಟ್ಟಡಗಳಿದ್ದು, ಕೂಡಲೇ ಎಚ್ಚೆತ್ತುಕೊಳ್ಳುವಂತೆ ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಮೈಸೂರಿನ 17 ಪಾರಂಪರಿಕ ರಸ್ತೆಗಳಲ್ಲಿ ಸಯ್ಯಾಜಿರಾವ್ ರಸ್ತೆಯೂ ಒಂದಾಗಿದ್ದು, ಕೆ.ಆರ್.ವೃತ್ತದಿಂದ ಹೈವೇ ವೃತ್ತದವರೆಗೆ ಸರ್ಕಾರಿ ಹಾಗೂ ಖಾಸಗಿ ಒಡೆತನದ ಹಲವು ಪಾರಂಪರಿಕ ಕಟ್ಟಡಗಳು ಇಲ್ಲಿವೆ. ಅದರಲ್ಲಿ ಧನ್ವಂತ್ರಿ ರಸ್ತೆ ಜಂಕ್ಷನ್ ಎದುರಿನ ಖಾಸಗಿ ಕಟ್ಟಡ ಅಪಾಯಕಾರಿ ಹಂತ ತಲುಪಿದೆ. ಈ ಕಟ್ಟಡದ ಮೇಲ್ಛಾವಣಿ ಹಾಗೂ ಸಜ್ಜಾದ ಗೋಡೆ ಮೇಲೆ ಗಿಡ–ಮರ ಬೆಳೆದಿದ್ದು, ಅವುಗಳ ಬೇರು ಕಟ್ಟಡದ ಗೋಡೆಯನ್ನು ಶಿಥಿಲಗೊಳಿಸಿವೆ. ಈ ಮಧ್ಯೆ ಕಳೆದ ನಾಲ್ಕು ದಿನದ ಹಿಂದೆ ಸುರಿದ ಮಳೆಗೆ ಕಟ್ಟಡದ ಸಜ್ಜಾ ಕುಸಿದಿದ್ದು, ಅಪಾಯದ ಮುನ್ಸೂಚನೆ ನೀಡಿದೆ.

ಸದಾ ಭಾರೀ ಜನ, ವಾಹನ ಸಂಚಾರವಿರುವ ಸಯ್ಯಾಜಿರಾವ್ ರಸ್ತೆಯಲ್ಲಿ ಶುಕ್ರವಾರ ಸಂಜೆ 4.30ರಲ್ಲಿ ಕಟ್ಟಡದ ಮೇಲ್ಛಾವಣಿಯ ಸಜ್ಜಾ ಕುಸಿದು ಬಿದ್ದಿದೆ. ಅದೃಷ್ಟವಶಾತ್ ಈ ವೇಳೆ ಪಾದಚಾರಿ ಮಾರ್ಗದಲ್ಲಿ ಯಾರೂ ಸಂಚರಿಸದ ಕಾರಣ ಯಾವುದೇ ಹಾನಿಯಾಗಿಲ್ಲ. ಘಟನೆ ಬಳಿಕ ಎರಡು ಕಡೆ ಬ್ಯಾರಿಕೇಡ್ ಅಳವಡಿಸಲಾಗಿದೆ. ಆದರೆ, ಅದೇ ಕಟ್ಟಡದಲ್ಲಿರುವ ಮೆಡಿಕಲ್ ಶಾಪ್ ಕಾರ್ಯನಿರ್ವಹಿಸುತ್ತಿದ್ದು, ಅಲ್ಲಿಗೆ ಬಂದು ಹೋಗುವ ಗ್ರಾಹಕರ ಸಂಖ್ಯೆಯೂ ಹೆಚ್ಚಾಗಿದೆ. ಸಜ್ಜಾ ಕುಸಿದ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸದೇ ಇರುವುದು ಎದ್ದು ಕಾಣುತ್ತಿದೆ.

ಆ ಕಟ್ಟಡದ ಹಿಂಭಾಗದ ಗೋಡೆಯೂ ಶಿಥಿಲಾವಸ್ಥೆ ತಲುಪಿದ್ದು, ಅಲ್ಲಿ ಜನ ಹಲವು ವರ್ಷಗಳಿಂದ ಮೂತ್ರ ವಿಸರ್ಜನೆ ಮಾಡಿ ಕಟ್ಟಡದ ಗೋಡೆ ಕುಸಿಯುವ ಹಂತ ತಲುಪಿವೆ. ಈ ಹಿನ್ನೆಲೆಯಲ್ಲಿ ಸದರಿ ಕಟ್ಟಡದ ಸುತ್ತ ಜನ ಸುಳಿದಾಡದಂತೆ ಎಚ್ಚರ ವಹಿಸಬೇಕು. ಶಿಥಿಲಾವಸ್ಥೆಯ ಕಟ್ಟಡದ ಮಳಿಗೆಗಳ ಗೋಡೆಗಳ ಭದ್ರತೆ ಪರಿಶೀಲಿಸಬೇಕಾಗಿದೆ. ತಜ್ಞರಿಂದ ಕಟ್ಟಡದ ಸ್ಥಿತಿ ಅವಲೋಕಿಸಿ ಮುಂದಿನ ಕ್ರಮ ಕೈಗೊಳ್ಳುವಂತೆ ಸಾರ್ವಜನಿಕರು ಆಗ್ರಹಿಸಿದ್ದಾರೆ.

ಪಾಲಿಕೆ ಅಧಿಕಾರಿಗಳ ನಿರ್ಲಕ್ಷ್ಯ: ಶತಮಾನ ಕಳೆದ ಖಾಸಗಿ ಮಾಲೀಕತ್ವದ ಕಟ್ಟಡಗಳನ್ನು ಪಾರಂಪರಿಕ ಕಟ್ಟಡಗಳೆಂದು ಘೋಷಿಸಿದ್ದು, ಅವುಗಳ ಸಂರಕ್ಷಣೆಗೆ ನಗರ ಪಾಲಿಕೆ, ಮುಡಾ ಯಾವುದೇ ಕ್ರಮ ಕೈಗೊಂಡಿಲ್ಲ. ಕಾಲ ಕಾಲಕ್ಕೆ ದುರಸ್ತಿ ಮಾಡುವ ಕಾರ್ಯಕ್ಕೂ ಕೆಲವು ನಿಬಂಧನೆಗಳನ್ನು ಹಾಕಲಾಗಿದ್ದು, ಇದು ಕಟ್ಟಡ ಮಾಲೀಕರಿಗೆ ಕಿರಿಕಿರಿ ಉಂಟು ಮಾಡಿದೆ. ತಜ್ಞರ ಮಾನದಂಡದಂತೆ ದುರಸ್ತಿಗೆ ದುಂದು ವೆಚ್ಚವಾಗಲಿದೆ. ಹಾಗಾಗಿ ಸಾಕಷ್ಟು ಜನ ಏನೂ ಕ್ರಮಕ್ಕೆ ಮುಂದಾಗಿಲ್ಲ. ಇದರಿಂದ ಪಾರಂಪರಿಕ ಕಟ್ಟಡಗಳು ಶಿಥಿಲಗೊಂಡು ಅಪಾಯಕಾರಿ ಸ್ಥಿತಿ ತಲುಪುತ್ತಿವೆ. ಪಾರಂಪರಿಕ ಕಟ್ಟಡ ಎಂದು ಘೋಷಿಸಿ ಸುಮ್ಮನಾಗಿರುವ ಮೈಸೂರು ಮಹಾನಗರ ಪಾಲಿಕೆ ಖಾಸಗಿ ಒಡೆತನದ ಪಾರಂಪರಿಕ ಕಟ್ಟಡಗಳ ಸಂರಕ್ಷಣೆಗೆ ಯಾವುದೇ ಕ್ರಮ ಕೈಗೊಂಡಿಲ್ಲ. ತೆರಿಗೆ ವಿನಾಯಿತಿ ನೀಡಿಲ್ಲ. ಇದರಿಂದ ಕಟ್ಟಡಗಳು ಪಾಳು ಬಿದ್ದಿದ್ದರೂ ತೆರಿಗೆ ಮಾತ್ರ ಸಂಗ್ರಹಿಸುತ್ತಿದೆ. ಈ ಕಾರಣದಿಂದಲೇ ಅನೇಕ ಪಾರಂಪರಿಕ ಕಟ್ಟಡಗಳು ನಿರ್ವಹಣೆ ಇಲ್ಲದೆ ದುಸ್ಥಿತಿಗೆ ತಲುಪುತ್ತಿವೆ ಎಂದು ಕಟ್ಟಡದ ಮಾಲೀಕರು ಅಸಮಾದಾನ ವ್ಯಕ್ತಪಡಿಸಿದ್ದಾರೆ.

ಗದಗದಲ್ಲಿ ದಲಿತರಿಗೆ ಶೇವಿಂಗ್, ಕಟಿಂಗ್ ಮಾಡಲು ನಿರಾಕರಣೆ: ಸಲೂನ್ ಶಾಪ್ ತೆರೆದ ಸರ್ಕಾರ!

ಗದಗ: ಜಿಲ್ಲೆಯ ಮುಂಡರಗಿ ತಾಲೂಕಿನ ಹಳ್ಳಿಯೊಂದರಲ್ಲಿ ನಡೆದ ವಿಚಿತ್ರ ಘಟನೆಗಳ ನಂತರ, ದಲಿತರಿಗೆ ಕ್ಷೌರ ಮಾಡಿಸಲು ರಾಜ್ಯ ಸರ್ಕಾರವೇ ಕ್ಷೌರದಂಗಡಿಯನ್ನು ತೆರೆದಿದೆ.

ಸಮಾಜ ಕಲ್ಯಾಣ ಇಲಾಖೆ, ಗ್ರಾಮ ಪಂಚಾಯಿತಿ ಹಾಗೂ ಆದಾಯ ಇಲಾಖೆ ಅಧಿಕಾರಿಗಳ ನೇತೃತ್ವದಲ್ಲಿ ಸಲೂನ್ ಶುರುವಾಗಿದ್ದು, ಗ್ರಾಮದಲ್ಲಿ ವರ್ಷಗಳಿಂದ ಮುಂದುವರಿದಿದ್ದ ಜಾತಿ ಆಧಾರಿತ ಭೇದಭಾವವನ್ನು ನಿರ್ಮೂಲನೆ ಮಾಡುವ ಉದ್ದೇಶದಿಂದ ಈ ಕ್ರಮ ಕೈಗೊಳ್ಳಲಾಗಿದೆ.

ಗ್ರಾಮದ ದೈವವಾದ ವೀರಭದ್ರೇಶ್ವರನ ಭಕ್ತರಾಗಿರುವ ಹಡಪದ ಕುಟುಂಬಗಳು ಪರಂಪರೆ ಹೆಸರಿನಲ್ಲಿ ದಲಿತರಿಗೆ ಕ್ಷೌರ ಸೇವೆ ನಿರಾಕರಿಸುತ್ತಿದ್ದವು. ಉದ್ವಿಗ್ನತೆ ಹೆಚ್ಚಾದಾಗ, ಸ್ಥಳೀಯ ಆಡಳಿತ ಅಧಿಕಾರಿಗಳು ಗ್ರಾಮಕ್ಕೆ ತಲುಪಿ ಶಾಂತಿ ಸಭೆಗಳನ್ನು ನಡೆಸಿದರು. ಆದರೆ ಅವರ ಪ್ರಯತ್ನಗಳ ಹೊರತಾಗಿಯೂ, ಕ್ಷೌರಿಕರು ದಲಿತರಿಗೆ ಕ್ಷೌರ ಮಾಡಲು ನಿರಾಕರಿಸಿದರು. ಆಡಳಿತವು ಅಂಗಡಿಗೆ ನೋಟಿಸ್ ನೀಡಿ ಅದನ್ನು ಮುಚ್ಚಲು ಸೂಚಿಸಿತು.

ಸಮಾಜ ಕಲ್ಯಾಣ ಇಲಾಖೆಯು ದಲಿತರು ಮತ್ತು ಇತರ ಗ್ರಾಮಸ್ಥರು ಕ್ಷೌರ ಮಾಡಿಸಿಕೊಳ್ಳಬಹುದಾದ ಹೊಸ ಕ್ಷೌರದಂಗಡಿಯನ್ನು ತೆರೆದಿತ್ತು. ಆದರೆ ದಲಿತರ ಪ್ರವೇಶಕ್ಕೆ ವಿರೋಧವಿರುವ ಕಡೆ ಸರ್ಕಾರ ಕ್ಷೌರದಂಗಡಿಗಳು, ದೇವಾಲಯಗಳು ಮತ್ತು ಹೋಟೆಲ್‌ಗಳನ್ನು ನಿರ್ಮಿಸುವುದನ್ನು ಮುಂದುವರಿಸಲು ಸಾಧ್ಯವಿಲ್ಲ ಎಂದು ದಲಿತ ಕಾರ್ಯಕರ್ತರು ಹೇಳಿದ್ದಾರೆ.

ಗ್ರಾಮದ ಕ್ಷೌರಿಕರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ಮನವಿ ಮಾಡಿದರು. ದಲಿತರು ತಾರತಮ್ಯವನ್ನು ಎದುರಿಸದಂತೆ ನೋಡಿಕೊಳ್ಳಲು ಹೊಸ ಕಾನೂನುಗಳನ್ನು ಜಾರಿಗೆ ತರಬೇಕೆಂದು ಒತ್ತಾಯಿಸಿದರು. ಗದಗ ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ನಂದಾ ಹಣಬಟ್ಟಿ ಅಂಗಡಿಯನ್ನು ಉದ್ಘಾಟಿಸಿ, ಜನರು ಮೇಲು–ಕೀಳು ಎಂಬ ಭಾವನೆಗಳನ್ನು ಬಿಟ್ಟು ಎಲ್ಲರೂ ಸಮಾನರು ಎಂಬ ಉದಾತ್ತ ಮನಸ್ಥಿತಿಯೊಂದಿಗೆ ಬದುಕಬೇಕೆಂದು ಕರೆ ನೀಡಿದರು.

ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳಾದರೂ ಚಂದ್ರನ ಮೇಲೆ ಸಂಶೋಧನೆ ನಡೆಯುತ್ತಿರುವಾಗಲೂ ಅಸ್ಪೃಶ್ಯತೆ ಇನ್ನೂ ಅಸ್ತಿತ್ವದಲ್ಲಿರುವುದು ದುರದೃಷ್ಟಕರ ಎಂದು ತಹಶೀಲ್ದಾರ್ ಪಿ.ಎಸ್. ಎರ್ರಿಸ್ವಾಮಿ ಬೇಸರ ವ್ಯಕ್ತ ಪಡಿಸಿದರು. ಕ್ಷೌರಿಕ ಸೇವೆಗಳನ್ನು ನೀಡಲು ನಿರಾಕರಿಸುವುದು ಮತ್ತು ಹೋಟೆಲ್‌ಗಳು ಮತ್ತು ದೇವಾಲಯಗಳಿಗೆ ಪ್ರವೇಶ ನಿರಾಕರಿಸುವುದು ಕಾನೂನುಬಾಹಿರ ಕೃತ್ಯಗಳು. ಸಾಮಾಜಿಕ ಅನಿಷ್ಟಗಳನ್ನು ನಿರ್ಮೂಲನೆ ಮಾಡಲು ಸಮಾಜ ಕಲ್ಯಾಣ ಇಲಾಖೆ ಮತ್ತು ಜಿಲ್ಲಾಡಳಿತ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದೆ. ಅಂತಹ ತಾರತಮ್ಯ ಪದ್ಧತಿಗಳು ಎಲ್ಲಿಯಾದರೂ ಕಂಡುಬಂದರೆ, ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದರು.

ಇಂದು ಉಚಿತ ಆರೋಗ್ಯ ತಪಾಸಣೆ

ಸಿಗ್ಮಾ ಆಸ್ಪತ್ರೆ
ದಿ ಹೀಲಿಂಗ್ ಟಚ್

ಮೈಸೂರು, ಫೆ.28– ಸಿಗ್ಮಾ ಆಸ್ಪತ್ರೆಯಿಂದ ಶ್ರೀ ರೇಣುಕಾಚಾರ್ಯರ ಜಯಂತಿ ಉತ್ಸವ ಪ್ರಯುಕ್ತ ಕಲಾಮಂದಿರದಲ್ಲಿ ನಾಳೆ (ಭಾನುವಾರ) ಬೆಳಗ್ಗೆ 9 ರಿಂದ ಮಧ್ಯಾಹ್ನ 2 ಗಂಟೆಯವರೆಗೆ ಉಚಿತ ಆರೋಗ್ಯ ತಪಾಸಣೆ ಏರ್ಪಡಿಸಲಾಗಿದೆ. ಶಿಬಿರದಲ್ಲಿ ರಕ್ತಪರೀಕ್ಷೆ, ಮೂಳೆಯ ಸಾಂದ್ರತೆ ಪರೀಕ್ಷೆ ಮಾಡಲಾಗುತ್ತದೆ. ನೋಂದಣಿಗೆ ಮೊ.ನಂ.:9108028661ನ್ನು ಸಂಪರ್ಕಿಸುವುದು. ಮೊದಲು ಕರೆ ಮಾಡಿದವರಿಗೆ ಆದ್ಯತೆ ಎಂದು ವ್ಯವಸ್ಥಾಪಕ ನಿರ್ದೇಶಕ ಎಸ್. ಜ್ಞಾನಶಂಕರ್ ತಿಳಿಸಿದ್ದಾರೆ.

ಇಂದು ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ

ಮೈಸೂರು,ಫೆ.28(ಪಿಎಂ)– ಕರ್ನಾಟಕ ಸರ್ಕಾರ, ಮೈಸೂರು ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಂಯುಕ್ತಾಶ್ರಯದಲ್ಲಿ ಮಾ.1ರಂದು ಮೈಸೂರಿನ ಕಲಾಮಂದಿರದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಹಾಗೂ ಶ್ರೀ ಜಗದ್ಗುರು ಪಂಚಾಚಾರ್ಯರ ಯುಗಮಾನೋತ್ಸವ ಹಮ್ಮಿಕೊಳ್ಳಲಾಗಿದೆ.

ಕಲಾಮಂದಿರದಲ್ಲಿ ಅಂದು ಬೆಳಗ್ಗೆ 10ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದ್ದು, ಬೆಳಗ್ಗೆ 11ಕ್ಕೆ ಸಭಾ ಕಾರ್ಯಕ್ರಮ ಆಯೋಜಿಸಲಾಗಿದೆ. ಈ ವೇಳೆ ವಿವಿಧ ಕ್ಷೇತ್ರ ಗಣ್ಯರು ವಿಚಾರ ಮಂಡಿಸಲಿದ್ದಾರೆ. ಅಲ್ಲದೆ, ಸಂಜೆ 6ರಿಂದ ಶ್ರೀ ರೇಣುಕಾಚಾರ್ಯರ ಮೆರವಣಿಗೆಯನ್ನು ಅಗ್ರಹಾರದ ವಿವಿಧ ರಸ್ತೆಗಳಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ತಂತ್ರಜ್ಞಾನ ಸಂಶೋಧನೆಯಲ್ಲಿ ಭಾರತ ಸ್ವಾವಲಂಬಿ

ನೈಪುಣ್ಯ ಶಾಲೆಯ ವಿಜ್ಞಾನ ದಿನಾಚರಣೆಯಲ್ಲಿ ಕೃಷಿ ವಿಜ್ಞಾನಿ ಡಾ.ವಸಂತ ಕುಮಾರ ತಿಮಕಾಪುರ ಅಭಿಮತ

ಮೈಸೂರು, ಫೆ28– ಭಾರತ ಇಂದು ತಂತ್ರಜ್ಞಾನ ಹಾಗೂ ಸಂಶೋಧನಾ ಕ್ಷೇತ್ರದಲ್ಲಿ ಸ್ವಾವಲಂಬನೆ ಸಾಧಿಸಿದೆ ಎಂದು ಕೃಷಿ ವಿಜ್ಞಾನಿ ಡಾ.ವಸಂತಕುಮಾರ ತಿಮಕಾಪುರ ತಿಳಿಸಿದರು.

ಮೈಸೂರಿನ ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ ಸಂಸ್ಥೆಯು ರಾಷ್ಟ್ರೀಯ ವಿಜ್ಞಾನ ದಿನಾಚರಣೆಯ ಅಂಗವಾಗಿ ಕನಕದಾಸ ನಗರದ ಕ್ಯಾಂಪಸ್‌ನಲ್ಲಿ ಆಯೋಜಿಸಿದ್ದ ವಿಜ್ಞಾನ, ಗಣಿತ, ರೋಬೋಟಿಕ್ಸ್ ಮತ್ತು ಸ್ಪೇಸ್‌ಲ್ಯಾಬ್ ಕುರಿತು ವಿದ್ಯಾರ್ಥಿಗಳ ಮಾದರಿ ಪ್ರಾತ್ಯಕ್ಷಿಕೆ ಪ್ರದರ್ಶನವನ್ನು ಉದ್ಘಾಟಿಸಿ ಮಾತನಾಡಿದ ಅವರು, ಭಾರತವು ತಂತ್ರಜ್ಞಾನ ಹಾಗೂ ಸಂಶೋಧನಾ ಕ್ಷೇತ್ರದಲ್ಲಿ ಇತರರನ್ನು ಅವಲಂಬಿಸುವ ಸ್ಥಿತಿಯಿಂದ ಹೊರ ಬಂದಿದ್ದು, ತಂತ್ರಜ್ಞಾನ ಹಾಗೂ ಕೃಷಿ ಕ್ಷೇತ್ರದಲ್ಲಿ ಜಾಗತಿಕ ಮುಂಚೂಣಿಯತ್ತ ಸಾಗಿದೆ ಎಂದರು.

ಹಿಂದೆ ಭಾರತ ಕೃಷಿ ಚಟುವಟಿಕೆಗಳಿಗೆ ಅವಶ್ಯವಿರುವ ಉಪಕರಣಗಳು ಹಾಗೂ ಔಷಧಗಳಿಗಾಗಿ ವಿದೇಶಗಳನ್ನು ನಂಬಿಕೊಂಡಿತ್ತು. ಆದರೆ ಆಧುನಿಕ ತಂತ್ರಜ್ಞಾನ ಹಾಗೂ ಕೃಷಿ ಸಂಶೋಧನೆಗಳ ಪರಿಣಾಮ ಪ್ರಸ್ತುತ ಕೃಷಿ ಮೂಲಭೂತ ಸಾಮಗ್ರಿಗಳು, ಔಷಧಿಗಳು, ಕೃಷಿ ಉಪಕರಣಗಳು ಭಾರತದಲ್ಲೇ ತಯಾರಾಗುತ್ತಿದ್ದು, ಆ ಮೂಲಕ ಅಧಿಕವಾಗಿರುವ ಉತ್ಪನ್ನಗಳನ್ನು ವಿದೇಶಗಳಿಗೆ ಗಣನೀಯ ಪ್ರಮಾಣದಲ್ಲಿ ರಫ್ತು ಮಾಡುತ್ತಿದೆ ಎಂದರು.



ವಿಜ್ಞಾನ ಮಾದರಿ ಪ್ರಾತ್ಯಕ್ಷಿಕೆ ಪ್ರದರ್ಶನವನ್ನು ಗಣ್ಯರು ವೀಕ್ಷಿಸಿದರು.

ಮಾನವನ ಆಹಾರ ಹಾಗೂ ಇನ್ನಿತರ ಅಗತ್ಯಗಳಿಗೆ ತಕ್ಕಂತೆ ತನ್ನ ಚಟುವಟಿಕೆಗಳನ್ನು ವಿಸ್ತರಿಸಿಕೊಳ್ಳಬೇಕಿದೆ. ಈ ನಿಟ್ಟಿನಲ್ಲಿ ಕೃಷಿ ಉತ್ತೇಜಿಸಲು ಹಾಗೂ ಕೃಷಿಕರು ಅನುಭವಿಸುವ ನಷ್ಟವನ್ನು ತಪ್ಪಿಸಲು ಕೃಷಿ ಸಂಶೋಧನಾ ಕ್ಷೇತ್ರ ಮತ್ತಷ್ಟು ಬೆಳೆಯಬೇಕಿದೆ. ಇದಕ್ಕಾಗಿ ಹೊಸ ಹೊಸ ತಂತ್ರಜ್ಞಾನ ಆವಿಷ್ಕಾರ ಅಗತ್ಯವಾಗಿದ್ದು, ಈ ನಿಟ್ಟಿನಲ್ಲಿ ಭಾರತ ಈಗಾಗಲೇ ನಿರೀಕ್ಷಿತ ಗುರಿ ತಲುಪುತ್ತಿದೆ ಎಂದು ಹೇಳಿದರು.

ಪ್ರಾಥಮಿಕ ಶಿಕ್ಷಣ ಹಂತದಲ್ಲೇ ತಂತ್ರಜ್ಞಾನದ ಅರಿವು ಹಾಗೂ ಸಂಶೋಧನಾ ಪ್ರವೃತ್ತಿಯನ್ನು ಮಕ್ಕಳಲ್ಲಿ ಉತ್ತೇಜಿಸುವುದು ಅತ್ಯವಶ್ಯಕ. ತಂತ್ರಜ್ಞಾನ ಹಾಗೂ ಕೃಷಿ ಜಾಗೃತಿ ಶಿಕ್ಷಣದ ಒಂದು ಭಾಗವೇ ಆಗಬೇಕಾಗಿದೆ. ಈ ಕಾರ್ಯಕ್ಕೆ ನೈಪುಣ್ಯ ಶಿಕ್ಷಣ ಸಂಸ್ಥೆ ಮುಂದಾಗಿದೆ. ಆಟ–ಪಾಠದ ಜೊತೆಗೆ ಮಕ್ಕಳಿಗೆ ಸಂಶೋಧನೆ ಹಾಗೂ ಕೃಷಿ ಚಟುವಟಿಕೆಯನ್ನೂ ಶಿಕ್ಷಣದ ಭಾಗವಾಗಿ ಅಳವಡಿಸಿರುವುದು ಅತ್ಯಂತ ಶ್ಲಾಘನೀಯ ಎಂದು ಬಣ್ಣಿಸಿದರು.

ಇದೇ ವೇಳೆ ನೈಪುಣ್ಯ ಶಾಲೆಯ ವಿದ್ಯಾರ್ಥಿಗಳು ಮಾನವ ವಿಕಾಸದ ಹಂತಗಳು, ಹುಣ್ಣಿಮೆಯಿಂದ ಅಮಾವಾಸ್ಯೆಯ ಪರಿವರ್ತನೆಯ ಹಂತಗಳು, ಮಾನವನ ದೇಹದ ವಿವಿಧ ಅಂಗಗಳ ಮಾದರಿ, ಚಂದ್ರಯಾನ–2ರ ವಿಕ್ರಮ್ ಲ್ಯಾಂಡರ್ ಮತ್ತು ಪ್ರಗ್ಯಾನ್ ರೋವರ್ ರಾಕೆಟ್, ನಾಸಾದ ವೋಯೇಜ್–2 ಮಾದರಿಯ ರಾಕೆಟ್, ಸೌರಮಂಡಲ, ಭೂಮಿಯ ಒಳಪದರ ಮತ್ತು ಹೊರಪದರಗಳು, ವಿದ್ಯುತ್ ಉತ್ಪಾದನೆ, ಆಸಿಡ್ ಮಳೆ, ಮಳೆನೀರಿನ ನಿರ್ವಹಣೆ, ಹನಿ ನೀರಾವರಿ, ಜಾಗತಿಕ ತಾಪಮಾನ, ಮೆಂಟಲ್ ಮ್ಯಾಥ್, ಪೈಥಾಗೊರಸ್ ಇನ್ನಿತರ ಮಾದರಿಗಳನ್ನು ಪ್ರದರ್ಶಿಸಿ, ವೀಕ್ಷಕರಿಗೆ ವಿವರಣೆ ನೀಡಿದರು.

ಅತ್ಯುತ್ತಮ ಮಾದರಿಗಳ ಆಯ್ಕೆಯ ತೀರ್ಪುಗಾರರಾಗಿ ತಜ್ಞರಾದ ಎಂ.ಎಸ್.ರಾಮಚಂದ್ರ, ಶ್ರೀಮತಿ ಎಸ್.ಆರ್.ಹೇಮಲತಾ, ಶ್ರೀಮತಿ ಕೆ.ಎಸ್.ಅನುರಾಧ ಮತ್ತು ಶ್ರೀಮತಿ ಚೈತ್ರಾ ಶ್ರೀಪತಿ ಭಾಗವಹಿಸಿದ್ದರು.

ಕಾರ್ಯಕ್ರಮದಲ್ಲಿ ಸಂಸ್ಥೆಯ ಕಾರ್ಯದರ್ಶಿ ಆರ್.ಕೌಟಿಲ್ಯ, ಪ್ರಾಂಶುಪಾಲ ಎಂ.ಎನ್. ಮಹೇಂದ್ರ ಶಿಕ್ಷಾ ಸಂಯೋಜಕಿ ಶ್ರೀಮತಿ ಕೆ.ಎಸ್.ಶ್ವೇತಾ, ಶಿಕ್ಷಕರು, ಸಿಬ್ಬಂದಿ ಮತ್ತು ಪೋಷಕರು ಉಪಸ್ಥಿತರಿದ್ದರು.

ಎಂ.ಎನ್.ಮಹದೇವ ಎನ್‌ಆರ್ ಕ್ಷೇತ್ರದ ಗ್ಯಾರಂಟಿ ಸಮಿತಿ ಅಧ್ಯಕ್ಷ



ಮೈಸೂರು,ಫೆ.28(ಪಿಎಂ)– ಸರ್ಕಾರದ ಆದೇಶದಂತೆ ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯ ನರಸಿಂಹರಾಜ ವಿಧಾನ ಸಭಾ ಕ್ಷೇತ್ರದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ರಚಿಸಿ ಗಣೇಶನಗರದ ಎಂ.ಎನ್.ಮಹದೇವ ಅವರನ್ನು ಸಮಿತಿ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ.

ಅಂತೆಯೇ ಸದರಿ ಸಮಿತಿಗೆ ಸದಸ್ಯರನ್ನಾಗಿ ವಿದ್ಯಾನಗರದ ಹೆಚ್.ಶಶಿಕುಮಾರ್, ಎನ್‌ಆರ್ ಮೊಹಲ್ಲಾದ ಎಸ್.ಸುರೇಂದ್ರ, ಗಾಂಧಿನಗರದ ರಾಕೇಶ್‌ಕುಮಾರ್, ರಾಜೀವ್‌ನಗರದ ಅಹ್ಮದ್ ಸಲೀಂ, ರಾಘವೇಂದ್ರನಗರದ ಸಿ.ವಿಜಯಲಕ್ಷ್ಮೀ, ಅಜೀಜ್‌ಸೇಠ್ ನಗರದ ಎಸ್.ರೇಷ್ಮ, ಸಾತಗಳ್ಳಿಯ ಜಿ.ಪದ್ಮಾವತಿ, ಸತ್ಯನಗರದ ಸೈಯದ್ ಸದ್ದಾಂ ಅವರನ್ನು ನೇಮಿಸಲಾಗಿದೆ. ಪಾಲಿಕೆಯ ವಲಯ ಕಚೇರಿ 7ರ ಕಂದಾಯಾಧಿಕಾರಿ ಎನ್.ಲೋಕೇಶ್ ಸದಸ್ಯ ಕಾರ್ಯದರ್ಶಿ ಆಗಿ ಕಾರ್ಯನಿರ್ವಹಿಸಲಿದ್ದಾರೆ.

593 ಕೋಟಿ ಜಿಎಸ್‌ಟಿ ವಂಚನೆ ಪತ್ತೆ

ಬೃಹತ್ ನಕಲಿ ಐಟಿಸಿ ಜಾಲದ ಮಾಸ್ಟರ್‌ಮೈಂಡ್ ಬಂಧನ


ಬೆಳಗಾವಿ: ರಾಜ್ಯದಲ್ಲಿ ಮತ್ತೊಂದು ಬೃಹತ್ ಜಿಎಸ್‌ಟಿ ವಂಚನೆ ಜಾಲ ಬಯಲಾಗಿದ್ದು, ಬೃಹತ್ ನಕಲಿ ITC (Input Tax Credit) ಜಾಲದ ಮಾಸ್ಟರ್‌ಮೈಂಡ್‌ನನ್ನು ಪೊಲೀಸರು ಬಂಧಿಸಿದ್ದಾರೆ.

ರಾಜ್ಯದಲ್ಲಿ ನಡೆದ ಪ್ರಮುಖ ಜಿಎಸ್‌ಟಿ ವಂಚನೆಯ ಶಿಸ್ತುಕ್ರಮದಲ್ಲಿ, ಬೆಳಗಾವಿ ವಲಯ ಘಟಕದ ಜಿಎಸ್‌ಟಿ ಗುಪ್ತಚರ ನಿರ್ದೇಶನಾಲಯ (ಡಿಜಿಜಿಐ) ಅಧಿಕಾರಿಗಳು 593 ಕೋಟಿ ರೂ. ಮೌಲ್ಯದ ವಂಚನೆ ಇನ್‌ವಾಯ್ಸ್‌ಗಳನ್ನು ಒಳಗೊಂಡ ಬೃಹತ್ ನಕಲಿ ಇನ್‌ಪುಟ್ ತೆರಿಗೆ ಕ್ರೆಡಿಟ್ (ಐಟಿಸಿ) ಜಾಲವನ್ನು ಬಯಲು ಮಾಡಿದ್ದಾರೆ.

ಇದು ರಾಜ್ಯಗಳಾದ್ಯಂತ ಕಾರ್ಯನಿರ್ವಹಿಸುತ್ತಿರುವ ಶೆಲ್ ಸಂಸ್ಥೆಗಳ ಅತ್ಯಾಧುನಿಕ ಜಾಲವನ್ನು ಬಹಿರಂಗಪಡಿಸಿದೆ.

ಡಿಜಿಜಿಐ ಬಿಡುಗಡೆ ಮಾಡಿದ ಅಧಿಕೃತ ಪತ್ರಿಕಾ ಪ್ರಕಟಣೆಯ ಪ್ರಕಾರ, ತನಿಖೆಯು ಅನುಮಾನಾಸ್ಪದ ಜಿಎಸ್‌ಟಿ ನೋಂದಣಿಯ ಪರಿಶೀಲನೆಯೊಂದಿಗೆ ಪ್ರಾರಂಭವಾಯಿತು. ಇದು ಅಂತಿಮವಾಗಿ ತನಿಖಾಧಿಕಾರಿಗಳನ್ನು ಬೆಂಗಳೂರು ಮೂಲದ ಸಂಸ್ಥೆಯಾದ ಮೆಸರ್ಸ್ ಸ್ಟಾರ್ ಟ್ಯಾಕ್ಸ್ ಕನ್ಸಲ್ಟೆಂಟ್‌ಗೆ ಕರೆದೊಯ್ಯಿತು, ಈ ಸಂಸ್ಥೆಯು ದೊಡ್ಡ ಪ್ರಮಾಣದ ತೆರಿಗೆ ವಂಚನೆಯನ್ನು ಆಯೋಜಿಸುತ್ತಿದೆ ಎಂದು ಶಂಕಿಸಲಾಗಿದೆ.

ಸಂಸ್ಥೆಗೆ ಸಂಬಂಧಿಸಿದ ಆವರಣದಲ್ಲಿ ನಡೆಸಿದ ಶೋಧ ಕಾರ್ಯಾಚರಣೆಗಳು ಯಾವುದೇ ಸರಕು ಅಥವಾ ಸೇವೆಗಳ ನಿಜವಾದ ಪೂರೈಕೆಯಿಲ್ಲದೆ ನಕಲಿ ಇನ್‌ವಾಯ್ಸ್‌ಗಳನ್ನು ನೀಡುವಲ್ಲಿ ತೊಡಗಿರುವ ಸುಸಂಘಟಿತ ಸಿಂಡಿಕೇಟ್ ಅನ್ನು ಬಹಿರಂಗಪಡಿಸಿತು. ಈ ಜಾಲವು ಸುಮಾರು 235 ಕೋಟಿ ರೂ ಮೊತ್ತದ ವಂಚನೆಯ ಇನ್‌ಪುಟ್ ತೆರಿಗೆ ಕ್ರೆಡಿಟ್ ಅನ್ನು ಅಕ್ರಮವಾಗಿ ಪಡೆಯಲು ಮತ್ತು ವರ್ಗಾಯಿಸಲು ಅನುವು ಮಾಡಿಕೊಟ್ಟಿರುವುದು ಬಯಲಾಗಿದೆ.



ತನಿಖಾಧಿಕಾರಿಗಳು ಹಲವಾರು ಜಿಎಸ್‌ಟಿ ನೋಂದಣಿಗಳನ್ನು ನಕಲಿ ಇನ್‌ವಾಯ್ಸ್‌ಗಳು ಮತ್ತು ಇ–ವೇ ಬಿಲ್‌ಗಳನ್ನು ಉತ್ಪಾದಿಸುವ ಉದ್ದೇಶದಿಂದಲೇ ರಚಿಸಲಾಗಿದೆ ಮತ್ತು ನಿರ್ವಹಿಸಲಾಗುತ್ತಿದೆ ಎಂದು ಕಂಡುಹಿಡಿದಿದ್ದಾರೆ. ಇದು ಫಲಾನುಭವಿ ಸಂಸ್ಥೆಗಳು ತಪ್ಪಾದ ತೆರಿಗೆ ಕ್ರೆಡಿಟ್‌ಗಳನ್ನು ಪಡೆಯಲು ಮತ್ತು ಸರ್ಕಾರಿ ಆದಾಯವನ್ನು ವಂಚಿಸಲು ಅನುವು ಮಾಡಿಕೊಡುತ್ತದೆ.

ಅಸ್ತಿತ್ವದಲ್ಲೇ ಇಲ್ಲದ ಶೆಲ್ ಸಂಸ್ಥೆಗಳ ಮೂಲಕ ನಕಲಿ ವಹಿವಾಟು: ಆರೋಪಿಗಳು ಸುಧಾರಿತ ಆನ್‌ಲೈನ್ ಲೆಕ್ಕಪತ್ರ ಸಾಫ್ಟ್‌ವೇರ್ ಅನ್ನು ಬಳಸಿಕೊಂಡು ಅಸ್ತಿತ್ವದಲ್ಲಿಲ್ಲದ ವ್ಯಾಪಾರ ಘಟಕಗಳು ಮತ್ತು ಯಾವುದೇ ನಿಜವಾದ ವಾಣಿಜ್ಯ ಚಟುವಟಿಕೆಯನ್ನು ನಡೆಸದ ಶೆಲ್ ಕಂಪನಿಗಳ ಜಾಲದ ಮೂಲಕ ನಡೆಸಲಾದ ನಕಲಿ ವಹಿವಾಟುಗಳನ್ನು ವ್ಯವಸ್ಥಿತವಾಗಿ ದಾಖಲಿಸಲು ಮತ್ತು ಮೇಲ್ವಿಚಾರಣೆ ಮಾಡಲು ಬಳಸಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮಾಸ್ಟರ್ ಮೈಂಡ್ ಬಂಧನ: ಈ ಕಾರ್ಯಾಚರಣೆಯ ಹಿಂದಿನ ಮಾಸ್ಟರ್‌ಮೈಂಡ್ ನೋಂದಾಯಿತ ಜಿಎಸ್‌ಟಿ ಪ್ರಾಕ್ಟೀಷನರ್ ಮೊಹಮ್ಮದ್ ಸೈಫುಲ್ಲಾ ಎಂದು ತನಿಖೆಯು ಗುರುತಿಸಿದೆ. ಈತ ಬಹು ನಕಲಿ ಜಿಎಸ್‌ಟಿ ಗುರುತಿನ ಸಂಖ್ಯೆಗಳನ್ನು (ಜಿಎಸ್‌ಟಿಐಎನ್‌ಗಳು) ನಿರ್ವಹಿಸುವ ಮತ್ತು ಇನ್‌ವಾಯ್ಸ್ ಮೌಲ್ಯದ ಮೇಲೆ ಲೆಕ್ಕಹಾಕಿದ ಕಮಿಷನ್‌ಗಳಿಗೆ ಪ್ರತಿಯಾಗಿ ಮೋಸದ ಇನ್‌ವಾಯ್ಸ್‌ಗಳು ಮತ್ತು ಇ–ವೇ ಬಿಲ್‌ಗಳ ವಿತರಣೆಯನ್ನು ಸಂಯೋಜಿಸುವ ಆರೋಪವನ್ನು ಹೊಂದಿದ್ದಾರೆ.

ವಿಚಾರಣೆಯ ಸಮಯದಲ್ಲಿ, ತನಿಖಾಧಿಕಾರಿಗಳು ಸಂಗ್ರಹಿಸಿದ ಗಣನೀಯ ಸಾಕ್ಷ್ಯಚಿತ್ರ ಮತ್ತು ಡಿಜಿಟಲ್ ಪುರಾವೆಗಳನ್ನು ಎದುರಿಸಿದ ನಂತರ ಸೈಫುಲ್ಲಾ ಅವರನ್ನು ಬೆಂಗಳೂರಿನಲ್ಲಿ ಸಿಜಿಎಸ್‌ಟಿ ಕಾಯ್ದೆ, 2017ರ ಸೆಕ್ಷನ್ 69ರ ಅಡಿಯಲ್ಲಿ ಬಂಧಿಸಲಾಯಿತು. ಅವರನ್ನು ಮೊದಲು ಬೆಂಗಳೂರಿನ ಆರ್ಥಿಕ ಅಪರಾಧಗಳ ವಿಶೇಷ ನ್ಯಾಯಾಲಯದ ಮುಂದೆ ಹಾಜರುಪಡಿಸಲಾಯಿತು.

ಇಂದು ಅವರನ್ನು ಬೆಳಗಾವಿಗೆ ವರ್ಗಾಯಿಸಲು ಸಾರಿಗೆ ಬಂಧನವನ್ನು ನೀಡಿತು. ನಂತರ ಅವರನ್ನು ಬೆಳಗಾವಿಯ ಜೆಎಂಎಫ್‌ಸಿ–IV ನ್ಯಾಯಾಲಯದ ಮುಂದೆ ಹಾಜರು ಪಡಿಸಲಾಯಿತು, ನ್ಯಾಯಾಲಯವು ಈತನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿತು.

ರಾಜ್ಯ ಸರ್ಕಾರ ದಿನದ ಲೆಕ್ಕದಲ್ಲಿ ಮುಂದು; ಅಭಿವೃದ್ಧಿಯಲ್ಲಿ ಹಿಂದು

ವಿಪಕ್ಷ ನಾಯಕ ಆರ್.ಅಶೋಕ್ ಲೇವಡಿ

ಮಂಡ್ಯ, ಫೆ.28–ರಾಜ್ಯ ಕಾಂಗ್ರೆಸ್ ಸರ್ಕಾರವು ಸಾವಿರ ದಿನಗಳನ್ನು ಪೂರೈಸಿ ದಿನದ ಲೆಕ್ಕದಲ್ಲಿ ಮುಂದಿದ್ದರೆ, ಅಭಿವೃದ್ಧಿ ಲೆಕ್ಕದಲ್ಲಿ ಸಂಪೂರ್ಣ ಹಿಂದುಳಿದಿದೆ ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಲೇವಡಿ ಮಾಡಿದರು.

ರಾಜ್ಯ ಸರ್ಕಾರ ಅಭಿವೃದ್ಧಿ ಮರೆತು ಕುರ್ಚಿ ಕಾಳಗ, ನಿರುದ್ಯೋಗಿಗಳ ಪ್ರತಿಭಟನೆ, ಹಗರಣಗಳ ಸರಮಾಲೆಯಿಂದ ಆಳ್ವಿಕೆ ನಡೆಸುತ್ತಿದ್ದು, ಇದರಲ್ಲೇ ಸಾವಿರ ದಿನಗಳನ್ನು ಕಳೆದಿದೆ. ಉದ್ಯೋಗಕ್ಕಾಗಿ ಈಗಾಗಲೇ ನಿರುದ್ಯೋಗಿಗಳು ಪ್ರತಿಭಟನೆ ನಡೆಸಿದ್ದಾರೆ. ಶೀಘ್ರದಲ್ಲಿಯೇ ವೈದ್ಯರು ಪ್ರತಿಭಟನೆ ನಡೆಸಲು ಮುಂದಾಗಿದ್ದಾರೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಔಷಧಿಗಳಿಲ್ಲದೆ, ಖಾಸಗಿ ಮೆಡಿಕಲ್‌ಗಳಿಗೆ ರೋಗಿಗಳಿಗೆ ಚೀಟಿ ಬರೆದು ಕಳುಹಿಸುತ್ತಿದ್ದಾರೆ. ಒಂದು ವೇಳೆ ವೈದ್ಯರು ಮುಷ್ಕರ ನಡೆಸಿದ್ದೇಯಾದರೆ ರೋಗಿಗಳ ಪಾಡೇನು? ಎಂದು ಪ್ರಶ್ನಿಸಿದರು.

ಶಿರಹಟ್ಟಿ ಬಿಜೆಪಿ ಶಾಸಕ ಚಂದ್ರು ಲಮಾಣಿ ಕಮಿಷನ್ ಪಡೆಯುವಾಗ ಲೋಕಾಯುಕ್ತಕ್ಕೆ ಸಿಲುಕಿಕೊಂಡಿದ್ದಾರೆ. ಆದರೆ ಇದನ್ನು ಎಂದಿಗೂ ಸಮರ್ಥಿಸಿಕೊಳ್ಳುವುದಿಲ್ಲ. ತಪ್ಪು ಮಾಡಿದ್ದರೆ ಲಮಾಣಿಗೆ ತಕ್ಕ ಶಿಕ್ಷೆಯಾಗಲಿ. ಪಕ್ಷಕ್ಕೆ ಮುಜುಗರವಾಗಬಾರದೆಂದು ಈಗಾಗಲೇ ಕಾರಣ ಕೇಳಿ ಲಮಾಣಿಗೆ ನೋಟಿಸ್ ಜಾರಿ ಮಾಡಲಾಗಿದೆ.



ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಹೈಕಮಾಂಡ್‌ಗೆ ಕರ್ನಾಟಕ ಎಟಿಎಂ

ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿಗಳು ಕಾಂಗ್ರೆಸ್ ಹೈಕಮಾಂಡ್‌ಗೆ ಎಟಿಎಂ ಆಗಿದ್ದಾರೆ. ಡಿ.ಕೆ.ಶಿವಕುಮಾರ್ ಈಗಾಗಲೇ ಫಂಡ್ ಕೊಡುವವರಲ್ಲಿ ಎಕ್ಸ್‌ಪರ್ಟ್ ಆಗಿದ್ದು, ಹಣ ವಸೂಲಿಗಾಗಿ ಸಚಿವ ಸಂಪುಟ ಪುನರಚನೆ ಎಂದು ಹೇಳುತ್ತಾ ಸಚಿವರಿಂದಲೂ ಹಣ ವಸೂಲಿ ಮಾಡುತ್ತಿದ್ದಾರೆ ಎಂದು ದೂರಿದರು. ತಮಿಳುನಾಡು, ಅಸ್ಸಾಂ, ಕೇರಳ, ಪಶ್ಚಿಮ ಬಂಗಾಳಕ್ಕೆ ಕರ್ನಾಟಕದವರೇ ಆದ ಡಿ.ಕೆ.ಶಿವಕುಮಾರ್, ಕೆ.ಜೆ.ಜಾರ್ಜ್, ದಿನೇಶ್ ಗುಂಡೂರಾವ್ ಅವರನ್ನು ಉಸ್ತುವಾರಿಯನ್ನಾಗಿ ಮಾಡಲಾಗಿದೆ. ಸರ್ಕಾರದಿಂದಲೇ ಹಣ ಈ ರಾಜ್ಯಗಳಿಗೆ ಪೂರೈಕೆಯಾಗುತ್ತಿರುವುದರಿಂದ ರಾಜ್ಯದವರನ್ನೇ ಉಸ್ತುವಾರಿಯನ್ನಾಗಿ ಮಾಡಲಾಗಿದೆ. ಹಿಮಾಚಲ ಪ್ರದೇಶ ಮತ್ತು ತೆಲಂಗಾಣದಲ್ಲಿ ಕಾಂಗ್ರೆಸ್ ಆಳ್ವಿಕೆ ನಡೆಸುತ್ತಿದ್ದರೂ ಅಲ್ಲಿ ಗ್ಯಾರಂಟಿ ಹೆಸರಿನಲ್ಲಿ ರಾಜ್ಯ ಸರ್ಕಾರಗಳು ಪಾಪರ್ ಆಗಿರುವುದರಿಂದ ಕೈ ಹೈಕಮಾಂಡ್ ಕರ್ನಾಟಕವನ್ನೇ ಅತಿ ಹೆಚ್ಚಾಗಿ ನಂಬಿಕೊಂಡಿದೆ ಎಂದು ವ್ಯಂಗ್ಯವಾಡಿದರು.

ಆದರೆ ಭ್ರಷ್ಟಾಚಾರ ಆರೋಪದಲ್ಲಿ ಕಾಂಗ್ರೆಸ್‌ನ ಸತೀಶ್ ಸೈಲ್ ಜೈಲಿನಲ್ಲಿದ್ದರೆ, ವೀರೇಂದ್ರ ಪಪ್ಪಿ ಜೈಲಿಗೆ ಹೋಗಿ ಬಂದಿದ್ದಾರೆ. ಇವರ ಮೇಲೆ ಕಾಂಗ್ರೆಸ್ ಯಾವ ಕ್ರಮ ತೆಗೆದುಕೊಂಡಿದೆ ಎಂದು ಪ್ರಶ್ನಿಸಿದರು.

ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಡಾ.ಇಂದ್ರೇಶ್, ಮುಖಂಡರಾದ ಇಂಡುವಾಳು ಸಚ್ಚಿದಾನಂದ, ಅಶೋಕ್‌ಕುಮಾರ್, ವಸಂತ್‌ಕುಮಾರ್, ಸಿ.ಟಿ.ಮಂಜುನಾಥ್, ನಾಗಾನಂದ ಇದ್ದರು.

ಮದ್ದೂರು ನಗರಸಭೆಯಿಂದ ನಾಲ್ಕು ಗ್ರಾಮ ಪಂಚಾಯಿತಿ ಕೈಬಿಡದಿದ್ದರೆ

ಗೆಜ್ಜಲಗೆರೆಯಿಂದ ವಿಧಾನಸೌಧದವರೆಗೆ ಪಾದಯಾತ್ರೆ: ಹೆಚ್ಡಿಕೆ


ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಗೆಜ್ಜಲಗೆರೆ ಧರಣಿ ಸತ್ಯಾಗ್ರಹ ಸ್ಥಳಕ್ಕೆ ಶನಿವಾರ ಭೇಟಿ ನೀಡಿ ಮಾತನಾಡಿದರು.

ಮದ್ದೂರು, ಫೆ.28–ನಗರಸಭೆಯಿಂದ ನಾಲ್ಕು ಗ್ರಾಮ ಪಂಚಾಯಿತಿಗಳನ್ನು ಕೈ ಬಿಡದಿದ್ದರೆ ಗೆಜ್ಜಲಗೆರೆಯಿಂದ ವಿಧಾನಸೌಧದವರೆಗೆ ಬೃಹತ್ ಪಾದಯಾತ್ರೆಯನ್ನು ಹಮ್ಮಿಕೊಳ್ಳಲಾಗುವುದು ಎಂದು ರಾಜ್ಯ ಸರ್ಕಾರಕ್ಕೆ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಎಚ್ಚರಿಕೆ ನೀಡಿದ್ದಾರೆ.

ನಗರಸಭೆಗೆ ಗೆಜ್ಜಲಗೆರೆ ಸೇರಿದಂತೆ ನಾಲ್ಕು ಗ್ರಾ.ಪಂ.ಗಳನ್ನು ಸೇರ್ಪಡೆ ಮಾಡಿರುವುದನ್ನು ವಿರೋಧಿಸಿ ಗೆಜ್ಜಲಗೆರೆ ಗ್ರಾ.ಪಂ. ಆವರಣದಲ್ಲಿ 69 ದಿನಗಳಿಂದ ನಡೆಯುತ್ತಿರುವ ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹ ಸ್ಥಳಕ್ಕೆ ಶನಿವಾರ ಭೇಟಿ ನೀಡಿ ಮಾತನಾಡಿದ ಅವರು, ನಗರಸಭೆಗೆ ಸೇರ್ಪಡೆಗೊಂಡಿರುವ ತಾಲೂಕಿನ ಗೆಜ್ಜಲಗೆರೆ, ಗೊರವನಹಳ್ಳಿ, ಸೋಮನಹಳ್ಳಿ ಹಾಗೂ ಚಾಮನಹಳ್ಳಿ ಪಂಚಾಯಿತಿಗಳು ಉತ್ತಮ ರೀತಿಯಲ್ಲಿ ಅಭಿವೃದ್ಧಿ ಕೆಲಸಗಳನ್ನು ಮಾಡುತ್ತಿರುವುದರಿಂದ ಅವುಗಳನ್ನು ಗ್ರಾ.ಪಂ.ಯಾಗಿಯೇ ಉಳಿಸಬೇಕು. ಇಲ್ಲದಿದ್ದರೆ ಗೆಜ್ಜಲಗೆರೆಯಿಂದ ಬೆಂಗಳೂರಿನ ವಿಧಾನಸೌಧದವರೆಗೆ ಬೆಂಗಳೂರು ಮೈಸೂರು ಹೆದ್ದಾರಿಯಲ್ಲಿ 50 ಸಾವಿರಕ್ಕೂ ಹೆಚ್ಚಿನ ಜನರೊಂದಿಗೆ ಪಾದಯಾತ್ರೆ ಮೂಲಕ ತೆರಳಿ ರಾಜ್ಯ ಸರ್ಕಾರದ ವಿರುದ್ಧ ಹೋರಾಟ ಮಾಡಲಾಗುವುದು ಎಂದರು.

ಬೀದಿಗಿಳಿಯುತ್ತೇನೆ: ನಗರಸಭೆಯಿಂದ ಗ್ರಾಪಂಗಳನ್ನು ಕೈ ಬಿಡುವಂತೆ ಮುಖ್ಯಮಂತ್ರಿಗಳಿಗೆ ನಗರಾಭಿವೃದ್ಧಿ ಸಚಿವರು ಸೇರಿದಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಪತ್ರ ಬರೆಯುತ್ತೇನೆ. ಒಂದು ವೇಳೆ ನಮ್ಮ ಮನವಿಗೆ ಸ್ಪಂದಿಸದಿದ್ದರೆ ನಾನು ಕೂಡ ನಿಮ್ಮೊಂದಿಗೆ ಬೀದಿಗಿಳಿದು ಹೋರಾಟ ಮಾಡುತ್ತೇನೆ. ಗ್ರಾಮಸ್ಥರು ಮಾಡುವ ಹೋರಾಟಕ್ಕೆ ನನ್ನ ಸಂಪೂರ್ಣ ಬೆಂಬಲವಿದೆ ಎಂದು ಘೋಷಣೆ ಮಾಡಿದರು. ರೈತ ನಾಯಕಿ ಸುನಂದಾ ಜಯರಾಮ್, ಮಾಜಿ ಸಚಿವ ಡಿ.ಸಿ.ತಮ್ಮಣ್ಣ, ವಿಧಾನ ಪರಿಷತ್ ಸದಸ್ಯ ವಿವೇಕಾನಂದ ಮಾತನಾಡಿದರು.

ಜೆಡಿಎಸ್ ಜಿಲ್ಲಾಧ್ಯಕ್ಷ ಡಿ.ರಮೇಶ್, ತಾಲೂಕು ಕಾರ್ಯಾಧ್ಯಕ್ಷ ಮಾದನಾಯಕನಹಳ್ಳಿ ರಾಜಣ್ಣ, ತಾಪಂ ಮಾಜಿ ಅಧ್ಯಕ್ಷ ಜಿ.ಪಿ.ಯೋಗೇಶ್, ಮುಖಂಡರಾದ ಚಂದ್ರಶೇಖರ್, ಜಿ.ಟಿ.ಪುಟ್ಟಸ್ವಾಮಿ, ಡಿ.ಎಸ್.ಶೇಖರ್, ಮೋಹನ್, ವೀರೇಶ್, ಪ್ರಕಾಶ್, ಗೊರವನಹಳ್ಳಿ ಪ್ರಸನ್ನ, ಮಹೇಶ್, ಉಮೇಶ್, ಸೇರಿದಂತೆ ಇತರರು ಇದ್ದರು.

ಹಾಡಹಗಲು ಮನೆಯ ಲಾಕರ್ ಮುರಿದು ಒಡವೆ ಕಳ್ಳತನ

ನಾಗಮಂಗಲ, ಫೆ.28– ಮನೆಯಲ್ಲಿ ಯಾರೂ ಇಲ್ಲದೆ ಬೀಗ ಹಾಕಿರುವುದನ್ನು ಗಮನಿಸಿ ಎರಡು ಪ್ರತ್ಯೇಕ ಪ್ರಕರಣದಲ್ಲಿ ಕಳ್ಳರು ಮನಯಲ್ಲಿ ಕಳ್ಳತನ ನಡೆಸಿ ನಗದು, ಚಿನ್ನಾಭರಣ ಕದ್ದೊಯ್ದಿರುವ ಘಟನೆ ನಡೆದಿದೆ.

ಪಟ್ಟಣದ ಟ್ಯಾಂಕ್ ಮೈದಾನ ಹಿಂಭಾಗ ಇರುವ ಜಯಲಕ್ಷ್ಮಿ ಕೊಂ ರಮೇಶ ಹಾಗೂ ಸುನಂದಮ್ಮ ಕೊಂ ಲೇ. ಸ್ವಾಮಿ ಎಂಬವರ ಮನೆಗಳ ಮುಂಭಾಗ ಮಧ್ಯಾಹ್ನ 1:30 ರ ಸಮಯದಲ್ಲಿ ಯಾರೂ ಇಲ್ಲದನ್ನು ಗಮನಿಸಿ ಬೀರುವಿನ ಲಾಕರ್ ಮುರಿದು ಚಿನ್ನ ಹಾಗೂ ನಗದು ಕಳ್ಳತನ ಮಾಡಿಕೊಂಡು ಹೋಗಿದ್ದಾರೆ.

ಜಯಲಕ್ಷ್ಮಿ ಮನೆಯಲ್ಲಿ ಬೀರುವಿನಲ್ಲಿ ಇಟ್ಟಿದ್ದ 492 ಗ್ರಾಂ ಚಿನ್ನದ ಒಡವೆಗಳು ಹಾಗೂ ನಗದು 1.5 ಲಕ್ಷ ಹಾಗೂ ಸುನಂದಮ್ಮ ಎಂಬುವರ ಮನೆಯಲ್ಲಿ 40 ಗ್ರಾಂ ಒಡವೆ ಹಾಗೂ ಒಂದು ಬೆಳ್ಳಿಯ ತಟ್ಟೆ ಕಳ್ಳತನ ಮಾಡಿದ್ದಾರೆ.



ನಾಗಮಂಗಲ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ಪಟ್ಟಣ ಠಾಣೆ ಸಬ್‌ಇನ್ಸ್‌ಪೆಕ್ಟರ್ ಶಿವಕುಮಾರ್, ನಟೇಶ್ ಬಾಬು, ಗುರುಪ್ರಸಾದ್‌ರವರು ಮಂಡ್ಯದಿಂದ ಶ್ವಾನದಳ ಹಾಗೂ ಬೆರಳಚ್ಚು ತಜ್ಞರಾದ ಮಂಜುನಾಥ್ ಹಾಗೂ ನಾಗರಾಜುರೊಂದಿಗೆ ಪರಿಶೀಲನೆ ನಡೆಸಿದರು. ಕ್ರೈಂನ ಸಿಬ್ಬಂದಿ ಲಕ್ಷ್ಮಣ್ ಹಾಗೂ ಮಂಡ್ಯ ಅಡಿಷನಲ್ ಎಸ್ಪಿ ಗಂಗಾಧರ ಸ್ವಾಮಿ ಸ್ಥಳಕ್ಕೆ ಭೇಟಿ ನೀಡಿದ್ದರು.

ಕಾರ್ಮಿಕರ ಮನೆಯಲ್ಲಿ ನಗದು, ಚಿನ್ನಾಭರಣ ಕಳವು


ಕಳ್ಳತನವಾಗಿರುವ ಬೋರಮ್ಮರ ಮನೆಯಲ್ಲಿ ಬಟ್ಟೆಗಳು ಬಿದ್ದಿರುವುದು

ಮೇಲುಕೋಟೆ, ಫೆ.28– ಕಾರ್ಮಿಕರೊಬ್ಬರ ಮನೆಯ ಬೀಗ ಒಡೆದು ಚಿನ್ನಾಭರಣ ಮತ್ತು ನಗದು ದೋಚಿರುವ ಘಟನೆ ಚಿಟ್ಟನಹಳ್ಳಿ ಗ್ರಾಮದಲ್ಲಿ ನಡೆದಿದೆ.

ಚಿಟ್ಟನಹಳ್ಳಿ ಗ್ರಾಮದ ಕುಂಟಸಿಗ್ರಯ್ಯ ಪತ್ನಿ ಬೋರಮ್ಮ(75) ಎಂಬ ಕಾರ್ಮಿಕರ ಮನೆಯಲ್ಲಿ ಕಳ್ಳತನವಾಗಿದ್ದು ಮನೆಯ ಬೀಗ ಒಡೆದು ಒಳ ನುಗ್ಗಿರುವ ಕಳ್ಳರು ಮನೆಯಲ್ಲಿದ್ದ ಬೀರುವನ್ನು ಹಾರೆ ಯಿಂದ ಮೀಟಿ ತೆಗೆದು ಒಳಗಿದ್ದ ಚಿನ್ನದ ಉಂಗುರ, ಚಿನ್ನದಮಾಟಿ, ಚಿನ್ನದ ಓಲೆ ಸೇರಿದಂತೆ 1ಲಕ್ಷರೂ ಮೌಲ್ಯದ ಆಭರಣಗಳು ಮತ್ತು ಆಡುಮಾರಿ ಇಟ್ಟಿದ್ದ 20ಸಾವಿರ ನಗದನ್ನು ದೋಚಿದ್ದಾರೆ.

ಶುಕ್ರವಾರ ಎಂದಿನಂತೆ ಹುಣಿಸೇಹಣ್ಣು ಬಿಡಿಸುವ ಕೂಲಿ ಕೆಲಸಕ್ಕೆ ಬೆಳಿಗ್ಗೆ ತೆರಳಿದ್ದು ಸಂಜೆ ಮನೆಗೆ ಬಂದು ನೋಡಿದಾಗ ಬೀಗ ಒಡೆದು ಮನೆಯಲ್ಲಿದ್ದ ಬೀರುವನ್ನು ಮೀಟಿ ಚಿನ್ನಾಭರಣ ಮತ್ತು ನಗದನ್ನು ದೋಚಿರುವುದು ಕಂಡುಬಂದಿದೆ. ಅಕ್ಕಪಕ್ಕದ ಮನೆಯವರಿಗೆ ಮಾಹಿತಿ ನೀಡಿದ ಬೋರಮ್ಮ ಸ್ಥಳೀಯರ ಸಹಾಯದಿಂದ ಮೇಲುಕೋಟೆ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಬಿ. ಪ್ರಮೋದ್ ಸ್ಥಳಕ್ಕೆ ಭೇಟಿ ನೀಡಿ, ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ವಿಜ್ಞಾನದ ಆಸಕ್ತಿ ಹೆಚ್ಚಿಸಲು ವಸ್ತುಪ್ರದರ್ಶನ ಸಹಕಾರಿ


ಸ್ನೇಹ ವಿದ್ಯಾ ಸಂಸ್ಥೆಯಲ್ಲಿ ನಡೆದ ವಿಜ್ಞಾನ ವಸ್ತುಪ್ರದರ್ಶನ ಉದ್ಘಾಟಿಸಿದ ನಂತರ ಗಣ್ಯರು ಪ್ರಾತ್ಯಕ್ಷಿಕೆಯನ್ನು ವೀಕ್ಷಿಸಿದರು.

ಭಾರತೀನಗರ: ಮಕ್ಕಳಲ್ಲಿ ವಿಜ್ಞಾನದ ಆಸಕ್ತಿ ಹೆಚ್ಚಿಸಬೇಕಿದೆ. ಅದಕ್ಕಾಗಿ ವಿಜ್ಞಾನ ವಸ್ತುಪ್ರದರ್ಶನಗಳು ಸಹಕಾರಿಯಾಗಲಿ ಎಂದು ಭಾರತೀ ನಗರ ಸರ್ಕಾರಿ ಪ್ರೌಢಶಾಲೆಯ ಶಿಕ್ಷಕ ಶಶಿಧರ್ ತಿಳಿಸಿದರು.

ಭಾರತೀನಗರದ ಸ್ನೇಹ ವಿದ್ಯಾಸಂಸ್ಥೆಯಲ್ಲಿ ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ವಿಜ್ಞಾನ ವಸ್ತುಪ್ರದರ್ಶನ ಕಾರ್ಯಕ್ರಮವನ್ನು ಉದ್ಘಾಟಿಸಿ, ವಿದ್ಯಾರ್ಥಿಗಳು ಪ್ರಶ್ನಿಸುವ ಮನೋಭಾವನೆಯನ್ನು ಬೆಳೆಸಿಕೊಳ್ಳಬೇಕು. ಪ್ರಕೃತಿಯನ್ನು ನಾವು ಸೂಕ್ಷ್ಮವಾಗಿ ಗಮನಿಸಿದಾಗ ಸಾಕಷ್ಟು ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳಬಹುದು. ಮಕ್ಕಳು ವಿಜ್ಞಾನದಲ್ಲಿ ಅನೇಕ ಆವಿಷ್ಕಾರಗಳನ್ನು ಮಾಡುವ ಮೂಲಕ ಪರಿಹಾರ ಕಂಡುಕೊಳ್ಳಲು ಸಾಧ್ಯವಾಗುತ್ತದೆ. ಎಂದರು.

ಶಾಲಾ ಸಂಸ್ಥಾಪಕ ಡಿ.ದಾಸೇಗೌಡ ಅಧ್ಯಕ್ಷತೆ ವಹಿಸಿ ಭಾರತದಲ್ಲಿ ಇತ್ತೀಚಿನ ದಿನಗಳಲ್ಲಿ ತಂತ್ರಜ್ಞಾನ ಹಾಗೂ ವಿಜ್ಞಾನ ಹೆಚ್ಚು ಪ್ರಯೋಜನ ಪಡೆದು ಕೊಳ್ಳುತ್ತಿದ್ದು ಸಂಶೋಧನೆಗಳಿಗೆ ಆದ್ಯತೆ ನೀಡಲಾಗುತ್ತಿದೆ. ತಂತ್ರಜ್ಞಾನ ಕ್ಷೇತ್ರದಲ್ಲಿ ವಿಶ್ವದ ಬಲಿಷ್ಠ ರಾಷ್ಟ್ರಗಳು ಎಂದು ಕರೆಸಿಕೊಳ್ಳುವ ಅಮೆರಿಕಾ, ಚೀನಾ, ಜಪಾನ್, ರಷ್ಯಾ ಭಾರತ ಕಡೆ ತಿರುಗಿ ನೋಡುವಂತಾಗಿದೆ ಎಂದರು.

ವಿವಿಧ ಪ್ರಬೇಧಗಳ ಮಾದರಿ, ಸೌರವ್ಯೂಹದ ರಾತ್ರಿ–ಹಗಲು, ಗ್ರಹಣ, ಋತುಮಾನದ ವಿಶೇಷ ಮಾದರಿಗಳು, ರಾಕೆಟ್ ಮಾದರಿ ಇನ್ನಿತರ ಮೂಲ ವಿಜ್ಞಾನದ ಉಪಕರಣಗಳು ವಿದ್ಯಾರ್ಥಿಗಳಿಂದ ಪ್ರದರ್ಶಿತಗೊಂಡವು. ವೇದಿಕೆಯಲ್ಲಿ ಶಾಲೆಯ ಅಧ್ಯಕ್ಷೆ ಶಶಿಕಲಾ ದಾಸೇಗೌಡ, ಮುಖ್ಯ ಶಿಕ್ಷಕ ರವಿಶಂಕರ್, ಶಿಕ್ಷಕಿಯರಾದ ಉಷಾ, ಸ್ವರೂಪ, ಮಾಲಾ, ರಶ್ಮಿ, ಸವಿತ, ತೇಜಸ್ವಿನಿ, ಸಹನ, ರಂಜಿತ, ಮಮತ ಸೇರಿದಂತೆ ಹಲವರಿದ್ದರು.

ಸರ್ಕಾರಿ ಶಾಲೆ ಉಳಿದರೆ ಕನ್ನಡ ನಾಡು ನುಡಿ ಉಳಿಯುತ್ತೆ

ಕಿಕ್ಕೇರಿ: ಸರ್ಕಾರಿ ಶಾಲೆ ಉಳಿದರೆ ನಾಡು ನುಡಿ ಎಲ್ಲವೂ ಗಟ್ಟಿಯಾಗಿ ಉಳಿಯಲಿದೆ ಎಂಬುದನ್ನು ಕನ್ನಡಿಗರು ಅರ್ಥ ಮಾಡಿಕೊಳ್ಳಬೇಕೆಂದು ಶಾಸಕ ಎಚ್.ಟಿ.ಮಂಜು ಹೇಳಿದ್ದಾರೆ.

ಸಮೀಪದ ಮಾಕವಳ್ಳಿ ಗ್ರಾಮದಲ್ಲಿ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಶಿಫಾರಸ್ಸಿನಲ್ಲಿ ಆರ್ಸೆಲರ್ ಮಿತ್ತಲ್ ಪ್ರೈ. ಲಿಮಿಟೆಡ್ ಕಂಪನಿಯ ಸಿಎಸ್‌ಆರ್ ಅನುದಾನದಲ್ಲಿ ಮಾಕವಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಕೊಠಡಿ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸಿ ಮಾತನಾಡುತ್ತ, ಮಾತೃ ಭಾಷೆ ಶಿಕ್ಷಣದಿಂದ ಬಲುಬೇಗ ಓದಿದನ್ನು ಗ್ರಹಿಸಬಹುದಾಗಿದೆ. ಸರ್ಕಾರಿ ಶಾಲೆಯಲ್ಲಿ ಗುಣಾತ್ಮಕ ಶಿಕ್ಷಣ, ಪರಿಸರ ಇರುವುದನ್ನು ಅರ್ಥ ಮಾಡಿಕೊಳ್ಳಬೇಕು ಎಂದು ನುಡಿದರು.

ಪ್ರೇಮಲೀಲಾ ಓಂಮೂರ್ತಿ ಶರ್ಮ ನಿಧನ



ಕೆ.ಆರ್.ಪೇಟೆ, ಫೆ.28– ಪಟ್ಟಣದ ಹೇಮಾವತಿ ಬಡಾವಣೆಯ ನಿವಾಸಿ ಬ್ರಾಹ್ಮಣ ಸಮಾಜದ ಹಿರಿಯರಾದ ಪ್ರೇಮಲೀಲಾ ಓಂಮೂರ್ತಿ ಶರ್ಮ (80) ನಿಧನರಾಗಿದ್ದಾರೆ. ಮೃತರು ಐವರು ಹೆಣ್ಣು ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ಮಾ.1 ರಂದು (ಭಾನುವಾರ) ಮಧ್ಯಾಹ್ನ ಅನುವಿನಕಟ್ಟೆಯ ಕೆರೆಕೋಡಿ ಬಳಿ ಇರುವ ಬ್ರಾಹ್ಮಣರ ಸ್ಮಶಾನದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ ಮೃತರ ನಿಧನಕ್ಕೆ ತಾಲೂಕು ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಅರವಿಂದ್ ಕಾರಂತ್ ಹಾಗೂ ಎಲ್ಲಾ ಪದಾಧಿಕಾರಿಗಳು ಸೇರಿದಂತೆ ವಿವಿಧ ಗಣ್ಯರು ಸಂತಾಪ ಸೂಚಿಸಿದ್ದಾರೆ.

ಒಂದನೇ ಪುಟದಿಂದ

'ಕಾಡಿನ ಮಿತ್ರರು'

ಇದಕ್ಕಾಗಿ ಗ್ರಾಮದ ನುರಿತ ರೈತರನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಒಟ್ಟು 50 ಮಂದಿಯನ್ನು ಕಾಡಿನ ಮಿತ್ರರನ್ನಾಗಿ ದಿನಗೂಲಿ ಆಧಾರದಲ್ಲಿ ನೇಮಿಸಿಕೊಳ್ಳಲಾಗಿದೆ. ಇದರಿಂದ ಗಸ್ತು ವ್ಯವಸ್ಥೆ ಪರಿಣಾಮಕಾರಿಯಾಗಿದೆ.

25 ಹೆಚ್ಚುವರಿ ತಂಡ ರಚನೆ: ಹುಲಿ ದಾಳಿ ಪ್ರಕರಣದಿಂದ ಜೀವಹಾನಿ ಸಂಭವಿಸಿದ ಅರಣ್ಯದಂಚಿನ ಪ್ರದೇಶದಲ್ಲಿ ಗಸ್ತು ತಿರುಗಲು ಹೆಚ್ಚುವರಿಯಾಗಿ 25 ತಂಡ ರಚಿಸಲಾಗಿದ್ದು, ಅದಕ್ಕೆ 'ಹುಲಿ ಕ್ಷಿಪ್ರ ಕಾರ್ಯಪಡೆ' ಎಂದು ಹೆಸರಿಸಲಾಗಿದೆ. ಈ ತಂಡದಲ್ಲಿ ಇಬ್ಬರು 'ಕಾಡಿನ ಮಿತ್ರ'ರು ಹಾಗೂ ಇಬ್ಬರು ಅರಣ್ಯ ಸಿಬ್ಬಂದಿ ನಿಯೋಜಿಸಲಾಗಿದೆ. ತಂಡವೊಂದರಲ್ಲಿ ನಾಲ್ಕು ಮಂದಿಯಿದ್ದು, ಗಸ್ತು ತಿರುಗುವುದರೊಂದಿಗೆ ಕಾಡಿನಿಂದ ಗ್ರಾಮಗಳತ್ತ ಬರುವ ವನ್ಯಜೀವಿಗಳ ಮೇಲೂ ನಿಗಾ ಇಡಲಿದ್ದಾರೆ.

ಸಲಕರಣೆ: ಕಾಡಿನ ಮಿತ್ರರು ಇರುವ 'ಹುಲಿ ಕ್ಷಿಪ್ರ ಕಾರ್ಯಪಡೆ' ಸಿಬ್ಬಂದಿಗೆ ಅರಣ್ಯ ಇಲಾಖೆ ವತಿಯಿಂದ ಜಾಕೆಟ್, ಲಾಠಿ, ಮಚ್ಚು, ಟಾರ್ಚ್, ಧ್ವನಿ ವರ್ಧಕ, ಪಟಾಕಿ ಹಾಗೂ ವಾಕಿಟಾಕಿ ನೀಡಲಾಗಿದೆ. ವನ್ಯಜೀವಿಗಳು ಕಾಡಿನಿಂದ ಹೊರ ಬಂದರೆ, ಅವುಗಳ ಹಿಮ್ಮೆಟ್ಟಿಸಲು ಪ್ರಯತ್ನಿಸಲಿದ್ದಾರೆ. ವಾಕಿಟಾಕಿ ಮೂಲಕ ಹೆಚ್ಚಿನ ಸಿಬ್ಬಂದಿಗಳನ್ನು ಸ್ಥಳಕ್ಕೆ ಕರೆಸಿಕೊಳ್ಳಬಹುದು.

ರೈತರಿಗೂ ಜಾಗೃತಿ: ಕಾಡಿನ ಮಿತ್ರರುಳ್ಳ 'ಹುಲಿ ಕ್ಷಿಪ್ರ ಕಾರ್ಯಪಡೆ' ಗಸ್ತು ತಿರುಗುವುದರೊಂದಿಗೆ ಕಾಡಂಚಿನ ಗ್ರಾಮಸ್ಥರು ಹಾಗೂ ರೈತರಲ್ಲಿ ಜಾಗೃತಿ ಮೂಡಿಸಲಿದ್ದಾರೆ. ಅರಣ್ಯ ಪ್ರದೇಶಕ್ಕೆ ಹೋಗದಂತೆ, ಜಾನುವಾರುಗಳನ್ನು ಮೇಯಲು ಬಿಡದಂತೆ ಮನವರಿಕೆ ಮಾಡಿಕೊಡಲಿದ್ದಾರೆ. ಕಾಡಂಚಿಗೆ ಹೋಗುವ ಅನಿವಾರ್ಯತೆ ಇದ್ದರೆ ಆದಷ್ಟು ಗುಂಪು ಗುಂಪಾಗಿ ಹೋಗಬೇಕು. ಜಮೀನಿನಲ್ಲಿ ಹುಲಿ ಹೆಜ್ಜೆ ಗುರುತು ಕಂಡು ಬಂದರೆ ಕೂಡಲೇ ಅರಣ್ಯ ಸಿಬ್ಬಂದಿಗೆ ಮಾಹಿತಿ ನೀಡುವಂತೆ ಜಾಗೃತಿ ಮೂಡಿಸುತ್ತಿದ್ದಾರೆ.

ಸ್ಥಳೀಯರ ಸಹಕಾರಕ್ಕೆ ಸಹಾಯ: ಮಾನವ–ವನ್ಯಜೀವಿ ತಡೆಗೆ ಅರಣ್ಯ ಸಿಬ್ಬಂದಿಯ ಪ್ರಯತ್ನವನ್ನು ಕಾಡಿನ ಮಿತ್ರರಿಗೆ ಮನವರಿಕೆ ಮಾಡಿಕೊಟ್ಟು, ಆ ಮೂಲಕ ಸಮುದಾಯದಲ್ಲಿ ಅರಿವು ಮೂಡಿಸುವುದು ಇದರ ಉದ್ದೇಶ.

ಆನೆ ಹಿಮ್ಮೆಟ್ಟಿಸಿದ ತಂಡ: ಸರಗೂರು ತಾಲೂಕಲ್ಲಿ ಅರಣ್ಯದಿಂದ ಹೊರ ಬರಲು ಯತ್ನಿಸಿದ ಆನೆಯೊಂದನ್ನು 'ಕಾಡಿನ ಮಿತ್ರ' ತಂಡ ಯಶಸ್ವಿಯಾಗಿ ಹಿಮ್ಮೆಟ್ಟಿಸಿದೆ. ಧ್ವನಿವರ್ಧಕ ಬಳಸಿ ಭಾರಿ ಸದ್ದು ಮಾಡಿ, ಪಟಾಕಿ ಸಿಡಿಸಿ ಪ್ರಯತ್ನದಲ್ಲಿ ಯಶಸ್ವಿಯಾಗಿದೆ. ಅಲ್ಲದೆ, ವೃದ್ಧರೊಬ್ಬರ ಬಲಿ ಪಡೆದಿದ್ದ 'ದೃಷ್ಟಿ ಹೀನ' ಆನೆ ಸೆರೆ ಕಾರ್ಯಾಚರಣೆಯಲ್ಲೂ ಈ ತಂಡ ಪ್ರಮುಖ ಪಾತ್ರವಹಿಸಿ, ಪ್ರಶಂಸೆಗೆ ಪಾತ್ರವಾಗಿದೆ.

ನನ್ನಣ್ಣ ಸಿಎಂ ಆಗ್ತಾರೆ...

ಪ್ರಶ್ನೆಗೆ ಚುನಾವಣೆಗೆ ಸ್ಪರ್ಧಿಸುವವರಿಗೆ ಕಷ್ಟವಾಗಬಹುದು. ನನಗೆ ಕಷ್ಟ ಆಗುವುದಿಲ್ಲ. ಈ ಬಗ್ಗೆ ನಾನೇನು ಹೇಳಲಿ ಎಂದು ಬಮೂಲ್ ಅಧ್ಯಕ್ಷ ಡಿ.ಕೆ.ಸುರೇಶ್ ಹೇಳಿದರು.

ಕೆಎಂಎಫ್ ಚುನಾವಣೆ ಯಾವಾಗ ಮಾಡಬೇಕು ಎಂಬುದನ್ನು ಅಧಿಕಾರಿಗಳು ತೀರ್ಮಾನ ಮಾಡುತ್ತಾರೆ. ಆಗ ಪಕ್ಷ ತೀರ್ಮಾನ ಮಾಡುವ ವ್ಯಕ್ತಿಯೇ ಸ್ಪರ್ಧೆ ಮಾಡಲಿದ್ದಾರೆ. ನಾನು ಯಾವುದಕ್ಕೂ ಆಕಾಂಕ್ಷಿ ಅಲ್ಲ.ರಾಜ್ಯಸಭೆಗೆ ಹೋಗುವ ಪ್ರಯತ್ನವೂ ಇಲ್ಲ. ಅದರ ಬಗ್ಗೆ ನನಗೆ ಗೊತ್ತಿಲ್ಲ. ನಾನು ರಾಜಕೀಯ ಪಂಡಿತನಲ್ಲ. ನನ್ನ ಪರವಾಗಿ ಯಾರೂ ದೆಹಲಿಗೆ ಹೋಗುವುದು ಬೇಡ ಎಂಬ ಶಿವಕುಮಾರ್ ಹೇಳಿಕೆ ವಿಚಾರ ನನಗೆ ಗೊತ್ತಿಲ್ಲ. ನಾನು ಅವರನ್ನು ಭೇಟಿ ಮಾಡಿಲ್ಲ ಎಂದರು.

ಗ್ಯಾರಂಟಿ ನಮ್ಮ ವಾಗ್ದಾನ: ಗ್ಯಾರಂಟಿ ಯೋಜನೆಗಳು ರಾಜ್ಯದ ಜನತೆಗೆ ಕೊಟ್ಟ ನಮ್ಮ ವಾಗ್ದಾನ. ನಾವು ಅದರಂತೆ ನಡೆಯಬೇಕು. ಪಕ್ಷದ ಅಧ್ಯಕ್ಷರು, ಮುಖ್ಯಮಂತ್ರಿ ಸೇರಿದಂತೆ ಚುನಾವಣೆ ಎದುರಿಸಿದ ಎಲ್ಲರೂ ಗ್ಯಾರಂಟಿ ನೀಡುವುದಾಗಿ ಹೇಳಿದ್ದಾರೆ. ಅದನ್ನು ಉಳಿಸಿಕೊಳ್ಳುವ ಕೆಲಸ ಮಾಡಬೇಕು ಎಂದು ಅವರು ಹೇಳಿದರು.

ವೈದ್ಯಕೀಯ ಸಿಬ್ಬಂದಿ ಸಂಘಗಳ ಮುಷ್ಕರ

ರೋಗಿಗಳ ಬಗ್ಗೆ ಕಾಳಜಿ ವಹಿಸಬೇಕು ಎಂದರು.

ಕಟ್ಟುನಿಟ್ಟಿನ ಕ್ರಮದ ಎಚ್ಚರಿಕೆ: ಮುಷ್ಕರ ಘೋಷಣೆಗೆ ಪ್ರತಿಕ್ರಿಯಿಸಿದ ಸಚಿವ ದಿನೇಶ್ ಗುಂಡೂರಾವ್, ರೋಗಿಗಳ ಚಿಕಿತ್ಸೆಗೆ ಅಡ್ಡಿ ಉಂಟಾದರೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು. ಅವಶ್ಯಕ ಆರೋಗ್ಯ ಸೇವೆಗಳನ್ನು ಅಸ್ತವ್ಯಸ್ತಗೊಳಿಸಿ ರೋಗಿಗಳ ಜೀವಕ್ಕೆ ಅಪಾಯ ಉಂಟುಮಾಡುವುದನ್ನು ಲಘುವಾಗಿ ತೆಗೆದುಕೊಳ್ಳಲಾಗುವುದಿಲ್ಲ ಎಂದು ಅವರು ಹೇಳಿದರು. ಕರ್ತವ್ಯಕ್ಕೆ ಗೈರಾಗುವವರ ವಿರುದ್ಧ ಕಾನೂನು ಆಯ್ಕೆಗಳನ್ನು ಪರಿಶೀಲಿಸಲಾಗುತ್ತಿದೆ ಎಂದು ತಿಳಿಸಿದರು.

ಆರೋಗ್ಯ ಸೇವೆ ಮಹತ್ವದ ಸಾರ್ವಜನಿಕ ಸೇವೆಯಾಗಿದ್ದು, ರೋಗಿಗಳನ್ನು ರಕ್ಷಿಸಲು ರಾಜ್ಯ ಸರ್ಕಾರ ಕ್ರಮ ಕೈಗೊಳ್ಳಲಿದೆ. ಸೇವೆ ನಿರಂತರತೆ ಕಾಯ್ದುಕೊಳ್ಳಲು ಪರ್ಯಾಯ ವ್ಯವಸ್ಥೆಗಳನ್ನೂ ಪರಿಶೀಲಿಸಲಾಗುತ್ತಿದೆ ಎಂದು ಸಚಿವರು ಹೇಳಿದರು.

ಇರಾನ್ ಮೇಲೆರಗಿದ ಇಸ್ರೇಲ್, ಅಮೆರಿಕಾ

ಪ್ರಾಧಿಕಾರ ಆದೇಶ ಹೊರಡಿಸಿದೆ.

ಯುದ್ಧ ಘೋಷಣೆ: ಇರಾನ್ ಮೇಲೆ ಇಸ್ರೇಲ್ ದಾಳಿ ನಡೆಸಿದ ಬೆನ್ನಲ್ಲೇ ಅಮೆರಿಕ, ಇರಾನ್‌ನಲ್ಲಿ ಪ್ರಮುಖ ಯುದ್ಧ ಕಾರ್ಯಾಚರಣೆಯನ್ನು ಘೋಷಿಸಿದೆ.

ಈ ಕುರಿತು ಸುದ್ದಿಗಾರರೊಂದಿಗೆ ಮಾತನಾಡಿದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಇರಾನ್‌ನಿಂದ ಸನ್ನಿಹಿತ ಬೆದರಿಕೆಗಳನ್ನು ತೊಡೆದುಹಾಕುವ ಮೂಲಕ ಅಮೆರಿಕನ್ ಜನರನ್ನು ರಕ್ಷಿಸುವ ಸಲುವಾಗಿ ಪ್ರಮುಖ ಯುದ್ಧ ಕಾರ್ಯಾಚರಣೆ ನಡೆಸಲಾಗುತ್ತದೆ ಎಂದು ಎಚ್ಚರಿಸಿದ್ದಾರೆ.

ಇರಾನ್ ಅನ್ನು ವಿಶ್ವದ ಭಯೋತ್ಪಾದನೆಯ ನಂಬರ್ ಒನ್ ಪ್ರಾಯೋಜಕ ರಾಷ್ಟ್ರ ಎಂದು ಕರೆದ ಟ್ರಂಪ್, 47 ವರ್ಷಗಳಿಂದ, ಇರಾನ್ ಆಡಳಿತವು ಅಮೆರಿಕಕ್ಕೆ ಸಾವು ಎಂದು ಘೋಷಣೆ ಕೂಗಿದೆ ಮತ್ತು ಯುನೈಟೆಡ್ ಸ್ಟೇಟ್ಸ್, ನಮ್ಮ ಸೇನಾ ಪಡೆಗಳು ಮತ್ತು ಅನೇಕ ದೇಶಗಳಲ್ಲಿ ಮುಗ್ಧ ಜನರನ್ನು ಗುರಿಯಾಗಿಸಿಕೊಂಡು ರಕ್ತಪಾತ ಮತ್ತು ಸಾಮೂಹಿಕ ಹತ್ಯೆಯ ಅಂತ್ಯವಿಲ್ಲದ ಅಭಿಯಾನವನ್ನು ನಡೆಸಿವೆ. ಅಮೆರಿಕ ನೌಕಾ ಮತ್ತು ವಾಣಿಜ್ಯ ಹಡಗುಗಳ ವಿರುದ್ಧ ಲೆಕ್ಕವಿಲ್ಲದಷ್ಟು ದಾಳಿಗಳನ್ನು ಮುಂದುವರೆಸಿವೆ. ಹಾಗಾಗಿ ಇರಾನ್, ಸೇನೆ, ನೌಕಾಪಡೆ ಮತ್ತು ಕ್ಷಿಪಣಿ ತಾಣಗಳನ್ನು ನಾಶಪಡಿಸುವುದಾಗಿ ಪ್ರತಿಜ್ಞೆ ಮಾಡಿದ್ದಾರೆ.

ಇಸ್ಲಾಮಿಕ್ ಗಣರಾಜ್ಯದ ಮಿಲಿಟರಿಯನ್ನು ನಾಶ ಮಾಡುವುದು ಮತ್ತು 1979ರ ಕ್ರಾಂತಿಯ ನಂತರ ಅಧಿಕಾರದಲ್ಲಿರುವ ಸರ್ಕಾರವನ್ನು ಉರುಳಿಸುವುದು ನಮ್ಮ ಗುರಿಯಾಗಿದೆ. ನಾವು ಅವರ ಕ್ಷಿಪಣಿಗಳನ್ನು ನಾಶಮಾಡಲಿದ್ದೇವೆ ಮತ್ತು ಅವರ ಕ್ಷಿಪಣಿ ಉದ್ಯಮವನ್ನು ನೆಲಕ್ಕೆ ಉರುಳಿಸುತ್ತೇವೆ. ನಾವು ಅವರ ನೌಕಾ ಪಡೆಯನ್ನು ನಾಶ ಮಾಡಲಿದ್ದೇವೆ ಎಂದು ಗುಡುಗಿದ್ದಾರೆ.

85 ಮಂದಿ ಸಾವು: ಅಮೆರಿಕ–ಇಸ್ರೇಲ್ ಜಂಟಿಯಾಗಿ ನಡೆಸಿದ ವೈಮಾನಿಕ ದಾಳಿಯಲ್ಲಿ ಇರಾನ್‌ನ 57 ವಿದ್ಯಾರ್ಥಿಗಳು ಸೇರಿದಂತೆ 85ಕ್ಕೂ ಹೆಚ್ಚು ಮಂದಿ ಸಾವನ್ನಪ್ಪಿದ್ದಾರೆ. ಮಿನಾಬ್ ನಗರದಲ್ಲಿ ದಾಳಿ ನಡೆದಾಗ ಈ ಘಟನೆ ನಡೆದಿದೆ. ಬಾಂಬ್ ದಾಳಿಯ ಸಮಯದಲ್ಲಿ ಶಾಲೆಯ ಮೇಲೆ ದಾಳಿ ನಡೆಸಲಾಗಿದ್ದು, ವಿದ್ಯಾರ್ಥಿಗಳು ಹಾಗೂ ಆಸು ಪಾಸಿನ ಸಾರ್ವಜನಿಕರು ಸಾವನ್ನಪ್ಪಿದ್ದಾರೆ ಎಂದು ಇರಾನ್‌ನ ಮಾಧ್ಯಮಗಳು ತಿಳಿಸಿವೆ.

ಅಮೆರಿಕ ಮತ್ತು ಇಸ್ರೇಲ್ ನಡೆಸಿದ ಜಂಟಿ ದಾಳಿ ವೇಳೆ ಇರಾನ್‌ನಾದ್ಯಂತ ಹಲವಾರು ಸ್ಥಳಗಳನ್ನು ಗುರಿಯಾಗಿಸಿಕೊಂಡಿವೆ. ಸುಪ್ರೀಂ ನಾಯಕ ಅಯತೊಲ್ಲಾ ಅಲಿ ಖಮೇನಿ ಅವರಿಗೆ ಸಂಬಂಧಿಸಿದ ಕಚೇರಿಗಳ ಬಳಿ ಸೇರಿದಂತೆ ದೇಶದ ವಿವಿಧ ಪ್ರದೇಶಗಳಲ್ಲಿ ಸ್ಫೋಟಗಳು ವರದಿಯಾಗಿವೆ.

ಭಾರತದಿಂದ ವಿಮಾನ ಹಾರಾಟ ಬಂದ್: ಮಧ್ಯಪ್ರಾಚ್ಯದಲ್ಲಿ ಭೀಕರ ಯುದ್ಧ ಶುರುವಾಗಿರುವ ಹಿನ್ನೆಲೆಯಲ್ಲಿ ಭಾರತದ ನಾಗರಿಕ ವಿಮಾನಯಾನ ಸಚಿವ ರಾಮ್ ಮೋಹನ್ ನಾಯ್ಡು ಅವರು ಅಂತರರಾಷ್ಟ್ರೀಯ ವಾಯು ಕಾರ್ಯಾಚರಣೆಗಳ ಮೇಲೆ ಈ ಸಂಘರ್ಷದ ಪರಿಣಾಮದ ಬಗ್ಗೆ ಚರ್ಚಿಸಲು ಪರಿಶೀಲನಾ ಸಭೆ ನಡೆಸಿದ್ದಾರೆ. ದೇಶಾದ್ಯಂತದ ವಿಮಾನ ನಿಲ್ದಾಣಗಳು, ವಿಶೇಷವಾಗಿ ಅಂತರರಾಷ್ಟ್ರೀಯ ಗೇಟ್‌ವೇಗಳನ್ನು, ಸಂಭಾವ್ಯ ವಿಮಾನ ತಿರುವುಗಳು, ಯೋಜಿತವಲ್ಲದ ಲ್ಯಾಂಡಿಂಗ್‌ಗಳು ಮತ್ತು ಪ್ರಯಾಣಿಕರ ಅನುಕೂಲತೆಯ ಅಗತ್ಯಗಳನ್ನು ನಿರ್ವಹಿಸಲು ಕಾರ್ಯಾಚರಣೆ ಎಚ್ಚರಿಕೆಯಲ್ಲಿ ಇರಿಸಲಾಗಿದೆ.

ಮಧ್ಯಪ್ರಾಚ್ಯದ ಹಲವು ದೇಶಗಳಿಗೆ 55 ವಿಮಾನಗಳನ್ನು ನಿರ್ವಹಿಸುವ ಏರ್ ಇಂಡಿಯಾ ತನ್ನ ಎಲ್ಲಾ ವಿಮಾನಗಳನ್ನು ರದ್ದುಗೊಳಿಸಿದೆ. ನಾವು ಮಧ್ಯಪ್ರಾಚ್ಯಕ್ಕೆ ನಮ್ಮ ಎಲ್ಲಾ ವಿಮಾನಗಳನ್ನು ಸ್ಥಗಿತಗೊಳಿಸಿದ್ದೇವೆ. ದೆಹಲಿ, ಮುಂಬೈ, ತಿರುಚಿರಪಳ್ಳಿ, ಕೊಚ್ಚಿ, ಕಣ್ಣೂರು, ತಿರುವನಂತಪುರಂ, ಬೆಂಗಳೂರು, ಹೈದರಾಬಾದ್, ಲಕ್ನೋ, ಜೈಪುರ, ಮಂಗಳೂರು, ಕೋಝಿಕ್ಕೋಡ್ ಮತ್ತು ವಾರಣಾಸಿ ಸೇರಿದಂತೆ ಪ್ರಮುಖ ಭಾರತೀಯ ನಗರಗಳಿಂದ ನಾವು ಕೊಲ್ಲಿಯ ಪ್ರಮುಖ ನಗರಗಳಿಗೆ ವಿಮಾನಗಳನ್ನು ನಿರ್ವಹಿಸುತ್ತೇವೆ. ದುಬೈ, ಅಬುಧಾಬಿ, ಶಾರ್ಜಾ, ಬಹ್ರೇನ್, ಕುವೈತ್, ಮಸ್ಕತ್, ದಮಾಮ್, ರಿಯಾದ್, ಜೆಡ್ಡಾ, ಸಲಾಲಾ, ಅಲ್–ಅಯಿನ್ ಮತ್ತು ದೋಹಾಗಳಿಗೆ ವಿಮಾನಗಳನ್ನು ನಿರ್ವಹಿಸುತ್ತೇವೆ. ಪ್ರಸ್ತುತ 24 ಗಂಟೆಗಳ ಕಾಲ ಸೇವೆ ರದ್ದುಗೊಳಿಸಲಾಗಿದೆ. ಪರಿಸ್ಥಿತಿ ನೋಡಿಕೊಂಡು ಸೇವೆ ಒದಗಿಸುವ ಕುರಿತು ನಿರ್ಧಾರ ತೆಗೆದುಕೊಳ್ಳುತ್ತೇವೆ ಎಂದು ಸಂಸ್ಥೆ ಹೇಳಿದೆ.

ಇಸ್ರೇಲ್ ಪ್ರಧಾನಿ ಸಂದೇಶ

ಇರಾನ್‌ನ ಪರಮಾಣು ಕಾರ್ಯಕ್ರಮ ಮತ್ತು ಮಿಲಿಟರಿ ಮೂಲಸೌಕರ್ಯಗಳು ಇಸ್ರೇಲ್‌ಗೆ ಅಸ್ತಿತ್ವದ ಬೆದರಿಕೆಯಾಗಿದ್ದು, ಅದನ್ನು ನಿರ್ಮೂಲನೆ ಮಾಡುವ ಉದ್ದೇಶದಿಂದ ಇಸ್ರೇಲ್ ಮತ್ತು ಅಮೆರಿಕ ಕಾರ್ಯಾಚರಣೆಯನ್ನು ಪ್ರಾರಂಭಿಸಿವೆ ಎಂದು ಇಸ್ರೇಲಿ ಪ್ರಧಾನಿ ಬೆಂಜಮಿನ್ ನೆತನ್ಯಾಹು ನಾಗರಿಕರಿಗೆ ವೀಡಿಯೊ ಸಂದೇಶದಲ್ಲಿ ತಿಳಿಸಿದ್ದಾರೆ. ಐತಿಹಾಸಿಕ ನಾಯಕತ್ವಕ್ಕಾಗಿ ನಮ್ಮ ಮಹಾನ್ ಸ್ನೇಹಿತ, ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ ಧನ್ಯವಾದ ಹೇಳುವುದಾಗಿ ಹೇಳಿದ್ದಾರೆ.

ಭಾರತೀಯ ವಿದ್ಯಾರ್ಥಿಗಳ ರೋಧನೆ: ಹೆಚ್ಚಿನ ಸಂಖ್ಯೆಯ ಭಾರತೀಯ ವಿದ್ಯಾರ್ಥಿಗಳು ಮಧ್ಯಪ್ರಾಚ್ಯದಲ್ಲಿದ್ದಾರೆ. ಅವರಲ್ಲೂ ಇರಾನ್‌ನಲ್ಲಿ ಹೆಚ್ಚು ಮಂದಿ ಓದುತ್ತಿದ್ದಾರೆ. ಇರಾನ್–ಇಸ್ರೇಲ್ ಯುದ್ಧದ ಮಧ್ಯೆ, ಟೆಹ್ರಾನ್‌ನಲ್ಲಿರುವ ಭಾರತೀಯ ವಿದ್ಯಾರ್ಥಿಯೊಬ್ಬರು ಕೇಂದ್ರ ಸರ್ಕಾರದಿಂದ ತಕ್ಷಣ ಸ್ಥಳಾಂತರಿಸುವಂತೆ ಕೋರಿದ್ದಾರೆ. ನಾನು ಭಾರತೀಯ ವಿದ್ಯಾರ್ಥಿ ಮತ್ತು ನಾನು ಪ್ರಸ್ತುತ ಟೆಹ್ರಾನ್‌ನಲ್ಲಿದ್ದೇನೆ. ಇಲ್ಲಿನ ಪರಿಸ್ಥಿತಿ ತುಂಬಾ ಕೆಟ್ಟದಾಗಿದೆ. ಮುಂದೆ ಏನಾಗುತ್ತದೆ ಎಂದು ನಮಗೆ ತಿಳಿದಿಲ್ಲ ಎಂದು ಗೋಳಾಡಿದ್ದಾರೆ.

ಸರ್ಕಾರ ಮತ್ತು ವಿದೇಶಾಂಗ ಸಚಿವಾಲಯ ನಮ್ಮ ಸುರಕ್ಷತೆಯ ಬಗ್ಗೆ ಚರ್ಚಿಸುತ್ತಿರುವುದಕ್ಕೆ ನಾವು ತುಂಬಾ ಕೃತಜ್ಞರಾಗಿರುತ್ತೇವೆ, ಆದರೆ ಇಂತಹ ಸಮಯದಲ್ಲಿ ವೇಗವು ನಿರ್ಣಾಯಕವಾಗಿದೆ. ವೈಮಾನಿಕ ದಾಳಿಗಳು ನಡೆಯುತ್ತಿರುವುದರಿಂದ ನನಗೆ ಸರಿಯಾಗಿ ಮಾತನಾಡಲು ಸಹ ಸಾಧ್ಯವಾಗುತ್ತಿಲ್ಲ. ದಯವಿಟ್ಟು ಸಾಧ್ಯವಾದಷ್ಟು ಬೇಗ ನಮ್ಮನ್ನು ಇಲ್ಲಿಂದ ಹೊರಗೆ ಕಳುಹಿಸಿ ಎಂದು ಕೇಳಿಕೊಂಡಿದ್ದಾರೆ.

ಖಮೇನಿ ಫಿನೀಶ್!

ಪಾಕಪೌರ್ ಮತ್ತು ರಕ್ಷಣಾ ಸಚಿವ ಅಮಿರ್ ನಾಸಿರ್‌ಜೆಡಾ ಮೃತಪಟ್ಟಿದ್ದಾರೆಂದು ವರದಿಗಳು ಹೇಳಿವೆ. ಆದರೆ, ಟೆಹ್ರಾನ್ ಆಡಳಿತ ಈ ಬಗ್ಗೆ ಅಧಿಕೃತ ಹೇಳಿಕೆ ಬಿಡುಗಡೆ ಮಾಡಿಲ್ಲ.

ನನಗೆ ತಿಳಿದಿರುವಂತೆ ಜೀವಂತವಾಗಿದ್ದಾರೆ; ವಿದೇಶಾಂಗ ಸಚಿವ: ಇಸ್ರೇಲ್‌ನ ಚಾನೆಲ್ 12 ಹೆಸರು ಬಹಿರಂಗಪಡಿಸದೆ ಇಸ್ರೇಲಿ ಮೂಲಗಳನ್ನು ಉಲ್ಲೇಖಿಸಿ, 86 ವರ್ಷ ವಯಸ್ಸಿನ ನಾಯಕನನ್ನು ಕೊಲ್ಲಲಾಗಿದೆ ಎಂದು ಹೇಳಿದೆ. ಆದರೆ, ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಗ್ಚಿ ಎನ್‌ಬಿಸಿ ನ್ಯೂಸ್‌ಗೆ ನೀಡಿದ ಸಂದರ್ಶನದಲ್ಲಿ, ನನಗೆ ತಿಳಿದಿರುವಂತೆ ಖಮೇನಿ ಇನ್ನೂ ಜೀವಂತವಾಗಿದ್ದಾರೆ ಎಂದು ಹೇಳಿದ್ದಾರೆ.

ಯಾವೆಲ್ಲಾ ಸ್ಥಳಗಳು ಟಾರ್ಗೆಟ್: ಇರಾನ್‌ನ ಟೆಹ್ರಾನ್‌ನಲ್ಲಿರುವ ಪರಮೋಚ್ಚ ನಾಯಕ ಅಯತೊಲ್ಲಾಅಲಿ ಖಮೇನಿ ಅಧಿಕೃತ ನಿವಾಸ, ಕಚೇರಿ, ಅಧ್ಯಕ್ಷ ಪೆಜೆಶ್ಕಿಯಾನ್ ಮಸೂದ್ ಅವರ ನಿವಾಸ, ಸೇನಾ ನೆಲೆಗಳು, ಗುಪ್ತಚರ ಕೇಂದ್ರಗಳು, ರಕ್ಷಣಾ ಇಲಾಖೆ, ಇರಾನ್ ಅಣುಶಕ್ತಿ ಹಾಗೂ ಕ್ಷಿಪಣಿ ಅಭಿವೃದ್ಧಿ ಕೇಂದ್ರಗಳನ್ನು ಟಾರ್ಗೆಟ್ ಮಾಡಿ ಅಮೆರಿಕ– ಇಸ್ರೇಲ್ ದಾಳಿ ನಡೆಸಿವೆ. 30ಕ್ಕೂ ಹೆಚ್ಚು ನಗರಗಳ ಮೇಲೆ ದಾಳಿ ನಡೆದಿದೆ.

ಮೂರನೇ ಮಹಾಯುದ್ಧಕ್ಕೆ ದಾರಿ: ಹಮಾಸ್ ಬಂಡುಕೋರ ಪಡೆಯು ಅಮೆರಿಕ ವಿರುದ್ಧ ಒಂದಾಗಿ ಹೋರಾಟ ನಡೆಸುವಂತೆ ಅರಬ್ ರಾಷ್ಟ್ರಗಳಿಗೆ ಕರೆ ಕೊಟ್ಟಿದೆ. ಈ ಕಾದಾಟವು ಇನ್ನಷ್ಟು ತೀವ್ರ ಸ್ವರೂಪ ಪಡೆದಲ್ಲಿ ಇದು ಮೂರನೇ ವಿಶ್ವ ಯುದ್ಧಕ್ಕೆ ದಾರಿ ಮಾಡಿಕೊಡಲಿದೆಯೇ ಎಂಬ ಭೀತಿ ಶುರುವಾಗಿದೆ.

ಅಭಿನಂದನೆ...


ಜೆಡಿಎಸ್‌ನ ಮೈಸೂರು ನಗರಾಧ್ಯಕ್ಷರಾಗಿ ನೇಮಕಗೊಂಡ ನಗರಪಾಲಿಕೆ ಮಾಜಿ ಸದಸ್ಯ ಎಸ್‌ಬಿಎಂ ಮಂಜು ಅವರನ್ನು ಭೈರವೇಶ್ವರ ಬಡಾವಣೆಯ ಮುಖಂಡರು ಅಭಿನಂದಿಸಿದರು. ಈ ವೇಳೆ ಮುಖಂಡರಾದ ದೇವೇಗೌಡ, ಬಸವರಾಜಣ್ಣ, ಅರುಣ್, ರಮೇಶ್, ಹನುಮಗೌಡ ಇನ್ನಿತರರಿದ್ದರು.

ದಲಿತರನ್ನ ಸಿಎಂ ಮಾಡಿ

ಮತ್ತು ಪಕ್ಷವು ಅವರನ್ನು ಮತ್ತೆ ನಾಮನಿರ್ದೇಶನ ಮಾಡಿದರೆ ಅವರು ರಾಷ್ಟ್ರ ರಾಜಕೀಯದಲ್ಲಿ ಮುಂದುವರಿಯುತ್ತಾರೆ. ಆದರೆ ಅವರು ಎಐಸಿಸಿ ಅಧ್ಯಕ್ಷರಾಗಿ ಉಳಿಯುತ್ತಾರೆಯೇ ಎಂದು ಕಾದು ನೋಡಬೇಕು ಎಂದು ಕಾಂಗ್ರೆಸ್ ಹಿರಿಯ ನಾಯಕರೊಬ್ಬರು ತಿಳಿಸಿದ್ದಾರೆ. ಹಿರಿಯ ದಲಿತ ನಾಯಕ ದಾಮೋದರಂ ಸಂಜೀವಯ್ಯ ಅವರು ಎಐಸಿಸಿ ಅಧ್ಯಕ್ಷರಾಗಿ ಉಳಿದುಕೊಂಡು ಆಂಧ್ರಪ್ರದೇಶದ ಎರಡನೇ ಮುಖ್ಯಮಂತ್ರಿಯಾದರು (1969–62ರ ನಡುವೆ). ಈಗ, ಖರ್ಗೆ ಅವರಿಗೆ ಆ ಸಾಧನೆ ಮಾಡಲು ಅವಕಾಶವಿದೆ ಎಂದು ನಾಯಕರು ಖರ್ಗೆ ಅವರಿಗೆ ಸೂಚಿಸಿದ್ದಾರೆ ಎನ್ನಲಾಗಿದೆ.

ಖರ್ಗೆ ಅವರನ್ನು ಮುಖ್ಯಮಂತ್ರಿಯಾಗಿ ಸ್ವಾಗತಿಸುತ್ತೇವೆ, ಇಲ್ಲದಿದ್ದರೆ ಅವರು ಇತಿಹಾಸ ರಚಿಸಲು ದಲಿತ ವ್ಯಕ್ತಿಯನ್ನು ಉನ್ನತ ಹುದ್ದೆಗೆ ಪರಿಗಣಿಸಬೇಕು. ಇಲ್ಲದಿದ್ದರೆ, ಕಾಂಗ್ರೆಸ್‌ನ ಆಡಳಿತದ ಚುಕ್ಕಾಣಿ ಹಿಡಿದಿದ್ದರೂ ಅವಕಾಶ ನೀಡಿದ್ದಕ್ಕಾಗಿ ಇತಿಹಾಸವು ಅವರನ್ನು ಶಪಿಸುತ್ತದೆ ಎಂದು ಹಿರಿಯ ನಾಯಕರೊಬ್ಬರು ಸುದ್ದಿ ಸಂಸ್ಥೆಗೆ ತಿಳಿಸಿದ್ದಾರೆ.

ಹುಬ್ಬಳ್ಳಿ–ಧಾರವಾಡ ಪೂರ್ವ ಶಾಸಕ ಅಬ್ಬಯ್ಯ ಪ್ರಸಾದ್ ಮತ್ತು ಬಂಗಾರಪೇಟೆ ಶಾಸಕ ಎಸ್.ಎನ್. ನಾರಾಯಣಸ್ವಾಮಿ ಸೇರಿದಂತೆ ದಲಿತ ಶಾಸಕರು, ಕೆಪಿಸಿಸಿ ಅಧ್ಯಕ್ಷರಾಗಿ ಎಂಟು ವರ್ಷಗಳ ಕಾಲ ಪಕ್ಷದ ಸಂಘಟನೆಗೆ ಕೊಡುಗೆ ನೀಡಿದ್ದರಿಂದ ಪರಮೇಶ್ವರ ಅವರೇ ಮುಖ್ಯಮಂತ್ರಿಯಾಗಬೇಕೆಂದು ಹೇಳಿದ್ದಾರೆ. ಸ್ವತಃ ದಲಿತ ನಾಯಕರಾದ ಪರಮೇಶ್ವರ ಅವರು ಮುಖ್ಯಮಂತ್ರಿಯಾಗುವ ಅವರ ಸಾಮರ್ಥ್ಯವನ್ನು ಯಾರೂ ಪ್ರಶ್ನಿಸಲು ಸಾಧ್ಯವಿಲ್ಲ ಎಂದು ಹೇಳಿದರು.

ಕುರಿ ಬಲಿ ಕೊಟ್ಟು ವಾಮಾಚಾರ!

ಪೊಲೀಸರ ವಿರುದ್ಧ ಕಿಡಿ: ಸೈಬರ್ ಪೊಲೀಸರ ನಡೆಗೆ ಆಕ್ರೋಶ ವ್ಯಕ್ತಪಡಿಸಿದ ಕೃಷ್ಣ, ನಾನು ಕೋರ್ಟ್‌ಗೆ ಹಾಜರಾಗಲು ಬಂದಾಗ ಸೈಬರ್ ಪೊಲೀಸರು ನನ್ನನ್ನು ವಶಕ್ಕೆ ಪಡೆದು ಕಿರುಕುಳ ನೀಡಿದ್ದಾರೆ. ನಾನು ವಿಚಾರಣೆ ಮುಗಿಸಿ ಬರುತ್ತೇನೆ ಎಂದರೂ ಕೇಳಲಿಲ್ಲ. ನನ್ನನ್ನು ಅಧಿಕೃತವಾಗಿ ಬಂಧಿಸದೇ ಇದ್ದರೂ, 'ಬಂಧಿಸಲಾಗಿದೆ' ಎಂದು ಪತ್ರಿಕಾ ಪ್ರಕಟಣೆ ಹೊರಡಿಸಿ ನನ್ನ ಘನತೆಗೆ ಧಕ್ಕೆ ತಂದಿದ್ದಾರೆ ಎಂದು ನ್ಯಾಯಾಧೀಶರ ಮುಂದೆ ದೂರಿದರು.

ಡಿ.ಬಿ.ನಟೇಶ್ ರಕ್ಷಣೆಗೆ ನಿಂತಿದೆಯೇ ಸರ್ಕಾರ: ಡಿ.ಬಿ. ನಟೇಶ್ ವಿರುದ್ಧದ ತನಿಖೆಯಲ್ಲಿ ಆಗುತ್ತಿರುವ ವಿಳಂಬದ ಬಗ್ಗೆ ನ್ಯಾಯಾಧೀಶರು ಪ್ರಾಸಿಕ್ಯೂಷನ್ ಅನ್ನು ತರಾಟೆಗೆ ತೆಗೆದುಕೊಂಡರು. ಪಿಸಿ ಕಾಯ್ದೆ 17ಎ ಪ್ರಕಾರ ನವೆಂಬರ್ ತಿಂಗಳಲ್ಲೇ ತನಿಖೆಗೆ ಅನುಮತಿ ಸಿಕ್ಕಿದ್ದರೂ ಈವರೆಗೆ ಯಾಕೆ ಕ್ರಮ ಕೈಗೊಂಡಿಲ್ಲ ಎಂದು ಪ್ರಶ್ನಿಸಿದರು. ಡಿ.ಬಿ. ನಟೇಶ್ ತನಿಖೆ ಯಾವ ಹಂತದಲ್ಲಿದೆ ಎಂಬ ಬಗ್ಗೆ ಸರಿಯಾದ ಮಾಹಿತಿ ನೀಡದ ಪ್ರಾಸಿಕ್ಯೂಷನ್ ಅಧಿಕಾರಿಗಳ ವಿರುದ್ಧ ನ್ಯಾಯಾಧೀಶರು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ನ್ಯಾಯಾಲಯದ ಸೂಚನೆ: ಸ್ನೇಹಮಯಿ ಕೃಷ್ಣ ಅವರ ವಾದವನ್ನು ಆಲಿಸಿದ ನ್ಯಾಯಾಧೀಶರು, ಲಂಚದ ಆಮಿಷದ ಬಗ್ಗೆ ಪ್ರತ್ಯೇಕ ದೂರು ನೀಡಲು ಸೂಚಿಸಿದರು. ಅಲ್ಲದೆ, ಬಿ–ರಿಪೋರ್ಟ್ ವಿಚಾರದಲ್ಲಿ ತೃಪ್ತಿ ಇಲ್ಲದಿದ್ದರೆ ಮೇಲ್ಮನವಿ ಸಲ್ಲಿಸಬಹುದು ಎಂದರು. ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿರುವ ನ್ಯಾಯಾಲಯವು, ಮುಂದಿನ ವಿಚಾರಣೆ ವೇಳೆ ವಿಶೇಷ ಸರ್ಕಾರಿ ಅಭಿಯೋಜಕರು ಖುದ್ದು ಹಾಜರಿರಬೇಕು ಎಂದು ತಾಕೀತು ಮಾಡಿ, ವಿಚಾರಣೆಯನ್ನು ಮಾ.3ಕ್ಕೆ ಮುಂದೂಡಿದೆ.

'ಜನತಾ ಬಜೆಟ್' ಮಂಡಿಸಲು ಮನವಿ



ಮೈಸೂರು,ಫೆ.28(ಜಿಎ)–ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ದಾಖಲೆ ಬಜೆಟ್‌ನಲ್ಲಿ ಕರ್ನಾಟಕದ ಸಮಗ್ರ ಅಭಿವೃದ್ಧಿ ಮತ್ತು ಶೋಷಿತ ವರ್ಗಗಳ ಕಲ್ಯಾಣಕ್ಕಾಗಿ 'ಜನತಾ ಬಜೆಟ್' ಮಂಡಿಸುವಂತೆ ಎಸ್‌ಡಿಪಿಐ ರಾಜ್ಯಾಧ್ಯಕ್ಷ ಅಬ್ದುಲ್ ಮಜೀದ್ ಆಗ್ರಹಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಈವರೆಗೂ ಶಿಕ್ಷಣಕ್ಕೆ ಬಜೆಟ್‌ನ ಅತಿ ಕಡಿಮೆ ಶೇಕಡಾಂಶ ನಿಗದಿಪಡಿಸಲಾಗುತ್ತಿದೆ. ರಾಷ್ಟ್ರದ ಮಟ್ಟದಲ್ಲಿ ಶೇ.17ರಷ್ಟಿದ್ದು, ಈ ಬಾರಿ ಅದು ಶೇ.20ರಷ್ಟು ಇರಲಿ. ಭೂಮಿ, ವಸತಿ ಹಕ್ಕು ನೀಡಬೇಕು, ಭೂಹೀನ ಎಸ್‌ಸಿ, ಎಸ್‌ಟಿ, ಒಬಿಸಿ ಮತ್ತು ಅಲ್ಪಸಂಖ್ಯಾತರಿಗೆ ವಸತಿ, ಭೂಮಿ ಹಂಚಿಕೆ ಮಾಡಬೇಕು, ಬೆಂಗಳೂರಿನ ಕೋಗಿಲು, ಥಣಿಸಂದ್ರದಲ್ಲಿ ಬುಲ್ಡೋಜರ್ ದಾಳಿಯಿಂದ ನಿರಾಶ್ರಿತರಾದವರಿಗೆ ಪರ್ಯಾಯ ಮನೆ ಕಲ್ಪಿಸಬೇಕು, ವಸತಿ ಯೋಜನೆ ವಿಸ್ತರಿಸುವ ಮೂಲಕ ಸಹಾಯಧನವನ್ನು ಈಗಿನ 5 ಲಕ್ಷದಿಂದ 7 ಲಕ್ಷಕ್ಕೆ ಏರಿಸಬೇಕು ಎಂದು ಕೋರಿದರು.

ಕಾರ್ಮಿಕ ಕಲ್ಯಾಣಕ್ಕಾಗಿ ಹೆಚ್ಚು ಅನುದಾನ ನೀಡಬೇಕು, ರಾಜ್ಯ ವಿಪತ್ತು ಪರಿಹಾರ ನಿಧಿ ದ್ವಿಗುಣ ಗೊಳಿಸಬೇಕು, ಯುವನಿಧಿ ಯೋಜನೆ ವಿಸ್ತರಿಸಬೇಕು, ಪ್ರಕೃತಿ ವಿಕೋಪಕ್ಕೆ ಉಂಟಾಗುವ ಬೆಳೆ ನಷ್ಟ ಹೆಕ್ಟೇರ್‌ಗೆ 50 ಸಾವಿರ, ಮನೆ ನಷ್ಟಕ್ಕೆ 5 ಲಕ್ಷ ರೂ. ಪರಿಹಾರ ನೀಡಬೇಕೆಂದು ಮನವಿ ಮಾಡಿದರು.

ಮೈಸೂರಿನ ಪರಂಪರೆ ಪ್ರಮುಖವಾಗಿ ನರಸಿಂಹರಾಜ ಕ್ಷೇತ್ರವೂ ಅಭಿವೃದ್ಧಿಯಲ್ಲಿ ಅತ್ಯಂತ ಹಿಂದೆ ಉಳಿದಿದ್ದು, ಸ್ಥಳೀಯ ಶಾಸಕರು ಅದರ ಬಗ್ಗೆ ತಲೆಕೆಡಿಸಿಕೊಳ್ಳುತ್ತಿಲ್ಲ. ರಾಜ್ಯದ ಎಲ್ಲಾ ವಿಧಾನಸಭಾ ಕ್ಷೇತ್ರದಲ್ಲಿ ಡಿಗ್ರಿ ಕಾಲೇಜುಗಳಿವೆ. ಆದರೆ, ಎನ್‌ಆರ್ ಕ್ಷೇತ್ರದಲ್ಲಿಲ್ಲ. ಇಲ್ಲಿ ಸ್ಥಳಕ್ಕೆ ಯಾವುದೇ ಕೊರತೆ ಇಲ್ಲ, ನಾವೇ ಸಿಎ ನಿವೇಶನವನ್ನು ಗುರುತಿಸುತ್ತೇವೆ. ಬಜೆಟ್‌ನಲ್ಲಿ ಕ್ಷೇತ್ರಕ್ಕೆ ಡಿಗ್ರಿ ಕಾಲೇಜು ಮಂಜೂರು ಮಾಡಬೇಕು ಎಂದು ಆಗ್ರಹಿಸಿದರು. ಗೋಷ್ಠಿಯಲ್ಲಿ ಜಿಲ್ಲಾಧ್ಯಕ್ಷ ರಫತ್‌ಖಾನ್, ಅಮ್ಜದ್ ಖಾನ್, ಎಸ್.ಸ್ವಾಮಿ, ಶಫಿ ಉಲ್ಲಾ ಇದ್ದರು.

ಡಾ.ಕೆ.ಬಿ.ಲಿಂಗರಾಜುಗೆ ಅಭಿನಂದನೆ...



ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವದಲ್ಲಿ ಗೌರವ ಡಾಕ್ಟರೇಟ್‌ಗೆ ಭಾಜನರಾದ ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಅಧ್ಯಕ್ಷ ಡಾ.ಕೆ.ಬಿ.ಲಿಂಗರಾಜು ಅವರನ್ನು ಕೆಂಗೇರಿಯ ಆರ್ಟ್ ಆಫ್ ಲಿವಿಂಗ್ ಇಂಟರ್‌ನ್ಯಾಷನಲ್ ಸೆಂಟರ್‌ನ ಶ್ರೀ ರವಿಶಂಕರ್ ಗುರೂಜಿ ಅಭಿನಂದಿಸಿದರು. ಈ ವೇಳೆ ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಗೌರವ ಕಾರ್ಯದರ್ಶಿ ಎ.ಕೆ.ಶಿವಾಜಿರಾವ್ ಇನ್ನಿತರರಿದ್ದರು.

ಮೀಸಲಾತಿ ಹೆಚ್ಚಿಸದೆ ಎಸ್‌ಸಿ, ಎಸ್‌ಟಿ ಸಮುದಾಯಗಳಿಗೆ ಕೇಂದ್ರ, ರಾಜ್ಯ ಸರ್ಕಾರದಿಂದ ಅನ್ಯಾಯ

● ಕಾಂಗ್ರೆಸ್ ಸೇರಿದಂತೆ ಎಲ್ಲಾ ಪಕ್ಷಗಳಿಂದ ವೋಟ್ ಬ್ಯಾಂಕ್‌ಗಳಾಗಿ ಸಮುದಾಯ ಬಳಕೆ ● ಮಾಜಿ ಸಂಸದ ವಿ.ಎಸ್.ಉಗ್ರಪ್ಪ ವಾಗ್ದಾಳಿ

ಮೈಸೂರು,ಫೆ.28(ಜಿಎ)–ಮೀಸಲಾತಿ ಹೆಚ್ಚಳ ಮಾಡದೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಎಸ್‌ಸಿ, ಎಸ್‌ಟಿ ಸಮುದಾಯಗಳಿಗೆ ಅನ್ಯಾಯ ಮಾಡುತ್ತಿವೆ ಎಂದು ಮಾಜಿ ಸಂಸದ ವಿ.ಎಸ್.ಉಗ್ರಪ್ಪ ವಾಗ್ದಾಳಿ ನಡೆಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಹೆಚ್ಚಳ ಮಾಡದೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಎಸ್‌ಸಿ, ಎಸ್‌ಟಿ ಸಮುದಾಯಗಳಿಗೆ ಅನ್ಯಾಯ ಮಾಡುತ್ತಿವೆ. ಇದು ಹೀಗೆ ಮುಂದುವರೆದರೆ ರಾಜ್ಯಾದ್ಯಂತ ಉಗ್ರ ಹೋರಾಟ ಮಾಡುವುದು ಅನಿವಾರ್ಯವಾಗಲಿದೆ ಎಂದು ಎಚ್ಚರಿಕೆ ನೀಡಿದರು.

ಸ್ವಾತಂತ್ರ್ಯ ಬಂದು 78 ವರ್ಷಗಳು ಕಳೆದರೂ ಎಸ್‌ಸಿ, ಎಸ್‌ಟಿಗಳಿಗೆ ಸಾಮಾಜಿಕ ನ್ಯಾಯ ಸಿಕ್ಕಿಲ್ಲ, ಅಧಿಕಾರಕ್ಕೆ ಬಂದ ಕಾಂಗ್ರೆಸ್, ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳು ಅನ್ಯಾಯ ಮಾಡುತ್ತಲೇ ಬಂದಿವೆ. ಜನ ಸಂಖ್ಯೆಗೆ ಅನುಗುಣವಾಗಿ ಎಸ್‌ಸಿ, ಎಸ್‌ಟಿಗಳಿಗೆ ಮೀಸಲಾತಿ ನೀಡಬೇಕು ಎಂದು ಬಾಬಾ ಸಾಹೇಬ್ ಅಂಬೇಡ್ಕರ್ ಹೇಳಿದ್ದರೂ ರಾಜಕೀಯ ಪಕ್ಷಗಳು ಈ ಎರಡೂ ಸಮುದಾಯಗಳಿಗೆ ಅನ್ಯಾಯ ಮಾಡುತ್ತಿದ್ದು, ವೋಟ್ ಬ್ಯಾಂಕ್ ಆಗಿ ಬಳಸಿಕೊಳ್ಳುತ್ತಿವೆ ಎಂದು ಕಿಡಿಕಾರಿದರು.

2022ರಲ್ಲಿ ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿಗಳಾಗಿದ್ದಾಗ ಎಸ್‌ಟಿ ಸಮುದಾಯಕ್ಕೆ ಶೇ.4 ಮತ್ತು ಎಸ್‌ಸಿ ಸಮುದಾಯಕ್ಕೆ ಶೇ.2 ಹೆಚ್ಚಳ ಮಾಡಿ ಶೇ.50ರಷ್ಟು ಇದ್ದ ಮೀಸಲಾತಿಯನ್ನು ಒಟ್ಟಾರೆ ಶೇ.56 ಕ್ಕೆ ಹೆಚ್ಚಳ ಮಾಡಿದರೂ ಸಾಂವಿಧಾನಿಕ ಸಂರಕ್ಷಣೆ ಕೊಡಿಸುವ ಯಾವ ಮಾರ್ಗಗಳನ್ನು ಅನುಸರಿಸಲಿಲ್ಲ ಎಂದು ಕಿಡಿಕಾರಿದರು.

ಅಂದು ಕೇಂದ್ರ ಮತ್ತು ರಾಜ್ಯದಲ್ಲಿ ಬಿಜೆಪಿ ಸರ್ಕಾರವೇ ಇದ್ದರೂ, ಶೇ.56 ಮೀಸಲಾತಿಯನ್ನು ಒಂಬತ್ತನೇ ಶೆಡ್ಯೂಲ್‌ಗೆ ಸೇರಿಸಿ, ಶೇ.56ರ ಮೀಸಲಾತಿಗೆ ಸಾಂವಿಧಾನಿಕ ಸಂರಕ್ಷಣೆ ದೊರಕಿಸುವ ಮೂಲಕ ನ್ಯಾಯಾಂಗ ವಿಚಾರಣೆಯಿಂದ ಈ ಕಾನೂನನ್ನು ಹೊರಗಿಡಲು ಬೇಕಾದ ಸಂಸದರ ಸಂಖ್ಯಾಬಲವಿದ್ದರೂ ಕೇಂದ್ರ ಬಿಜೆಪಿ ಸರ್ಕಾರವಾಗಲಿ, ರಾಜ್ಯ ಬಿಜೆಪಿಯಾಗಲಿ ಇದರ ಬಗ್ಗೆ ಮುತುವರ್ಜಿ ವಹಿಸಲಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ನಂತರ 2023ರಲ್ಲಿ ಅಧಿಕಾರಕ್ಕೆ ಬಂದ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಕೂಡ ಇದರ ಬಗ್ಗೆ ಮುತುವರ್ಜಿ ವಹಿಸಿ ಒಂಬತ್ತನೇ ಶೆಡ್ಯೂಲ್‌ಗೆ ಸೇರಿಸುವ ಪ್ರಯತ್ನ ಮಾಡಲಿಲ್ಲ. ಇದರಿಂದ ಎಸ್‌ಸಿ ಮತ್ತು ಎಸ್‌ಟಿ ಸಮುದಾಯಗಳು ಅನ್ಯಾಯಕ್ಕೆ ಒಳಗಾಗಿವೆ. ಇದರ ಬಗ್ಗೆ ದನಿಯೆತ್ತಬೇಕಿದ್ದ ಸಮುದಾಯಗಳ ಸಚಿವರು, ಶಾಸಕರುಗಳು ಮೌನವಹಿಸಿರುವುದು ಅತ್ಯಂತ ದುರದೃಷ್ಟಕರ.

> "ಶೇ.56 ಮೀಸಲಾತಿ ಪ್ರಕಾರ ರಾಜ್ಯ ಸರ್ಕಾರ ಹೊಸ ಹುದ್ದೆಗಳಿಗೆ ನೇಮಕಾತಿ ಮಾಡಬೇಕು. ಅದಕ್ಕೆ ಬೇಕಾದ ಕಾನೂನಾತ್ಮಕ ಕ್ರಮಗಳನ್ನು ಮೊದಲು ಕೈಗೊಳ್ಳಬೇಕು. ಅದನ್ನು ಬಿಟ್ಟು 2022ರ ಮೀಸಲಾತಿಯಂತೆ ಹುದ್ದೆಗಳಿಗೆ ನೇಮಕ ಮಾಡಿದರೆ ಅನ್ಯಾಯವಾಗಲಿದೆ. ರಾಜ್ಯದಲ್ಲಿ 2.74 ಲಕ್ಷ ಹುದ್ದೆಗಳು ಖಾಲಿ ಇವೆ. ರಾಜ್ಯ ಸರ್ಕಾರ 52 ಸಾವಿರ ಹುದ್ದೆಗಳನ್ನು ಹಳೆ ಮೀಸಲಾತಿಯನ್ನೂ ತುಂಬುವುದಾಗಿ ಹೇಳಿದೆ. ಇದರಿಂದ ಪರಿಶಿಷ್ಟ ಪಂಗಡದ 1600 ಮತ್ತು ಪರಿಶಿಷ್ಟ ಜಾತಿಯ 2 ಸಾವಿರ ಹುದ್ದೆಗಳಿಂದ ಪರಿಶಿಷ್ಟರು ವಂಚಿತವಾಗಲಿದ್ದಾರೆ. –ವಿ.ಎಸ್.ಉಗ್ರಪ್ಪ, ಮಾಜಿ ಸಂಸದ



ಅಧಿಕಾರ ಬೇಕಾದರೆ ದಲಿತರು ಎನ್ನುವ ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರು ಎಸ್‌ಸಿ, ಎಸ್‌ಟಿಗಳಿಗೆ ಆಗುತ್ತಿರುವ ಅನ್ಯಾಯದ ವಿರುದ್ಧ ಯಾಕೆ ಧ್ವನಿ ಎತ್ತುತ್ತಿಲ್ಲ. ಈ ಸಮುದಾಯದ ಜನ ಉಳಿಯಲಿಲ್ಲ ಎಂದರೆ ಸಾಮಾಜಿಕ ನ್ಯಾಯ ಯಕ್ಷ ಪ್ರಶ್ನೆ ಆಗುತ್ತದೆ ಎಂದು ಹೇಳಿದರು.

ಸಾಮಾಜಿಕ ನ್ಯಾಯದ ಪರ ಎನ್ನುವ ಸಿದ್ದರಾಮಯ್ಯ ಅವರು ತಕ್ಷಣ ಸರ್ವ ಪಕ್ಷ ಸಭೆ ಕರೆದು ಪ್ರಧಾನ ಮಂತ್ರಿಗಳ ಬಳಿಗೆ ನಿಯೋಗ ಕರೆದೊಯ್ದು ಶೇ.56 ಮೀಸಲಾತಿಯನ್ನು ಒಂಬತ್ತನೇ ಶೆಡ್ಯೂಲ್‌ಗೆ ಸೇರಿಸುವ ಪ್ರಯತ್ನ ಮಾಡಬೇಕು ಎಂದು ಒತ್ತಾಯಿಸಿದರು.

ರಾಜ್ಯದಿಂದ ಆಯ್ಕೆಯಾಗಿರುವ ಸಂಸದರು ಪ್ರಧಾನ ಮಂತ್ರಿಗಳಿಗೆ ಒತ್ತಡ ಹಾಕಿ ಶೇ.56 ಮೀಸಲಾತಿ ಒಂಬತ್ತನೇ ಶೆಡ್ಯೂಲ್‌ಗೆ ಸೇರಿಸಲು ಒತ್ತಡ ಹಾಕಬೇಕು. ಮೈಸೂರು ಸಂಸದ ಯದುವೀರ್, ಚಾಮರಾಜನಗರ ಸಂಸದ ಸುನೀಲ್ ಬೋಸ್ ಈ ಬಗ್ಗೆ ಹೆಚ್ಚು ಕಾಳಜಿವಹಿಸಬೇಕು, ಇಲ್ಲದಿದ್ದರೆ ಸಮುದಾಯ ಮುಂದಿನ ದಿನಗಳಲ್ಲಿ ತಕ್ಕ ಪಾಠ ಕಲಿಸಲಿದೆ ಎಂದು ಎಚ್ಚರಿಕೆ ನೀಡಿದರು.

ಎಸ್‌ಸಿ, ಎಸ್‌ಟಿ ಸಮುದಾಯದವರ ತಾಳ್ಮೆ ಪರೀಕ್ಷೆ ಮಾಡಬೇಡಿ. ಇಷ್ಟು ದಿನ ಮೂಗಿಗೆ ತುಪ್ಪ ಹಚ್ಚಿದ್ದು ಸಾಕು. ನಮ್ಮ ಹಕ್ಕಿಗಾಗಿ ರಾಜ್ಯವ್ಯಾಪಿ ಹೋರಾಟಕ್ಕೆ ಸಿದ್ಧವಾಗಬೇಕಾಗುತ್ತದೆ. ಇದಕ್ಕೆ ನರೇಂದ್ರ ಮೋದಿ ಮತ್ತು ಸಿದ್ದರಾಮಯ್ಯ ಅವಕಾಶ ನೀಡಬಾರದು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಅಖಿಲ ಕರ್ನಾಟಕ ವಾಲ್ಮೀಕಿ ಮಹಾಸಭಾ ರಾಜ್ಯಾಧ್ಯಕ್ಷ ನರಸಿಂಹಯ್ಯ, ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ರಾಮಚಂದ್ರು, ಹಿನಕಲ್ ಕೆಂಪನಾಯಕ, ಕೆ.ಸಣ್ಣಯ್ಯ ನಾಯಕ, ಜಿಲ್ಲಾ ನಾಯಕರ ಸಂಘದ ಅಧ್ಯಕ್ಷ ದ್ಯಾವಪ್ಪ ನಾಯಕ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಮಾ.4ಕ್ಕೆ ರೈತ ಮಹಿಳೆಯರಿಗೆ ತರಬೇತಿ

ಮೈಸೂರು: ನಾಗನಹಳ್ಳಿ ಜಿಲ್ಲಾ ಕೃಷಿ ತರಬೇತಿ ಕೇಂದ್ರದ ವತಿಯಿಂದ ಮಾ.4ರಂದು 'ದೇಸಿ ತಳಿಗಳ ಸಂರಕ್ಷಣೆ ಮತ್ತು ಉತ್ಪಾದನೆ' ವಿಷಯದ ಬಗ್ಗೆ ರೈತ, ರೈತ ಮಹಿಳೆಯರಿಗೆ ಒಂದು ದಿನದ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಆಸಕ್ತ ರೈತ, ರೈತ ಮಹಿಳೆಯರು ತಮ್ಮ ಹೆಸರನ್ನು ನಾಗನಹಳ್ಳಿ ಜಿಲ್ಲಾ ಕೃಷಿ ತರಬೇತಿ ಕೇಂದ್ರದ ಕೃಷಿ ಅಧಿಕಾರಿ ಮೊ.8277933116 ಗೆ ಕರೆ ಮಾಡಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬಹುದು. ರೈತರು ತರಬೇತಿಗೆ ಬರುವಾಗ FID ನಂಬರ್, ಆಧಾರ್ ಮತ್ತು ಬ್ಯಾಂಕ್ ಪಾಸ್ ಪುಸ್ತಕ ಜೆರಾಕ್ಸ್ ಪ್ರತಿಗಳನ್ನು ತಪ್ಪದೇ ತರುವುದು. ಮೈಸೂರು ಜಿಲ್ಲೆಯ 45 ರೈತ, ರೈತಮಹಿಳೆಯರಿಗೆ ಮಾತ್ರ ಅವಕಾಶವಿದ್ದು, ಮೊದಲು ನೋಂದಣಿ ಮಾಡಿದವರಿಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಾ.4ರಿಂದ ಸುದರ್ಶನ ಕ್ರಿಯೆ ಶಿಬಿರ

ಮೈಸೂರು,ಫೆ.28–ಶ್ರೀ ಶ್ರೀ ರವಿಶಂಕರ್ ಗುರೂಜಿಯವರ ಆರ್ಟ್ ಆಫ್ ಲಿವಿಂಗ್ ವತಿಯಿಂದ ಮಾ.4ರಿಂದ 8ರವರೆಗೆ ಆರ್ಟ್ ಆಫ್ ಲಿವಿಂಗ್ ಆಶ್ರಮದಲ್ಲಿ ಆರೋಗ್ಯಕರ ಜೀವನ, ಧ್ಯಾನ, ಯೋಗ, ಪ್ರಾಣಾಯಾಮ, ಸುದರ್ಶನ ಕ್ರಿಯೆಯನ್ನು ಕಲಿಸುವ ಶಿಬಿರವನ್ನು ಏರ್ಪಡಿಸಲಾಗಿದೆ. ಹೆಚ್ಚಿನ ಮಾಹಿತಿಗೆ 9480476825, 9483589825 ಸಂಪರ್ಕಿಸಬಹುದು.

ಮಾ.14ರಿಂದ ಮೈಸೂರಲ್ಲಿ 'ವಿಶನ್ ಮೈಸೂರು–2050' ವಿಚಾರ ಸಂಕಿರಣ

ಮೈಸೂರು,ಫೆ.28(ಜಿಎ)–ಮೈಸೂರಿನ ಎಸ್‌ಡಿಎಂಐಎಂಡಿ ಕಾಲೇಜಿನಲ್ಲಿ ಮಾ.14, 15 ಮತ್ತು 16ರಂದು ಮೈಸೂರು ನಗರದ ಮುಂದಿನ 25 ವರ್ಷದಲ್ಲಿ ಹೇಗಿರಬೇಕು ಎಂಬುದರ ಬಗ್ಗೆ ಚರ್ಚಿಸಲು 'ವಿಶನ್ ಮೈಸೂರು–2050' ವಿಶೇಷ ವಿಚಾರ ಸಂಕಿರಣ ಆಯೋಜಿಸಲಾಗಿದೆ ಎಂದು ಅಧ್ಯಾಪಕ ಡಾ.ಸುನಿಲ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು ಎಂಬುದು ಕೇವಲ ಸಂಸ್ಕೃತಿ, ಪರಂಪರೆಗಳ ನಗರ ಮಾತ್ರವೇ ಅಲ್ಲ. ಇದು ಅವಕಾಶಗಳು, ಮೌಲ್ಯಗಳು ಹಾಗೂ ಮಹತ್ವಾಕಾಂಕ್ಷೆಯಿಂದ ರೂಪುಗೊಂಡ ನಗರವೂ ಆಗಿದೆ. ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಸಂರಕ್ಷಿಸುವುದರೊಡನೆ ಸುಸ್ಥಿರ ಹಾಗೂ ಎಲ್ಲರನ್ನೂ ಒಳಗೊಳ್ಳುವ ಅಭಿವೃದ್ಧಿ ಯೋಜಿಸುವುದು ಇಂದಿನ ಅಗತ್ಯವಾಗಿದೆ. ಈ ಹಿನ್ನೆಲೆಯಲ್ಲಿ ಮೈಸೂರು ವಿಶನ್–2050 ಕಾರ್ಯಕ್ರಮ ಆಯೋಜಿಸಲಾಗಿದೆ ಎಂದರು.

ಮಾ.14ರಂದು ಬೆಳಗ್ಗೆ 9ರಿಂದ ಸಂಜೆ 5, 15ರಂದು ಬೆಳಗ್ಗೆ 9ರಿಂದ ಮಧ್ಯಾಹ್ನ 1 ಹಾಗೂ ಮಾ.16ರಂದು ಸಂಜೆ 4ರಿಂದ 6ರವರೆಗೆ ಕಾರ್ಯಕ್ರಮ ನಡೆಯಲಿದೆ. ಈ ವೇಳೆ ನಗರದ ಶ್ರೀಸಾಮಾನ್ಯರು, ವಿದ್ಯಾರ್ಥಿಗಳು, ವಿವಿಧ ಸಂಘ ಸಂಸ್ಥೆಗಳ ಪ್ರಮುಖರು ಚರ್ಚೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಮಾಹಿತಿಗಾಗಿ 984574 3337, 8277348958 ಸಂಪರ್ಕಿಸಿ ಎಂದರು. ಗೋಷ್ಠಿಯಲ್ಲಿ ಶ್ರೀಗೌರಿ, ಬದ್ರಿನಾಥ್, ಎಂ.ಎಸ್.ಶ್ರೀವತ್ಸ ಆರ್.ತೇಜಸ್ ಇದ್ದರು.

'ಗೃಹಲಕ್ಷ್ಮಿ' ಯೋಜನೆಯಲ್ಲಿ 52 ಸಾವಿರ ಪಡೆದ ಗೃಹಿಣಿ!



ದಿನೇಶ್ ಗೂಳಿಗೌಡ

ಮೈಸೂರು, ಫೆ.28(ಎಂಕೆ)– ರಾಜ್ಯ ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳು ಯಶಸ್ವಿಯಾಗಿ ಸಾಗುತ್ತಿದ್ದು, 'ಗೃಹಲಕ್ಷ್ಮಿ' ಯೋಜನೆಯ 26ನೇ ಕಂತಿನ 2 ಸಾವಿರ ರೂ. ಫಲಾನುಭವಿಗಳಿಗೆ ನೇರವಾಗಿ ಜಮೆಯಾಗಿದ್ದು ಈ ಮೂಲಕ ಒಬ್ಬ ಮಹಿಳೆಗೆ ಇದುವರೆಗೆ 52 ಸಾವಿರ ರೂ. ಜಮೆ ಮಾಡಿದಂತಾಗಿದೆ ಎಂದು ವಿಧಾನಪರಿಷತ್ ಸದಸ್ಯ ಹಾಗೂ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಉಪಾಧ್ಯಕ್ಷ ದಿನೇಶ್ ಗೂಳಿಗೌಡ ತಿಳಿಸಿದ್ದಾರೆ.

ಐದು ಗ್ಯಾರಂಟಿ ಯೋಜನೆಗಳಿಗೆ 1.20 ಲಕ್ಷ ಕೋಟಿ ರೂ. ವೆಚ್ಚ ಮಾಡಲಾಗಿದ್ದು, 'ಗೃಹಲಕ್ಷ್ಮಿ' ಯೋಜನೆಗೆ 62 ಸಾವಿರ ಕೋಟಿ ಅನುದಾನ ನೀಡಲಾಗಿದೆ. ಶಕ್ತಿ ಯೋಜನೆಯಡಿ 679 ಕೋಟಿಗೂ ಹೆಚ್ಚು ಟಿಕೆಟ್ ವಿತರಣೆಯಾಗಿದ್ದು, ಅನ್ನಭಾಗ್ಯ ಯೋಜನೆಯಡಿ 16 ಸಾವಿರ ಕೋಟಿ ರೂ.ವೆಚ್ಚ ಮಾಡಲಾಗಿದೆ. ಹಾಗೆಯೇ ಗೃಹಜ್ಯೋತಿ ವಿದ್ಯುತ್ ಯೋಜನೆಯಿಂದ 1.65 ಕೋಟಿ ಮನೆಗಳು ಉಚಿತ ವಿದ್ಯುತ್ ಪಡೆಯುತ್ತಿದ್ದು, ಯುವನಿಧಿ ಮೂಲಕ 3 ಲಕ್ಷಕ್ಕೂ ಅಧಿಕ ಪದವೀಧರರಿಗೆ ಆರ್ಥಿಕ ನೆರವು ನೀಡಲಾಗಿದೆ ಎಂದು ತಿಳಿಸಿದ್ದಾರೆ.

ಇದರ ನಡುವೆ ಗ್ಯಾರಂಟಿ ಯೋಜನೆಗಳು ನಿಲ್ಲುತ್ತವೆ. ಕಡಿತಗೊಳಿಸಲಾಗುತ್ತದೆ ಎಂಬಿತ್ಯಾದಿ ಮಾತುಗಳನ್ನಾಡುತ್ತಿರುವ ವಿರೋಧ ಪಕ್ಷಗಳ ಅಪಪ್ರಚಾರಕ್ಕೆ ರಾಜ್ಯದ ಜನತೆ ಕಿವಿಗೊಡಬಾರದು. ಗ್ಯಾರಂಟಿ ಯೋಜನೆಗಳು ಕೇವಲ ಹಣದ ಸಹಾಯವಲ್ಲ. ಗೌರವದ ಭರವಸೆಯಾಗಿದೆ. ಅಲ್ಲದೆ ಯಾವುದೇ ಕಾರಣಕ್ಕೂ ನಿಲ್ಲುವುದಿಲ್ಲ ಎಂದು ಭರವಸೆ ನೀಡಿದ್ದಾರೆ.

'ಗ್ರೇಟರ್ ಮೈಸೂರಿಗೆ ಸುಸ್ಥಿರ ಅಭಿವೃದ್ಧಿ ದೃಷ್ಟಿಕೋನ' ಕುರಿತು ಮಾ.6ರಂದು ಮೈಸೂರಲ್ಲಿ ವಿಚಾರ ಸಂಕಿರಣ

ಮೈಸೂರು,ಫೆ.28(ಜಿಎ)–ಬೆಂಗಳೂರಿನ ಚಾಣಕ್ಯ ವಿವಿ ಸುಸ್ಥಿರತಾ ಕೇಂದ್ರ, ಭಾರತೀಯ ವಾಣಿಜ್ಯ ಮತ್ತು ಕೈಗಾರಿಕಾ ಒಕ್ಕೂಟ ಹಾಗೂ ಎನ್‌ಐಇ ಕಾಲೇಜಿನ ಸಂಯುಕ್ತಾಶ್ರಯದಲ್ಲಿ ಮಾ.6ರಂದು ಬೆಳಗ್ಗೆ 9ರಿಂದ ಸಂಜೆ 5ರವರೆಗೆ ಎನ್‌ಐಇ ವಜ್ರ ಮಹೋತ್ಸವ ಸಭಾಂಗಣದಲ್ಲಿ 'ಗ್ರೇಟರ್ ಮೈಸೂರಿಗೆ ಸುಸ್ಥಿರ ಅಭಿವೃದ್ಧಿ ದೃಷ್ಟಿಕೋನ' ಕುರಿತು ಒಂದು ದಿನದ ವಿಚಾರ ಸಂಕಿರಣ ಆಯೋಜಿಸಲಾಗಿದೆ ಎಂದು ವಿಚಾರ ಸಂಕಿರಣ ಸಂಚಾಲಕ ಡಾ.ಎಸ್.ಸಂಜಿತ್ ತಿಳಿಸಿದರು.



ಸುದ್ದಿಗೋಷ್ಠಿಯಲ್ಲಿ ನಟ ಪ್ರಕಾಶ್ ಬೆಳವಾಡಿ ಮಾತನಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ತ್ವರಿತ ವಿಸ್ತರಣೆ, ಮೂಲಸೌಕರ್ಯ ಬೇಡಿಕೆ, ಪರಿಸರ ಸವಾಲು ತಂತ್ರಗಳು, ಸ್ಮಾರ್ಟ್ ಮೊಬಿಲಿಟಿ ಪರಿಹಾರ, ಜಲ ಸಂಪನ್ಮೂಲ ನಿರ್ವಹಣೆ, ಪರಿಸರ ಸಂರಕ್ಷಣೆ ಮೊದಲಾದ ವಿಷಯಗಳಲ್ಲಿ ಬೆಳಕು ಚೆಲ್ಲುವ ಉದ್ದೇಶ ವಿಚಾರ ಸಂಕಿರಣದ್ದಾಗಿದೆ. ಇಲ್ಲಿ ಚರ್ಚಿಸಿ ಬಂದ ಫಲಶ್ರುತಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗುವುದು ಎಂದರು.

ವಿಚಾರ ಸಂಕಿರಣದ ಉದ್ಘಾಟನ ಕಾರ್ಯಕ್ರಮದಲ್ಲಿ ಮೈಸೂರು ಜಿಲ್ಲಾಧಿಕಾರಿ ಲಕ್ಷ್ಮಿಕಾಂತ ರೆಡ್ಡಿ, ಎನ್‌ಐಇ ಸಂಸ್ಥೆ ಅಧ್ಯಕ್ಷ ಡಾ.ಎಂ.ಎಸ್.ರಂಗನಾಥ್, ನಟ, ಚಿಂತಕರೂ ಆದ ಪ್ರಕಾಶ್ ಬೆಳವಾಡಿ, ಕರ್ನಾಟಕ ರಾಜ್ಯ ಮಂಡಳಿ ಮುಖ್ಯಸ್ಥೆ ಶಾಜು ಮಂಗಲಂ, ಟೈಟಾನ್ ವಾಲ್ವ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಆದಿತ್ಯ ಎಂ.ಗೋಕರ್ಣ, ಕಾಲೇಜಿನ ಪ್ರಾಂಶುಪಾಲ ಡಾ.ಬಿ.ಎಸ್.ನಾಗೇಂದ್ರ ಪರಾಶರ್ ಭಾಗವಹಿಸಲಿದ್ದಾರೆ ಎಂದರು.

ಪ್ರಮುಖ ಭಾಷಣಕಾರರಾಗಿ ಇಸ್ರೋ ಮಾಜಿ ವಿಜ್ಞಾನಿ ಪಿ.ಜಿ.ದಿವಾಕರ್, ನಟ ಪ್ರಕಾಶ್ ಬೆಳವಾಡಿ, ಆಸ್ಟ್ರಿಕ್ಸ್.ಎಐನ ಡಾ.ಚಿನ್ಮಯ್ ಹೆಗ್ಡೆ, ಕಾಗ್ನೋಲ್ಯಾಬ್ಸ್ ಸಿಸ್ಟಮ್ಸ್‌ನ ಪ್ರಭಾತ್ ಯಾದವ್, ಎನ್‌ಐಇ ಸಂಸ್ಥೆ ಪ್ರೊ.ಶ್ಯಾಮ್ ಸುಂದರ್ ಭಾಗವಹಿಸಲಿದ್ದಾರೆ. ಪ್ಯಾನಲಿಸ್ಟ್‌ನಲ್ಲಿ ಸಂಸದ ಯದುವೀರ್ ಒಡೆಯರ್, ನಗರಪಾಲಿಕೆ ಆಯುಕ್ತ ಶೇಕ್ ತನ್ವೀರ್ ಆಸಿಫ್, ಎಂಡಿಎ ಆಯುಕ್ತ ರಕ್ಷಿತ್, ನಗರ ಯೋಜಕ ವಿ.ಎನ್.ಪ್ರಸಾದ್, ಶಾರದಾ ವಿಲಾಸ ಕಾಲೇಜಿನ ಪ್ರಾಂಶುಪಾಲ ಡಾ.ಮಹೇಶ್, ಎನ್‌ಐಇ ಮಾಜಿ ಪ್ರಾಂಶುಪಾಲ ಡಾ.ಕೆ.ಸಿ.ಮಂಜುನಾಥ್ ಇರಲಿದ್ದಾರೆ ಎಂದು ತಿಳಿಸಿದರು.

ನಟ, ನಿರ್ದೇಶಕ ಪ್ರಕಾಶ್ ಬೆಳವಾಡಿ ಮಾತನಾಡಿ, ಸರ್ಕಾರ ಕೊಠಡಿಯಲ್ಲಿ ಕುಳಿತು ದೊಡ್ಡ ತೀರ್ಮಾನ ಕೈಗೊಳ್ಳುವುದಲ್ಲ, ಬದಲಾಗಿ ಮೈಸೂರು ಮುಂದಿನ ಪೀಳಿಗೆಗೂ ವಾಸಯೋಗ್ಯವಾಗಿರುವಂತೆ ನೋಡಿಕೊಳ್ಳುವ ನಿಟ್ಟಿನಲ್ಲಿ ಹಾಗೂ ಮೈಸೂರು ಸಹಾ ಈಗಿನ ಬೆಂಗಳೂರಿನಂತೆ ಸಮಸ್ಯಾತ್ಮಕವಾಗದಂತೆ ಇರುವ ನಿಟ್ಟಿನಲ್ಲಿ ಈ ರೀತಿಯ ವಿಚಾರ ಸಂಕಿರಣಗಳು ಅಗತ್ಯ ಎಂದರು.

ಮೈಸೂರಿನ ಮಣಿಪಾಲ್ ಆಸ್ಪತ್ರೆ ಜಂಕ್ಷನ್ ಬಳಿ ಫ್ಲೈಓವರ್ ನಿರ್ಮಿಸಲಾಗುತ್ತಿದೆ. ಇದನ್ನು ವಿರೋಧಿಸುವ ಅಗತ್ಯವಿಲ್ಲ. ಆದರೆ ಇದೇ ಫ್ಲೈಓವರ್ ಮೈಸೂರು ಅರಮನೆ ವರೆಗೂ ವಿಸ್ತರಿಸಲಾಗುತ್ತದೆ ಎಂದಾಗ ಆಕ್ಷೇಪಿಸಬೇಕು. ಈ ರೀತಿಯಲ್ಲಿ ನಗರದ ಪ್ರಗತಿ ಸಾಗಬೇಕು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಡಾ.ಬಾಲಾಜಿ, ಪ್ರೊ.ಸದಾಶಿವಮೂರ್ತಿ ಉಪಸ್ಥಿತರಿದ್ದರು.

ಕ್ರೀಡಾಂಗಣಕ್ಕೆ ಕೆಎಸ್‌ಐಸಿ ಜಾಗ ಹಸ್ತಾಂತರ ಕೈ ಬಿಡದಿದ್ದರೆ ಹೋರಾಟ



ಸ್ವಾತಂತ್ರ್ಯ ಹೋರಾಟಗಾರರ ಸಂಘ ಎಚ್ಚರಿಕೆ

ಮೈಸೂರು,ಫೆ.28(ಜಿಎ)–ತಿ.ನರಸೀಪುರದ ಕೆಎಸ್‌ಐಸಿ ಜಾಗದಲ್ಲಿ ಸರ್ಕಾರ ಕ್ರೀಡಾಂಗಣದ ನಿರ್ಮಾಣದ ಯೋಜನೆಗೆ ನೀಡಿರುವ ಭೂಮಿ ಹಸ್ತಾಂತರ ಪ್ರಕ್ರಿಯೆಯನ್ನು ಹಿಂಪಡೆಯಬೇಕು. ಇಲ್ಲವಾದಲ್ಲಿ ಕಾನೂನು ಕ್ರಮ ಹೋರಾಟಕ್ಕೆ ಮುಂದಾಗುತ್ತೇವೆ ಎಂದು ಮೈಸೂರು ಜಿಲ್ಲೆ ಮತ್ತು ನಗರ ಸ್ವಾತಂತ್ರ್ಯ ಹೋರಾಟಗಾರರ ಸಂಘ ಎಚ್ಚರಿಕೆ ನೀಡಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಕಾರ್ಯಾಧ್ಯಕ್ಷ ಎ.ಯೋಗಾನಂದ ಈ ವಿಷಯ ತಿಳಿಸಿ, ತಿ.ನರಸೀಪುರದ ತಾಲೂಕಿನ ಭೈರಾಪುರ ಗ್ರಾಮದಲ್ಲಿರುವ ಕೆಎಸ್‌ಐಸಿ ಸ್ಥಳದಲ್ಲಿ ನೂಲು ಘಟಕವಿದ್ದು, ಅದನ್ನೇ ನಂಬಿ ನೂರಾರು ಕಾರ್ಮಿಕರ, ರೈತ ಕುಟುಂಬಗಳು ಬದುಕು ಕಟ್ಟಿಕೊಂಡಿವೆ. ಕ್ರೀಡಾಂಗಣದ ನಿರ್ಮಾಣದ ಯೋಜನೆಯಿಂದಾಗಿ ಕಾರ್ಮಿಕರು, ರೈತರು ಸಮಸ್ಯೆ ಎದುರಿಸುವಂತಾಗುತ್ತದೆ ಎಂದರು.

113 ವರ್ಷಗಳಿಂದ ಅತ್ಯುತ್ತಮ ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಯ ಘಟಕದಿಂದ ಸರ್ಕಾರಕ್ಕೆ ಸಾಕಷ್ಟು ಆದಾಯ ಬರುತ್ತಿದೆ. ಅಲ್ಲದೇ ಇಲ್ಲಿ ತಯಾರಾಗುವ ಮೈಸೂರು ರೇಷ್ಮೆ ಸೀರೆಗಳಿಗೆ ದೇಶದಲ್ಲಿ ಹಾಗೂ ವಿಶ್ವದಾದ್ಯಂತ ಅಪಾರ ಬೇಡಿಕೆಯನ್ನು ಹೊಂದಿದ್ದು, ತನ್ನದೇ ಆದ ಪಾರಂಪರಿಕವಾದ ಮನ್ನಣೆಯನ್ನು ಗಳಿಸಿದ್ದು, ಆ ಪಾರಂಪರಿಕತೆಗೆ ಪೆಟ್ಟು ಬೀಳಲಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಕೆಎಸ್‌ಐಸಿ ಜಾಗದ 6.8 ಎಕರೆ ಭೂಮಿಯಲ್ಲಿ ಕ್ರೀಡಾಂಗಣ ನಿರ್ಮಾಣ ಮಾಡಲು ಮುಂದಾಗುತಿದ್ದು, ಕಾರ್ಮಿಕರಿಗೆ, ರೈತರಿಗೆ, ಪರಿಸರಕ್ಕೆ, ಪ್ರಾಣಿ ಸಂಕುಲಕ್ಕೆ ಹಾನಿಯಾಗಲಿದೆ. ಅಲ್ಲದೇ ಆರ್ಥಿಕವಾಗಿ ಹೊಡೆತ ಬೀಳಲಿದೆ. ಕೆಲಸ ನಿರ್ವಹಣೆಗೆ, ತ್ಯಾಜ್ಯ ವಿಲೇವಾರಿ ಸಂಬಂಧಿಸಿದಂತೆ ಸಾಕಷ್ಟು ತೊಂದರೆಯನ್ನು ಅನುಭವಿಸುವಂತಾಗುತ್ತದೆ. ಕೂಡಲೇ ಸರ್ಕಾರ ಈ ನಿರ್ಧಾರವನ್ನು ಕೈಬಿಟ್ಟು, ಯೋಜನೆಯನ್ನು ಹಿಂಪಡೆದು ಸೂಕ್ತ ಸ್ಥಳವನ್ನು ಗುರುತಿಸಿ ಯೋಜನೆಯನ್ನು ರೂಪಿಸಬೇಕು. ಒಂದು ವೇಳೆ ಕೆಎಸ್‌ಐಸಿ ಜಾಗದಲ್ಲಿ ನಿರ್ಮಾಣದ ಕಾರ್ಯವನ್ನು ಕೈಬಿಡದಿದ್ದರೆ, ಕಾನೂನು ಹೋರಾಟಕ್ಕೆ ಮುಂದಾಗುತ್ತೇವೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ರವಿ, ಶ್ರೀಧರ್, ಗಿರಿಜಾ, ನಾಗಲಕ್ಷ್ಮಿ ಉಪಸ್ಥಿತರಿದ್ದರು.

ಊಟ, ತಿಂಡಿಗೂ ತೊಂದರೆಯಾಗಿದೆ..!

ದುಬೈ ವಿಮಾನ ನಿಲ್ದಾಣದಲ್ಲಿ ಸಿಲುಕಿದ ಭೋಜೇಗೌಡ



ಚಿಕ್ಕಮಗಳೂರು: ದುಬೈ ವಿಮಾನ ನಿಲ್ದಾಣದಲ್ಲಿ ವಿಧಾನ ಪರಿಷತ್ ಸದಸ್ಯ ಎಸ್.ಎಲ್. ಭೋಜೇಗೌಡ ಸಿಲುಕಿದ್ದಾರೆ. ದುಬೈ ವಿಮಾನ ನಿಲ್ದಾಣದಿಂದ ದೂರವಾಣಿಯಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ನಾನು ಜೊಹಾನ್ಸ್ ಬರ್ಗ್‌ನಿಂದ ದುಬೈ ಮೂಲಕ ಭಾರತಕ್ಕೆ ಬರಬೇಕಿತ್ತು ದುಬೈನಲ್ಲಿ ಎಲ್ಲಾ ವಿಮಾನಗಳ ಹಾರಾಟ ಸ್ಥಗಿತಗೊಂಡಿದೆ. ವಿಮಾನದಲ್ಲಿ ಕುಳಿತಿದ್ದ ನಮ್ಮನ್ನು ಕೆಳಗೆ ಇಳಿಸಿದ್ದಾರೆ. ಮುಂದೆ ಏನು ಎಂಬುದನ್ನು ಯಾರೂ ಹೇಳುತ್ತಿಲ್ಲ ಎಂದರು.

ಇಲ್ಲಿರುವ ಎಲ್ಲರೂ ಆತಂಕದಲ್ಲಿದ್ದಾರೆ. ಊಟ–ತಿಂಡಿಗೂ ತೊಂದರೆಯಾಗಿದೆ. ಮೊಬೈಲ್ ದೂರವಾಣಿಯಲ್ಲಿ ಬ್ಯಾಟರಿ ಕೂಡ ಕಡಿಮೆಯಾಗಿದೆ. ವಿಮಾನ ನಿಲ್ದಾಣದಲ್ಲಿ ಜನ ಹೆಚ್ಚಾಗಿರುವುದರಿಂದ ಚಾರ್ಜ್ ಮಾಡಿಕೊಳ್ಳುವುದು ಕೂಡ ಕಷ್ಟವಿದೆ. ಏನು ಮಾಡಬೇಕು ಎಂಬುದನ್ನು ಯಾರೂ ಹೇಳುತ್ತಿಲ್ಲ ಎಂದು ಹೇಳಿದರು.

ವೀಸಾ ಇದ್ದವರು ಮಾತ್ರ ವಿಮಾನ ನಿಲ್ದಾಣದಿಂದ ಆಚೆ ಹೋಗಲು ಅವಕಾಶ ಇದೆ. ನನಗೆ ಅಮೆರಿಕ ವೀಸಾ ಇದೆ. ಆದರೆ, ಆಚೆ ಹೋದರೆ ಎಷ್ಟು ಸುರಕ್ಷಿತ ಎನ್ನುವುದು ಕೂಡ ಮುಖ್ಯ. ಆದ್ದರಿಂದ ಪತ್ನಿ ಜತೆಗೆ ಇಲ್ಲೇ ಇದ್ದೇನೆ. ಸದ್ಯಕ್ಕೆ ಯಾವುದೇ ತೊಂದರೆ ಇಲ್ಲ. ಮುಂದೇನು ಎಂಬ ಆತಂಕವಿದೆ ಎಂದರು.

ಲಂಚ ಸ್ವೀಕಾರ; ಮೈಸೂರು ಡಿಡಿಪಿಐ ಕಚೇರಿ ಎಫ್‌ಡಿಎಗೆ 4 ವರ್ಷ ಕಠಿಣ ಶಿಕ್ಷೆ

ಮೈಸೂರು ಜಿಲ್ಲಾ 3ನೇ ಅಧಿಕ ಸತ್ರ, ವಿಶೇಷ ಕೋರ್ಟ್ ತೀರ್ಪು

ಮೈಸೂರು, ಫೆ.28(ಬಿಎಲ್‌ಯು)– ಲಂಚ ಸ್ವೀಕರಿಸಿದ ಮೈಸೂರಿನ ಡಿಡಿಪಿಐ ಕಚೇರಿ ಎಫ್‌ಡಿಎಗೆ ಮೈಸೂರು ಜಿಲ್ಲಾ 3ನೇ ಅಧಿಕ ಸತ್ರ ಹಾಗೂ ವಿಶೇಷ ನ್ಯಾಯಾಲಯದ 4 ವರ್ಷಗಳ ಕಠಿಣ ಶಿಕ್ಷೆ ವಿಧಿಸಿದೆ.

ಮೈಸೂರಿನ ಡಿಡಿಪಿಐ ಕಚೇರಿಯ ಎಫ್ ಡಿಎ ಕೆ.ಕೆಂಪೇಗೌಡ ಶಿಕ್ಷೆಗೊಳಗಾದವರು. ಲಂಚ ಸ್ವೀಕರಿಸುವ ಸಂದರ್ಭದಲ್ಲಿ ಕೆಂಪೇಗೌಡ ಎಸಿಬಿ ಬಲೆಗೆ ಸಿಕ್ಕಿ ಬಿದ್ದಿದ್ದರು. ಈ ಸಂಬಂಧ ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ– 1988ರ ಅಡಿ ಜೂನ್ 18, 2018ರಂದು ಎಸಿಬಿ ಪೊಲೀಸರು ಪ್ರಕರಣ ದಾಖಲಿಸಿದ್ದರು.


ಈ ಸಂಬಂಧ ವಿಚಾರಣೆ ನಡೆಸಿದ ಮೈಸೂರು ಜಿಲ್ಲಾ 3ನೇ ಅಧಿಕ ಸತ್ರ ಹಾಗೂ ವಿಶೇಷ ನ್ಯಾಯಾಲಯದ ನ್ಯಾಯಾಧೀಶರಾದ ಗುರುರಾಜ್ ಸೋಮಕ್ಕಳವರ್ ಅವರು ಇಂದು ಶಿಕ್ಷೆ ವಿಧಿಸಿ ತೀರ್ಪು ನೀಡಿದ್ದಾರೆ.

ಲಂಚ ಸ್ವೀಕರಿಸಿದ ಕೆಂಪೇಗೌಡ ಅವರ ಆರೋಪ ಸಾಬೀತಾದ ಹಿನ್ನೆಲೆ 4 ವರ್ಷ ಕಠಿಣ ಕಾರಾಗೃಹ ವಾಸ ಹಾಗೂ 10 ಸಾವಿರ ದಂಡ ಪಾವತಿ ಮಾಡಬೇಕು. ಒಂದು ವೇಳೆ ದಂಡ ಪಾವತಿ ಮಾಡದಿದ್ದರೆ 6 ತಿಂಗಳ ಸಾದಾ ಕಾರಾಗೃಹ ವಾಸ ಅನುಭವಿಸಬೇಕು ಎಂದು ತೀರ್ಪು ನೀಡಿದೆ.

ಡಿವೈಎಸ್ಪಿ ಉಮೇಶ್ ಜಿ. ಸೇಠ್ ಅವರು ಪ್ರಕರಣ ದಾಖಲಿಸಿದ್ದರು. ಪೊಲೀಸ್ ಇನ್ಸ್‌ಪೆಕ್ಟರ್ ಹೆಚ್.ಎನ್. ವಿನಯ ಅವರು ತನಿಖೆ ನಡೆಸಿದ್ದರು. ಪೊಲೀಸ್ ಇನ್ಸ್‌ಪೆಕ್ಟರ್ ಶೇಖರ್ ಅವರು ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು. ವಿಶೇಷ ಅಭಿಯೋಜಕರಾದ ಕಲಿಯಂಡ ಮುತ್ತಮ್ಮ ಅವರು ಸರ್ಕಾರದ ಪರ ವಾದ ಮಂಡಿಸಿದ್ದರು. ಈ ತೀರ್ಪಿನ ಬಗ್ಗೆ ಮೈಸೂರು ಲೋಕಾಯುಕ್ತ ಎಸ್ಪಿ ಟಿ.ಜೆ.ಉದೇಶ್ ಅವರು ಮಾಹಿತಿ ನೀಡಿದ್ದಾರೆ.

ದೇಶ – ವಿದೇಶ

ಆಂಧ್ರದ ಪಟಾಕಿ ಕಾರ್ಖಾನೆಯಲ್ಲಿ ಭೀಕರ ಸ್ಫೋಟ: 18 ಮಂದಿ ದುರ್ಮರಣ



ಅಮರಾವತಿ: ಪಟಾಕಿ ತಯಾರಿಕ ಕಾರ್ಖಾನೆಯಲ್ಲಿ ಸ್ಫೋಟ ಸಂಭವಿಸಿದ ಪರಿಣಾಮ 18 ಮಂದಿ ಸಾವನ್ನಪ್ಪಿರುವ ಘಟನೆ ಆಂಧ್ರ ಪ್ರದೇಶದ ಕಾಕಿನಾಡ ಜಿಲ್ಲೆಯಲ್ಲಿ ನಡೆದಿದೆ.

ಸಾಮರ್ಲಕೋಟ ಮಂಡಲದ ವೆಟ್ಲಪಾಲೆಂ ಗ್ರಾಮದಲ್ಲಿ ದುರಂತ ಸಂಭವಿಸಿದೆ. ಸ್ಫೋಟದ ತೀವ್ರತೆಗೆ ಮೃತದೇಹಗಳು ಛಿದ್ರಗೊಂಡು ಪಕ್ಕದ ಭತ್ತದ ಗದ್ದೆಗೆ ಬಿದ್ದಿವೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಘಟನೆಯಲ್ಲಿ ಹಲವರು ಗಂಭೀರ ಗಾಯಗೊಂಡಿದ್ದು, ಚಿಕಿತ್ಸೆಗಾಗಿ ಆಸ್ಪತ್ರೆಗೆ ರವಾನಿಸಲಾಗಿದೆ. ಇನ್ನು ಘಟನೆಯ ಕುರಿತು ಅಲ್ಲಿನ ಗೃಹ ಸಚಿವೆ ಅನಿತಾ ಮಾತನಾಡಿ, ಕಾಕಿನಾಡ ಜಿಲ್ಲೆಯ ವೆಟ್ಲಪಾಲೆಂನಲ್ಲಿರುವ ಬಾಣಸಂಚ ಪಟಾಕಿ ಉತ್ಪಾದನಾ ಕೇಂದ್ರದಲ್ಲಿ ಸಂಭವಿಸಿದ ಸ್ಫೋಟ ತೀವ್ರ ಆಘಾತವನ್ನುಂಟುಮಾಡಿದೆ. ಘಟನೆಯಲ್ಲಿ ಹಲವರು ಮೃತಪಟ್ಟಿರುವುದು ಬೇಸರದ ಸಂಗತಿ. ಘಟನೆ ಬಗ್ಗೆ ನಾನು ಹಿರಿಯ ಅಧಿಕಾರಿಗಳೊಂದಿಗೆ ಮಾತನಾಡಿದ್ದೇನೆ. ಘಟನೆಯಲ್ಲಿ ಮೃತಪಟ್ಟವರಿಗೆ ಹಾಗೂ ಗಾಯಗೊಂಡಿರುವವರಿಗೆ ಬೇಕಾದ ನೆರವನ್ನು ತಕ್ಷಣವೇ ಒದಗಿಸಲು ಸೂಚಿಸಿದ್ದೇನೆ ಎಂದರು. ಇನ್ನು ದುರಂತದಲ್ಲಿ ಮೃತಪಟ್ಟವರಿಗೆ ಆಂಧ್ರ ಸಿಎಂ ಚಂದ್ರಬಾಬು ನಾಯ್ಡು ಸಂತಾಪ ಸೂಚಿಸಿದ್ದಾರೆ.

ಹಣ ಸಾಗಿಸುತ್ತಿದ್ದ ವಿಮಾನ ಪತನ: 20 ಮಂದಿ ಮೃತಪಟ್ಟರೂ ನೋಟಿಗಾಗಿ ಮುಗಿಬಿದ್ದ ಜನ!

ಸುಕ್ರಾ (ಬೊಲಿವಿಯಾ): ಬೊಲಿವಿಯಾ ವಾಯುಪಡೆಯ ಸರಕು ಸಾಗಣೆ ವಿಮಾನವು ಎಲ್ ಆಲ್ಟೋ ನಗರದಲ್ಲಿ ಪತನಗೊಂಡಿದ್ದು ಕನಿಷ್ಠ 20 ಮಂದಿ ಮೃತಪಟ್ಟಿದ್ದಾರೆ. ಅಗ್ನಿಶಾಮಕ ಸಿಬ್ಬಂದಿ ಹೇಳಿಕೆಗಳನ್ನು ಉಲ್ಲೇಖಿಸಿ ಮಾಧ್ಯಮಗಳು ವರದಿ ಮಾಡಿವೆ.



ಶುಕ್ರವಾರ ಸಂಜೆ 6.15ರ ಸುಮಾರಿಗೆ ದುರಂತ ಸಂಭವಿಸಿದೆ ಎಂದು ವಿಮಾನಯಾನ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಸಾಂತಾ ಕ್ರೂಜ್ ವಿಮಾನ ನಿಲ್ದಾಣದಿಂದ ಎಲ್ ಆಲ್ಟೋಗೆ ಸಂಚರಿಸಿದ್ದ ಈ ವಿಮಾನವು, ರನ್ ವೇನಿಂದ ಜಾರಿ ಸಮೀಪದಲ್ಲಿದ್ದ ವಾಹನಗಳಿಗೆ ಡಿಕ್ಕಿಯಾಗಿದೆ. ಅಪಘಾತಕ್ಕೀಡಾದ ವಿಮಾನವನ್ನು ಸಿ–130 ಹರ್ಕ್ಯುಲಸ್ ಎಂದು ಖಚಿತಪಡಿಸಿರುವ ರಕ್ಷಣಾ ಸಚಿವಾಲಯ, ವಿಮಾನವು ಬೊಲಿವಿಯಾದ ಸೆಂಟ್ರಲ್ ಬ್ಯಾಂಕ್‌ಗೆ ನೋಟುಗಳನ್ನು ಸಾಗಿಸುತ್ತಿತ್ತು ಎಂದೂ ಮಾಹಿತಿ ನೀಡಿದೆ. ಅಪಘಾತದ ಸ್ಥಳದಲ್ಲಿ ನೋಟುಗಳನ್ನು ಆಯ್ದುಕೊಳ್ಳಲು ಮುಗಿಬಿದ್ದ ಜನರ ಗುಂಪನ್ನು ಪೊಲೀಸರು, ಅಶ್ರುವಾಯು ಪ್ರಯೋಗಿಸಿ ಚದುರಿಸಿದ್ದಾರೆ. ಜನರನ್ನು ತಡೆಯಲು ಪೊಲೀಸರು ಸನ್ನದ್ಧವಾಗಿ ನಿಂತಿರುವುದು, ಅಶ್ರುವಾಯು ಪ್ರಹಾರದ ಬಳಿಕ ಜನರು ಓಡುತ್ತಿರುವುದು. ಕೆಲವರು ಪೊಲೀಸರತ್ತ ಕಲ್ಲು ತೂರುತ್ತಿರುವ ದೃಶ್ಯಗಳು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿವೆ.

ಬಾಲಕಿ ಮೇಲೆ ಅತ್ಯಾಚಾರ; ಅಪರಾಧಿಗೆ 53 ವರ್ಷ ಜೈಲುಶಿಕ್ಷೆ

ಕೊಯಿಕ್ಕೋಡ್: 2023ರಲ್ಲಿ ಇಲ್ಲಿನ ಪೆರಾಂಬ್ರ ತಾಲೂಕಿನಲ್ಲಿ ಬಾಲಕಿ ಮೇಲೆ ತೀವ್ರ ಸ್ವರೂಪದ ಲೈಂಗಿಕ ದೌರ್ಜನ್ಯವೆಸಗಿದ 41 ವರ್ಷದ ಅಪರಾಧಿಗೆ ಕೇರಳ ಹೈಕೋರ್ಟ್ ಒಟ್ಟು 53 ವರ್ಷಗಳ ಜೈಲುಶಿಕ್ಷೆ ವಿಧಿಸಿದೆ.

ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ (ಪೋಕ್ಸೋ) ಕಾಯ್ದೆ ಹಾಗೂ ಭಾರತೀಯ ದಂಡ ಸಂಹಿತ (ಐಪಿಸಿ) ವಿವಿಧ ಕಲಂನ ಅಡಿಯಲ್ಲಿ ಅಪರಾಧಿ ಮುಹಮ್ಮದ್ ರೆಹಾನ್ ಅವರಿಗೆ ನಾದಪುರಂನ ತ್ವರಿತ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ದೇವನ್ ಕೆ. ಮೆನನ್ ಶಿಕ್ಷೆ ವಿಧಿಸಿದ್ದಾರೆ ಎಂದು ವಿಶೇಷ ಸರ್ಕಾರಿ ಅಭಿಯೋಜಕ (ಎಸ್‌ಪಿಪಿ) ಮನೋಜ್ ಅರೂರ್ ತಿಳಿಸಿದ್ದಾರೆ. ವಿವಿಧ ಸ್ವರೂಪದ ಅಪರಾಧಗಳಿಗಾಗಿ 53 ವರ್ಷಗಳ ಜೈಲುಶಿಕ್ಷೆ ವಿಧಿಸಲಾಗಿದ್ದರೂ, ವಾಸ್ತವದಲ್ಲಿ 20 ವರ್ಷಗಳ ಅತ್ಯಧಿಕ ಜೈಲುಶಿಕ್ಷೆಯನ್ನು ಅನುಭವಿಸಬೇಕಿದೆ. ಇದಲ್ಲದೆ ಅಪರಾಧಿಗೆ ನ್ಯಾಯಾಲಯವು 2.1 ಲಕ್ಷ ದಂಡ ವಿಧಿಸಿದೆ ಎಂದು ತಿಳಿಸಿದ್ದಾರೆ.

2023ರ ಆಗಸ್ಟ್ ತಿಂಗಳಲ್ಲಿ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಲಾಗಿತ್ತು. ಬಾಲಕಿ ಕಲಿಯುತ್ತಿದ್ದ ಶಾಲೆಯ ಶಿಕ್ಷಕಿಯು ಸಹಾಯವಾಣಿ ಚೈಲ್ಡ್ ಲೈನ್ ಮೂಲಕ ದೂರು ನೀಡಿದ್ದರಿಂದ ಪ್ರಕರಣ ಬೆಳಕಿಗೆ ಬಂದಿತ್ತು. ನಂತರ ಪೊಲೀಸರು ಸಂತ್ರಸ್ತೆಯ ಮನೆಗೆ ತೆರಳಿ, ಬಾಲಕಿ ಹೇಳಿಕೆಯನ್ನು ದಾಖಲಿಸಿಕೊಂಡಿದ್ದರು. ವಿಚಾರಣೆ ವೇಳೆ ಪ್ರಾಸಿಕ್ಯೂಷನ್ 13 ಸಾಕ್ಷಿಗಳನ್ನು ವಿಚಾರಣೆಗೆ ಒಳಪಡಿಸಿ, 21 ದಾಖಲೆಗಳನ್ನು ಹಾಜರುಪಡಿಸಿತು. ಶಿಕ್ಷೆ ಖಚಿತಪಡಿಸಲು 4 ಪುರಾವೆಗಳನ್ನು ಒದಗಿಸಿತ್ತು ಎಂದು ಮನೋಜ್‌ಅರೂರ್ ತಿಳಿಸಿದ್ದಾರೆ.

ತಾಲಿಬಾನ್ ಸಿಬ್ಬಂದಿ, ಉಗ್ರರು ಸೇರಿದಂತೆ 331 ಮಂದಿ ಹತ್ಯೆ


ಇಸ್ಲಾಮಾಬಾದ್: ಅಫ್ಘಾನಿಸ್ತಾನ ವಿರುದ್ಧ ನಡೆಯುತ್ತಿರುವ ಸೇನಾ ಕಾರ್ಯಾಚರಣೆಯಲ್ಲಿ ಅಫ್ಘನ್ ತಾಲಿಬಾನ್ ಅಧಿಕಾರಿಗಳು ಮತ್ತು ಅವರ ಬೆಂಬಲಿತ ಭಯೋತ್ಪಾದಕ ಸಂಘಟನೆಯ ಸದಸ್ಯರು ಸೇರಿ ಸುಮಾರು 331 ಮಂದಿಯನ್ನು ಹತ್ಯೆ ಮಾಡಲಾಗಿದೆ. 500ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ ಎಂದು ಪಾಕಿಸ್ತಾನದ ಮಾಹಿತಿ ಸಚಿವ ಅತ್ತಾವುಲ್ಲಾ ತರಾರ್ ತಿಳಿಸಿದ್ದಾರೆ.



ಘಜಬ್ ಲಿಲ್ ಹಕ್‌ಹೆಸರಿನಡಿ ಕಾರ್ಯಾಚರಣೆ ನಡೆಸಿದ್ದ ಸೇನೆ, ಅಫ್ಘಾನಿಸ್ತಾನದ 37 ಸ್ಥಳಗಳ ಮೇಲೆ ವಾಯುದಾಳಿ ನಡೆಸಿದೆ. ಅಫ್ಘನ್‌ನ 104 ಸೇನಾ ಶಿಬಿರಗಳನ್ನು ನಾಶಪಡಿಸಿದ್ದು, 22 ಗಡಿ ಶಿಬಿರಗಳನ್ನು ವಶಕ್ಕೆ ಪಡೆಯಲಾಗಿದೆ. 163 ಕ್ಷಿಪಣಿ, ಶಸ್ತ್ರಸಜ್ಜಿತ ವಾಹನಗಳನ್ನು ನಾಶಪಡಿಸಲಾಗಿದೆ ಎಂದು ಹೇಳಿದ್ದಾರೆ. ಪಾಕಿಸ್ತಾನ–ಅಫ್ಘಾನಿಸ್ತಾನದ 2,600 ಕಿ.ಮೀ. ಉದ್ದದ ಗಡಿಗೆ ಹೊಂದಿಕೊಂಡ ಪಾಕ್‌ನ 53 ಸ್ಥಳಗಳನ್ನು ಗುರಿಯಾಗಿಸಿ ಅಫ್ಘಾನಿಸ್ತಾನ ದಾಳಿ ಮಾಡಿತ್ತು. ಇದಕ್ಕೆ ಪ್ರತ್ಯುತ್ತರವಾಗಿ ಶುಕ್ರವಾರ ಪಾಕಿಸ್ತಾನ ಸೇನೆ ಅಫ್ಘಾನಿಸ್ತಾನದ ರಾಜಧಾನಿ ಕಾಬೂಲ್ ಮತ್ತು ಕಂದಹಾರ್‌ಗಳ ಮೇಲೂ ಬಾಂಬ್ ದಾಳಿ ನಡೆಸಿತ್ತು. ಅಫ್ಘಾನಿಸ್ತಾನ ವಿರುದ್ಧ ಯುದ್ಧ ಘೋಷಿಸಿರುವ ಪಾಕಿಸ್ತಾನಕ್ಕೆ ಅಮೆರಿಕ ಬೆಂಬಲ ಸೂಚಿಸಿದೆ. ಅಫ್ಘಾನಿಸ್ತಾನ ಸರ್ಕಾರದ ಮೇಲೆ ಒತ್ತಡ ಹೇರಲು ಪಾಕಿಸ್ತಾನ ಆರಂಭಿಸಿರುವ ಸೇನಾ ಕಾರ್ಯಾಚರಣೆಯನ್ನು ನಾವು ನಿಲ್ಲಿಸುವುದಿಲ್ಲ ಎಂದು ಹೇಳಿದೆ.

ಗಿರ್ ಅರಣ್ಯದಲ್ಲಿ 2 ವರ್ಷಗಳಲ್ಲಿ 322 ಸಿಂಹಗಳು ಸಾವು

ಅಹಮದಾಬಾದ್: ಕಳೆದ 2 ವರ್ಷಗಳಲ್ಲಿ ಗುಜರಾತ್ ರಾಜ್ಯದಲ್ಲಿ 322 ಸಿಂಹಗಳು ಮೃತಪಟ್ಟಿವೆ. ಇವುಗಳಲ್ಲಿ 64 ಅಸಹಜ ಕಾರಣಗಳಿಂದ ಸಾವನ್ನಪ್ಪಿವೆ ಎಂದು ಅರಣ್ಯ ಸಚಿವ ಅರ್ಜುನ್ ಮೋಡವಾಡಿಯ ತಿಳಿಸಿದ್ದಾರೆ.



ಕಾಂಗ್ರೆಸ್ ಶಾಸಕ ಶೈಲೇಶ್ ಪರಮಾರ್ ಅವರು ಪ್ರಶ್ನೋತ್ತರ ಅವಧಿಯಲ್ಲಿ ಕೇಳಿದ ಪ್ರಶ್ನೆಗೆ ಸಚಿವರು ಈ ಮಾಹಿತಿ ನೀಡಿದರು. 2024ರಲ್ಲಿ 165, 2025ರಲ್ಲಿ 148 ಸಿಂಹಗಳು ಸಾವನ್ನಪ್ಪಿವೆ. ಕಳೆದ ಜನವರಿ ತಿಂಗಳಲ್ಲೇ 9 ಸಿಂಹಗಳು ಮೃತಪಟ್ಟಿವೆ. 2 ವರ್ಷಗಳಲ್ಲಿ 322 ಸಿಂಹಗಳು ಸಾವನ್ನಪ್ಪಿದ್ದು, ಈ ಪೈಕಿ 64 ಸಿಂಹಗಳು ಬಾವಿಗೆ ಬಿದ್ದಿವೆ ಅಥವಾ ವಾಹನ ಡಿಕ್ಕಿಯಾಗಿ ಮೃತಪಟ್ಟಿವೆ ಎಂದು ಸಚಿವರು ತಿಳಿಸಿದರು.

64 ಸಿಂಹಗಳಲ್ಲಿ 41 ಗಂಡು ಮತ್ತು ಹೆಣ್ಣು ಸಿಂಹಗಳು, 22 ಮರಿಗಳು ಸೇರಿವೆ. ಇವುಗಳಲ್ಲಿ ಒಂದನ್ನು ಗುರುತಿಸಲಾಗಿಲ್ಲ ಎಂದು ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ. ಸಿಂಹಗಳ ಅಸಹಜ ಸಾವು ತಡೆಗಟ್ಟಲು ರಾಜ್ಯ ಸರ್ಕಾರ ಹಲವು ಕ್ರಮಗಳನ್ನು ಕೈಗೊಂಡಿದೆ. ಅರಣ್ಯ ಪ್ರದೇಶದ ವಿವಿಧ ಕಡೆಗಳಲ್ಲಿ ಕಾಡು ಪ್ರಾಣಿಗಳ ಚಿಕಿತ್ಸಾ ಕೇಂದ್ರಗಳನ್ನು ಸ್ಥಾಪಿಸಲಾಗಿದ್ದು, ಪಶುವೈದ್ಯರನ್ನು ನೇಮಿಸಲಾಗಿದೆ. ತುರ್ತು ಚಿಕಿತ್ಸೆಗೆ ಆಂಬುಲೆನ್ಸ್ ಸೇವೆ ಆರಂಭಿಸಲಾಗಿದೆ ಎಂದರು.

ಹಿಂದೂ ಪರ ಸಂಘಟನೆ ಕಾರ್ಯಕರ್ತನ ಮೇಲೆ ಹಲ್ಲೆ ಪ್ರಕರಣ

ನಾಲ್ವರ ಬಂಧನ, ಸಹಜ ಸ್ಥಿತಿಯತ್ತ ನಾಪೋಕ್ಲು



ರಶೀದ್ ನಾಫಿ ಸುಹೈಲ್ ಸಿದ್ದಿಕ್

ಮಡಿಕೇರಿ, ಫೆ.28– ನಾಪೋಕ್ಲುವಿನ ಪೊನ್ನಾಡು ಅಂಗಡಿ ಮಳಿಗೆ ಮುಂಭಾಗ ಹಿಂದೂ ಸಂಘಟನೆ ಕಾರ್ಯಕರ್ತ ಅಪ್ಪಚ್ಚಿರ ಗೌತಮ್ ಎಂಬವರ ಮೇಲೆ ಮಾರಣಾಂತಿಕವಾಗಿ ಹಲ್ಲೆ ನಡೆಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ನಾಲ್ವರು ಆರೋಪಿಗಳನ್ನು ಬಂಧಿಸಲಾಗಿದೆ.

ನಾಪೋಕ್ಲು ಕಾರೆಕಾಡು ನಿವಾಸಿ ಹಂಸ ಎಂಬುವರ ಪುತ್ರ ಪಿ.ಹೆಚ್.ಸುಹೈಲ್ (24), ಇಸ್ಮಾಯಿಲ್ ಎಂಬುವರ ಪುತ್ರ ಬೇತು ಗ್ರಾಮ ನಿವಾಸಿ ಕೆ.ಇ.ಸಿದ್ದಿಕ್ (20), ಇಂದಿರಾ ನಗರ ನಿವಾಸಿ ಮೊಹಮದ್ ಎಂಬುವರ ಪುತ್ರ ನಾಫಿ(19) ಹಾಗೂ ಅಬ್ದುಲ್ ರೆಹಮಾನ್ ಎಂಬುವರ ಪುತ್ರ ಪಿ.ಎ. ರಶೀದ್(30) ಎಂಬುವರೆ ಬಂಧಿತ ಆರೋಪಿಗಳಾಗಿದ್ದಾರೆ. ಹಲ್ಲೆ ಘಟನೆ ಕುರಿತು ಕರವಂಡ ಲವ ನಾಣಯ್ಯ ನೀಡಿದ ದೂರನ್ನು ಆಧರಿಸಿ 4 ಮಂದಿ ಆರೋಪಿಗಳನ್ನು ಬಂಧಿಸಿ ವಿರಾಜಪೇಟೆ ನ್ಯಾಯಾಲಯಕ್ಕೆ ಹಾಜರು ಪಡಿಸಲಾಗಿದೆ.

ಪರಿಸ್ಥಿತಿ ಆಧರಿಸಿ ಕ್ರಮ: ಬಲ್ಲಮಾವಟಿ ಸಹಿತ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಒಟ್ಟು 3 ಕಡೆ ಹಿಂದೂ ಸಂಗಮ ಕಾರ್ಯಕ್ರಮ ಆಯೋಜನೆಯಾಗಿರುವ ಹಿನ್ನೆಲೆಯಲ್ಲಿ ನಾಪೋಕ್ಲು ಪಟ್ಟಣದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿಂದುಮಣಿ ಕೂಡ ಸ್ಥಳದಲ್ಲಿ ಮೊಕ್ಕಾಂ ಹೂಡಿದ್ದು, ಪರಿಸ್ಥಿತಿಯನ್ನು ಅವಲೋಕಿಸುತ್ತಿದ್ದಾರೆ. ಹಲ್ಲೆ ಪ್ರಕರಣದಲ್ಲಿ ನಾಲ್ವರು ಆರೋಪಿಗಳನ್ನು ಬಂಧಿಸಲಾಗಿದೆ. ಸೂಕ್ಷ್ಮ ಮತ್ತು ಆಯಕಟ್ಟಿನ ಪ್ರದೇಶದಲ್ಲಿ ಕೆಎಸ್ಆರ್‌ಪಿ, ಜಿಲ್ಲಾ ಸಶಸ್ತ್ರ ಪೊಲೀಸ್ ಪಡೆ, ಮತ್ತು ಜಿಲ್ಲೆಯ ವಿವಿಧ ಠಾಣೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿಗಳನ್ನು ನಿಯೋಜಿಸಿ ಅಹಿತಕರ ಘಟನೆಗಳು ನಡೆಯದಂತೆ ಕ್ರಮ ಕೈಗೊಳ್ಳಲಾಗಿದೆ. ಪರಿಸ್ಥಿತಿ ಆಧರಿಸಿ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮುಂದುವರಿಕೆ ಬಗ್ಗೆ ನಿರ್ಧಾರ ತೆಗೆದುಕೊಳ್ಳಲಾಗುತ್ತದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿಂದುಮಣಿ ಪತ್ರಿಕಾ ಹೇಳಿಕೆಯಲ್ಲಿ ಹೇಳಿದ್ದಾರೆ.

ಪರಿಸ್ಥಿತಿ ಶಾಂತ: ಕಟ್ಟೆಚ್ಚರದಲ್ಲಿ ಪೊಲೀಸರು



ನಾಪೋಕ್ಲು, ಫೆ.28– ನಿನ್ನೆ ಹಿಂದೂ ಸಂಘಟನೆ ಸದಸ್ಯ ಅಪ್ಪಚ್ಚಿರ ಗೌತಮ್ ಮೇಲೆ ಹಲ್ಲೆ ನಡೆದ ಘಟನೆಯಿಂದ ಬಿಗುವಿನ ಪರಿಸ್ಥಿತಿಯಲ್ಲಿದ್ದ ಪಟ್ಟಣ ಶನಿವಾರ ಸಹಜ ಸ್ಥಿತಿಯಲ್ಲಿದೆ. ಪಟ್ಟಣದಲ್ಲಿ ಶಾಂತಿ ಪರಿಸ್ಥಿತಿಯಿದ್ದರೂ ಪೊಲೀಸರು ಮುನ್ನೆಚ್ಚರಿಕೆ ಕ್ರಮವಾಗಿ ಬಿಗಿ ಪೊಲೀಸರ ಸರ್ಪಗಾವಲನ್ನು ಮುಂದುವರೆಸಿದ್ದಾರೆ. ಪಟ್ಟಣದ ಎಲ್ಲೆಡೆ ಪೊಲೀಸ್ ವಾಹನಗಳು ಸಂಚರಿಸುತ್ತಿದ್ದು ಬಿಗುವಿನ ಪರಿಸ್ಥಿತಿ ಮತ್ತೆ ಮರುಕಳಿಸದಂತೆ ಪೊಲೀಸ್ ಅಧಿಕಾರಿಗಳು ಕಟ್ಟೆಚ್ಚರ ವಹಿಸಿದ್ದಾರೆ.

ಶಾಸಕ ಮಂಥರ್ ಗೌಡ ಖಂಡನೆ

ಮಡಿಕೇರಿ: ಹಲ್ಲೆ ಪ್ರಕರಣವನ್ನು ಶಾಸಕ ಡಾ.ಮಂತರ್‌ಗೌಡ ಖಂಡಿಸಿದ್ದಾರೆ. ಪ್ರಕರಣವನ್ನು ರಾಜಕೀಯ ನಾಯಕರು ಸಮರ್ಥಿಸಿಕೊಳ್ಳುವುದು ಸರಿಯಲ್ಲ. ತಪ್ಪಿತಸ್ಥರ ವಿರುದ್ಧ ಕ್ರಮಕ್ಕೆ ನಾನು ಕೂಡ ಒತ್ತಾಯಿಸುತ್ತೇನೆ. ಧಾರ್ಮಿಕ ವಿಚಾರದಲ್ಲಿ ಯಾರೂ ಕೂಡ ರಾಜಕೀಯ ಮಾಡಬಾರದು. ಈ ವಿಚಾರದಲ್ಲಿ ರಾಜಕೀಯ ಮಾಡಿದರೆ ಕೊಡಗಿಗೆ ಕೆಟ್ಟ ಹೆಸರು ಬರುತ್ತದೆ ಎಂದರು.

ಆರೋಪಿಗಳ ಗಡಿಪಾರಿಗೆ ಆಗ್ರಹ



ಮಡಿಕೇರಿ,ಫೆ.28–ನಾಪೋಕ್ಲುವಿನಲ್ಲಿ ಹಿಂದೂ ಸಂಘಟನೆಯ ಕಾರ್ಯಕರ್ತ ಅಪ್ಪಚ್ಚಿರ ಗೌತಮ್ ಮೇಲೆ ನಡೆದಿರುವ ಹಲ್ಲೆ ಪ್ರಕರಣ ಖಂಡನೀಯ. ಮುಂದೆ ಈ ರೀತಿಯ ಘಟನೆಗಳು ಮರುಕಳಿಸದಂತೆ ಪೊಲೀಸ್ ಇಲಾಖೆ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಮಾಜಿ ಎಂಎಲ್ಸಿ ಎಂ.ಪಿ.ಸುನಿಲ್ ಸುಬ್ರಮಣಿ ಆಗ್ರಹಿಸಿದ್ದಾರೆ.

ಬಲ್ಲಮಾವಟಿಯಲ್ಲಿ ಹಲ್ಲೆ ಮಾಡಿರುವವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಂಡು ಗಡಿ ಪಾರು ಮಾಡಬೇಕೆಂದು ಸುದ್ದಿಗೋಷ್ಠಿಯಲ್ಲಿ ಒತ್ತಾಯಿಸಿದರು. ಸುಮಾರು 2 ಸಾವಿರ ಮಂದಿ ಸೇರಿ ನಾಪೋಕ್ಲುವಿನಲ್ಲಿ ರಸ್ತೆತಡೆ ಮಾಡಿ ಪ್ರತಿಭಟಿಸಿದ ಪರಿ ಣಾಮ ಆರೋಪಿಗಳ ಬಂಧನವಾಗಿದೆ. ಪೊಲೀಸ್ ಇಲಾಖೆಗೆ ಸ್ವತಂತ್ರವಾಗಿ ಕಾರ್ಯ ನಿರ್ವಹಿಸಲು ಬಿಡಬೇಕು ಎಂದು ಆಗ್ರಹಿಸಿದರು.

ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಹೇಶ್ ಜೈನಿ ಮಾತನಾಡಿ, ಕಾಂಗ್ರೆಸ್ ಪಕ್ಷ ಮಗುವನ್ನು ಚಿವುಟಿ ತೊಟ್ಟಿಲು ತೂಗುವ ಕೆಲಸ ಮಾಡುತ್ತಿದೆ. ಒಂದು ವರ್ಗವನ್ನು ಮೆಚ್ಚಿಸುವ ಕಾಂಗ್ರೆಸ್ ಕಿಡಿಗೇಡಿಗಳಿಗೆ ಹಿಂಬಾಗಿಲಿನಿಂದ ಬೆಂಬಲ ನೀಡುತ್ತಿದೆ. ಎಲ್ಲಾ ಆರೋಪಿಗಳ ಬಂಧನವಾಗಿದೆ ಎಂದು ಹೇಳಿಕೆ ನೀಡುವ ಮೂಲಕ ರಾಜಕೀಯ ಬೇಳೆ ಬೇಯಿಸಿಕೊಳ್ಳುತ್ತಿದೆ ಎಂದು ಆರೋಪಿಸಿದರು.

ಜಿಲ್ಲಾ ವಕ್ತಾರ ಬಿ.ಕೆ.ಅರುಣ್ ಕುಮಾರ್ ಮಾತನಾಡಿ, ಹಿಂದೂ ಸಂಗಮದ ಯಾವುದೇ ಕಾರ್ಯಕ್ರಮದಲ್ಲಿ ಅನ್ಯ ಕೋಮಿನವರ ವಿಚಾರವನ್ನು ಪ್ರಸ್ತಾಪಿಸುತ್ತಿಲ್ಲ. ಆದರೂ ಈ ರೀತಿಯ ದಾಳಿ ನಡೆಯುತ್ತಿದೆ, ಆದ್ದರಿಂದ ಹಿಂದೂಗಳು ಒಗ್ಗಟ್ಟು ಪ್ರದರ್ಶಿಸಬೇಕು ಮತ್ತು ಪ್ರಜ್ಞಾವಂತ ಮತದಾರರು ಎಚ್ಚೆತ್ತುಕೊಳ್ಳಬೇಕು ಎಂದರು.

ಗ್ರಾಮಾಂತರ ಮಂಡಲದ ಅಧ್ಯಕ್ಷ ನಾಗೇಶ್ ಕುಂದಲ್ಪಾಡಿ ಮಾತನಾಡಿ, ಹಿಂದೂಗಳನ್ನು ಗುರಿ ಮಾಡಿ ದಾಳಿ ನಡೆಯುತ್ತಿದೆ. ಜಿಲ್ಲೆಯಲ್ಲಿ ಗಾಂಜಾ ದಂಧೆಯನ್ನು ನಿಯಂತ್ರಿಸಲು ಪೊಲೀಸರು ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು. ಗಾಂಜಾ ಸೇವಿಸಿ ಕಾನೂನು ಬಾಹಿರ ಚಟುವಟಿಕೆಗಳಲ್ಲಿ ತೊಡಗಿರುವವರನ್ನು ಪತ್ತೆ ಹಚ್ಚಲು ವಾಹನಗಳನ್ನು ತಪಾಸಣೆಗೆ ಒಳಪಡಿಸಬೇಕು ಎಂದು ಒತ್ತಾಯಿಸಿದರು.

ನಾಳೆ ನೆಲಜಿ ಇಗ್ಗುತ್ತಪ್ಪ ದೇವರ ಕುಂಬ್ಯಾರ್ ಕಲ್ಲಡ್ಚ ಉತ್ಸವ



ನಾಪೋಕ್ಲು, ಫೆ.28 (ದುಗ್ಗಳ)– ನೆಲಜಿ ಶ್ರೀ ಈಶ್ವರ ಇಗ್ಗುತಪ್ಪ ದೇವಾಲಯದಲ್ಲಿ ಕುಂಬ್ಯಾರ್ ಕಲ್ಲಡ್ಚ ಉತ್ಸವ ಮಾ. 2ರಂದು ಜರುಗಲಿದೆ. ಹಬ್ಬದ ಪ್ರಯುಕ್ತ ತುಲಾಭಾರ ಸೇವೆ, ಎತ್ತು ಪೋರಾಟ, ಪೂಜೆ, ಮಹಾ ಮಂಗಳಾರತಿ ಬಳಿಕ ದೇವರ ನೃತ್ಯ ಬಲಿ ನಡೆಯಲಿದೆ. ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ದೇವರ ತೀರ್ಥ ಪ್ರಸಾದ ಸ್ವೀಕರಿಸಿ ಅನುಗ್ರಹ ಪಡೆದುಕೊಳ್ಳುವಂತೆ ದೇವಾಲಯದ ತಕ್ಕ ಮುಖ್ಯಸ್ಥರು ಹಾಗೂ ಆಡಳಿತ ಮಂಡಳಿ ವಿನಂತಿಸಿಕೊಳ್ಳಲಾಗಿದೆ. ತುಲಾ ಭಾರ ಸೇವೆ ಮಾಡುವವರು ಕಾರ್ಯದರ್ಶಿ ಮುಕ್ಕಾಟ್ಟಿರ ವಿನಯ್(94495 54997)ಗೆ ಸಂಪರ್ಕಿಸುವಂತೆ ದೇವಾಲಯದ ಆಡಳಿತ ಮಂಡಳಿ ಅಧ್ಯಕ್ಷ ಮುಂಡಂಡ ಸಿ.ನಾಣಯ್ಯ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗೌತಮ್ ಆರೋಗ್ಯ ವಿಚಾರಿಸಿದ ಶಾಸಕ ಪೊನ್ನಣ್ಣ



ಮಡಿಕೇರಿ,ಫೆ28– ಯುವಕರಿಂದ ಮಾರಣಾಂತಿಕ ಹಲ್ಲೆಗೆ ಒಳಗಾಗಿ ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಹಿಂದೂ ಸಂಘಟನೆ ಸದಸ್ಯ ಅಪ್ಪಚ್ಚಿರ ಗೌತಮ್ ಅವರ ಯೋಗಕ್ಷೇಮವನ್ನು ಶಾಸಕ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ ವಿಚಾರಿಸಿದರು.

ಜಿಲ್ಲಾಸ್ಪತ್ರೆಗೆ ಭೇಟಿ ನೀಡಿದ ಅವರು, ಗಾಯಾಳು ಗೌತಮ್ ಅವರಿಂದ ಘಟನೆಯ ಕುರಿತು ಮಾಹಿತಿ ಪಡೆದು, ಸಾಂತ್ವನ ಹೇಳಿದರು. ಚಿಕಿತ್ಸೆ ನೀಡುತ್ತಿರುವ ವೈದ್ಯರಿಂದಲೂ ಮಾಹಿತಿ ಪಡೆದ ಶಾಸಕರು ಗುಣಮಟ್ಟದ ಚಿಕಿತ್ಸೆ ನೀಡುವಂತೆ ಸೂಚಿಸಿದರು. ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಶಾಸಕ ಪೊನ್ನಣ್ಣ, ಘಟನೆಯನ್ನು ತೀವ್ರವಾಗಿ ಖಂಡಿಸುವುದಾಗಿ ಹೇಳಿದರು. ಹಲ್ಲೆ ಮಾಡಿದ ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ. ಅವರ ವಿರುದ್ಧ ಸೂಕ್ತವಾದ ಕಠಿಣ ಹಾಗೂ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲು ಪೊಲೀಸ್ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದು ಹೇಳಿದರು.

ರಾಜಕೀಯ ಮಾಡಬಾರದು: ಗೌತಮ್ ಮೇಲೆ ಹಲ್ಲೆ ನಡೆದ ವಿಚಾರವನ್ನು ಎಲ್ಲರೂ ಖಂಡಿಸಿದ್ದಾರೆ. ಇದರ ಬಗ್ಗೆ ತಮಗೂ ನೋವಿದೆ. ಇಂತಹ ವಿಚಾರಗಳನ್ನು ಮುಂದಿಟ್ಟು ಯಾರೂ ರಾಜಕೀಯ ಮಾಡಬಾರದು. ಪ್ರಕರಣದ ವಿಚಾರಣೆಯಲ್ಲೂ ಯಾರೂ ಹಸ್ತ ಕ್ಷೇಪ ಮಾಡಬಾದರು. ಇದರಿಂದ ಪ್ರಕರಣದ ಕೊನೆಯಲ್ಲಿ ತೊಂದರೆಯಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಪೊಲೀಸರು ವಿಳಂಬ ಮಾಡಿದ್ದರೆ ಪ್ರತಿಭಟನೆ, ಆಕ್ರೋಶ ವ್ಯಕ್ತಪಡಿಸುವುದು ಸರಿ. ಆದರೆ ಪೊಲೀಸರು ಎಲ್ಲಿಯೂ ಕರ್ತವ್ಯ ಲೋಪ ಮಾಡದೇ ತಕ್ಷಣವೇ ಆರೋಪಿಗಳನ್ನು ಬಂಧಿಸಿದ್ದಾರೆ ಎಂದು ಪತ್ರಕರ್ತರ ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಹಲ್ಲೆ ಪ್ರಕರಣದ 2ನೇ ಆರೋಪಿ ನಾಪೋಕ್ಲು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷನ ಪುತ್ರನಾಗಿದ್ದಾನೆ. ಆತನ ಬಂಧನವೂ ಆಗಿದೆ. ಅಪರಾಧ ಪ್ರಕರಣಗಳಲ್ಲಿ ಕಾನೂನು ಯಾರ ಮಗ, ಯಾರು ತಂದೆ ಎಂದು ಏನನ್ನೂ ನೋಡಲ್ಲ ಎಂದು ಸ್ಪಷ್ಟಪಡಿಸಿದರು.

ಕೇಂದ್ರ ಸಚಿವ ಹರ್‌ದೀಪ್‌ಸಿಂಗ್ ರಾಜೀನಾಮೆಗೆ ಆಗ್ರಹಿಸಿ ಮಹಿಳಾ ಕಾಂಗ್ರೆಸ್ ಪ್ರತಿಭಟನೆ



ಸಚಿವ ಹರ್‌ದೀಪ್ ಸಿಂಗ್ ರಾಜೀನಾಮೆಗೆ ಆಗ್ರಹಿಸಿ ಮಹಿಳಾ ಕಾಂಗ್ರೆಸ್ ಪ್ರತಿಭಟನೆ ನಡೆಸಿತು.

ಮಡಿಕೇರಿ, ಫೆ.28–ಗಂಭೀರ ಆರೋಪ ಎದುರಿಸುತ್ತಿರುವ ಜೆಫ್ರಿ ಎಪ್ಸ್ಟೀನ್‌ನೊಂದಿಗೆ ಸಂಪರ್ಕ ಹೊಂದಿರುವ ಟೀಕೆಗೆ ಗುರಿಯಾಗಿರುವ ಕೇಂದ್ರ ಸಚಿವ ಹರ್‌ದೀಪ್ ಸಿಂಗ್ ಪುರಿ ಅವರನ್ನು ತಕ್ಷಣ ಸಚಿವ ಸ್ಥಾನದಿಂದ ವಜಾಗೊಳಿಸಿ ಬಂಧಿಸುವಂತೆ ಒತ್ತಾಯಿಸಿ ಜಿಲ್ಲಾ ಮಹಿಳಾ ಕಾಂಗ್ರೆಸ್ ಸಮಿತಿ ನಗರದಲ್ಲಿ ಪ್ರತಿಭಟನೆ ನಡೆಸಿತು.

ನಗರದ ಇಂದಿರಾಗಾಂಧಿ ವೃತ್ತದಿಂದ ಮೊಂಬತ್ತಿ ಹಿಡಿದು ಹಳೆ ಖಾಸಗಿ ಬಸ್ ನಿಲ್ದಾಣದವರೆಗೆ ಮೆರವಣಿಗೆ ಮೂಲಕ ಸಾಗಿದ ಪ್ರತಿಭಟನಾಕಾರರು ಹರ್‌ದೀಪ್ ಸಿಂಗ್ ಪುರಿ, ಕೇಂದ್ರ ಸರ್ಕಾರ ಹಾಗೂ ಬಿಜೆಪಿ ವಿರುದ್ಧ ಘೋಷಣೆಗಳನ್ನು ಕೂಗಿದರು.

ಮಹಿಳಾ ಕಾಂಗ್ರೆಸ್ ಜಿಲ್ಲಾಧ್ಯಕ್ಷೆ ಜಿ.ಆರ್. ಪುಷ್ಪಲತಾ ಮಾತನಾಡಿ, ಬಾಲಕಿಯರನ್ನು ಅಪಹರಿಸಿ ಪ್ರಭಾವಿಗಳನ್ನು ಅಪರಾಧ ಕೃತ್ಯದಲ್ಲಿ ಭಾಗಿಯಾಗುವಂತೆ ಮಾಡಿದ ಆರೋಪ ಎದುರಿಸುತ್ತಿರುವ ಜೆಫ್ರಿ ಎಪ್ಸ್ಟೀನ್‌ನೊಂದಿಗೆ ಕೇಂದ್ರ ಸಚಿವರು ಸಂಪರ್ಕ ಹೊಂದಿರುವುದು ಬಹಿರಂಗವಾಗಿದ್ದರೂ ಪ್ರಧಾನಿ ನರೇಂದ್ರ ಮೋದಿ ಅವರು ಇನ್ನೂ ಕೂಡ ಯಾಕೆ ಸಚಿವ ಸಂಪುಟದಲ್ಲಿ ಮುಂದುವರೆಸಿದ್ದಾರೆ ಎಂದು ಪ್ರಶ್ನಿಸಿದರು. ಹರ್‌ದೀಪ್ ಸಿಂಗ್ ಬಂಧನವಾಗುವವರೆಗೂ ಮಹಿಳಾ ಕಾಂಗ್ರೆಸ್ ನಿರಂತರ ಹೋರಾಟ ನಡೆಸಲಿದೆ ಎಂದು ತಿಳಿಸಿದರು.

ತೆನ್ನಿರ ಮೈನಾ, ಶಶಿ, ಪ್ರಕಾಶ್, ರಮಾನಾಥ್, ರೂಪಾ ಭೀಮಯ್ಯ, ಸುನಿತಾ, ಪಂಕಜ, ಶ್ರೀಜಾ ಇದ್ದರು

ಇಂದು ವಿದ್ಯುತ್ ವ್ಯತ್ಯಯ

ಮಡಿಕೇರಿ ಫೆ.28– ಹೊದ್ದೂರು ಫೀಡರ್‌ನಲ್ಲಿ ತುರ್ತು ಕಾಮಗಾರಿ ಕೈಗೊಂಡಿರುವುದರಿಂದ ಮಾ.1ರ ಬೆಳಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ಹೊದ್ದೂರು, ಕಬಡಗೇರಿ, ಕೊಳಕೇರಿ, ಕುಂಜಿಲ, ಎಮ್ಮೆಮಾಡು, ನೆಲಜಿ, ಬಲ್ಲಮಾವಟಿ, ಪೆರೂರು, ನಾಪೋಕ್ಲು ಟೌನ್, ಕೊಟ್ಟಮುಡಿ, ಪಾಲೂರು, ಚೆರಿಯಪರಂಬು, ಹಳೆತಾಲೂಕು ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ಈ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಸೆಸ್ಕಾಂ ಕಾರ್ಯನಿರ್ವಾಹಕ ಎಂಜಿನಿಯರ್ ತಿಳಿಸಿದ್ದಾರೆ

ಹಿರಿಯ ಲೇಖಕಿ ಕಮಲ ಕರಿಯಪ್ಪ ನಿಧನ



ಕುಶಾಲನಗರ, ಫೆ.28–ಪಟ್ಟಣದ ಇಂದಿರಾ ಬಡಾವಣೆಯ ನಿವಾಸಿ ಹಿರಿಯ ಲೇಖಕಿ ಕಿತ್ತೂರು ರಾಣಿ ಚನ್ನಮ್ಮ ಪ್ರಶಸ್ತಿ ಪುರಸ್ಕೃತೆ ಕಮಲ ಕರಿಯಪ್ಪ (76) ಶುಕ್ರವಾರ ರಾತ್ರಿ ನಿಧನರಾಗಿದ್ದಾರೆ.

ಜಿಲ್ಲೆಯ ಮಹಿಳಾ ಸಂಘಟನೆಗಳು ಸೇರಿದಂತೆ ವಿವಿಧ ಸಂಘಟನೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು.ಮೃತರು ಓರ್ವ ಪುತ್ರ ಹಾಗೂ ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ. ಮೃತರ ಪತಿ ದಿವಂಗತ ಡಾ ಕರಿಯಪ್ಪ ಅವರು ಜಿಲ್ಲೆಯ ವಿವಿಧ ಆಸ್ಪತ್ರೆಗಳಲ್ಲಿ ಸೇವೆ ಸಲ್ಲಿಸಿದ್ದರು. ಮೃತರ ಅಂತಿಮ ಸಂಸ್ಕಾರ ಶನಿವಾರ ಮಧ್ಯಾಹ್ನ ಹಿಂದೂ ರುದ್ರಭೂಮಿಯಲ್ಲಿ ನಡೆಯಿತು.

ಸೀತವ್ವ ನಿಧನ



ನಾಪೋಕ್ಲು, ಫೆ.28–ಇಲ್ಲಿಗೆ ಸಮೀ ಪದ ಬೇಂಗೂರ್ ಗ್ರಾಮದ ನಿವಾಸಿ ಕಲ್ಲುಮಾಡಂಡ ದಿ. ಅಪ್ಪಣ್ಣ ನವರ ಪತ್ನಿ ಸೀತವ್ವ (ಕಾಮಿ 97) ಶನಿವಾರ ದೈವಾಧೀನರಾದರು. ಮೃತರು ಓರ್ವ ಪುತ್ರಿ ಮೂವರು ಪುತ್ರರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಬೇಂಗೂರ್ ಗ್ರಾಮದಲ್ಲಿ ಶನಿವಾರ ಜರುಗಿತು.

ಮಹದೇಶ್ವರ ಸ್ವಾಮಿ ಜಾತ್ರೆ

ಬೇಗೂರು(ಗುಂಡ್ಲುಪೇಟೆ): ಶ್ರೀ ಬಂಡಿಗೆರೆ ಮಹದೇಶ್ವರ ಸ್ವಾಮಿ ಜಾತ್ರಾ ಮಹೋತ್ಸವ ಮಾ.1 ರಿಂದ 3 ರವರೆಗೆ ವಿಜೃಂಭಣೆಯಿಂದ ನಡೆಯಲಿದೆ.

ಮಾ.1ರಂದು ಸಂಜೆ ಗಂಗೆ ಪೂಜೆ, ಗಣಪತಿ ಪೂಜೆ, ನವಗ್ರಹ ಪೂಜೆ ಹಾಗೂ ಗಣಪತಿ ಹೋಮ ಮತ್ತು ಮೃತ್ಯುಂಜಯ ಹೋಮ ನಡೆಯಲಿದೆ ಮಾ.2ರಂದು ಬೆಳಗ್ಗೆ 5 ಗಂಟೆಗೆ ಶ್ರೀ ಬಂಡಿಗೆರೆ ಮಹದೇಶ್ವರ ಸ್ವಾಮಿಗೆ ಮಹಾ ರುದ್ರಾಭಿಷೇಕ ಮತ್ತು ಮಹಾಮಂಗಳಾರತಿ ವಿಶೇಷ ಪೂಜೆ ನಡೆಯಲಿದೆ. ಸಂಜೆ ಗ್ರಾಮದ ಆಂಜನೇಯ ಸ್ವಾಮಿ ದೇವಾಲಯದ ಬಳಿ ಸಮಾವೇಶಗೊಳ್ಳುವ ಗ್ರಾಮಸ್ಥರು ಬೇಗೂರಿನ ಬಂಡಿಗೆರೆ ಮಹದೇಶ್ವರಸ್ವಾಮಿ ಮತ್ತು ಕಮರಹಳ್ಳಿ ಗ್ರಾಮದ ಶ್ರೀ ಬಸವೇಶ್ವರ ಹಾಗೂ ಬೆಳಚಲವಾಡಿ ಗ್ರಾಮದ ಶ್ರೀ ರಾಮಲಿಂಗೇಶ್ವರ ಪಲ್ಲಕ್ಕಿ ಉತ್ಸವ ವೀರಗಾಸೆ ಮೆರವಣಿಗೆ ರಾತ್ರಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ನಡೆಸಲಾಗುತ್ತದೆ. ಮಾ.3ರಂದು ಬೆಳಗ್ಗೆ 5 ಗಂಟೆಗೆ ಶ್ರೀ ಬಂಡಿಗೆರೆ ಮಹದೇಶ್ವರ ಸ್ವಾಮಿ ದೇವಾಲಯದ ಆವರಣಕ್ಕೆ ಉತ್ಸವ ಮೂರ್ತಿಗಳು ತಲುಪಲಿವೆ.

ಅಕ್ರಮ ಸ್ಫೋಟಕ ಸಂಗ್ರಹ ಪ್ರಕರಣ: 18 ವರ್ಷಗಳಿಂದ ತಲೆ ಮರೆಸಿಕೊಂಡಿದ್ದ ಆರೋಪಿ ಸೆರೆ



ಕೊಳ್ಳೇಗಾಲ: ಅಕ್ರಮ ಸ್ಫೋಟಕ ಕಾಯ್ದೆ ಪ್ರಕರಣದಲ್ಲಿ ಭಾಗಿಯಾಗಿ ಕಳೆದ 18 ವರ್ಷಗಳಿಂದ ತಲೆ ಮರೆಸಿಕೊಂಡಿದ್ದ ಆರೋಪಿಯನ್ನು ಕೊಳ್ಳೇಗಾಲ ಅಪರಾಧ ಪತ್ತೆದಳ ತಂಡ ಬಂಧಿಸುವಲ್ಲಿ ಯಶಸ್ವಿಯಾಗಿದೆ.

ಹನೂರು ತಾಲೂಕಿನ ಸುಳ್ವಾಡಿ ಗ್ರಾಮದ ರಾಜಕಣ್ಣನ್ ಅವರ ಪುತ್ರ ವೇಲುಸ್ವಾಮಿ ಅಲಿಯಾಸ್ ಗೆಂದೆ ಬಂಧಿತ ಆರೋಪಿ.

ಈತ 2008ರ ಏ.17ರಲ್ಲಿ 41 ಸ್ಫೋಟಕ ಕೇಪುಗಳು, 4 ತೋಪುಗಳು, 29 ಅಡಿ ವೈರ್ ಇತರೆ ಅಕ್ರಮ ಸ್ಫೋಟಕ ಸಾಮಾಗ್ರಿಗಳನ್ನು ಸಂಗ್ರಹಿಸಿಟ್ಟಿರುವ ಖಚಿತ ಮಾಹಿತಿ ಮೇರೆಗೆ ಅಂದಿನ ಎಎಸ್ಐ ಗೋವಿಂದಯ್ಯ ದಾಳಿ ಮಾಡಿ ಮಾಲು ಸಮೇತ ಬಂಧಿಸಿ ನ್ಯಾಯಾಲಯದ ಮುಂದೆ ಹಾಜರುಪಡಿಸಿ ಕ್ರಮವಹಿಸಿದ್ದರು. ಈ ಪ್ರಕರಣದ ಆರೋಪಿ ಜಾಮೀನು ಪಡೆದು ತಲೆ ಮರೆಸಿಕೊಂಡಿದ್ದ.

ಕಳೆದ 18 ವರ್ಷಗಳ ಹಿಂದೆ ನ್ಯಾಯಾಲಯದಲ್ಲಿ ಜಾಮೀನು ಪಡೆದು ತಲೆಮರೆಸಿಕೊಂಡಿದ್ದ ಈತನ ಪತ್ತೆ ಸವಾಲಾಗಿತ್ತು. ಈ ಹಿನ್ನೆಲೆ ಉಪವಿಭಾಗದ ಪೊಲೀಸರು ವೇಲುಸ್ವಾಮಿನನ್ನು ತಮಿಳುನಾಡಿನ ಭವಾನಿಸಾಗರದಲ್ಲಿರುವ ಖಚಿತ ಮಾಹಿತಿ ಮೇರೆಗೆ ಚಾ.ನಗರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮುತ್ತುರಾಜು ಮಾರ್ಗದರ್ಶನದಲ್ಲಿ ಡಿವೈಎಸ್ಪಿ ಧರ್ಮೇಂದ್ರ ನೇತೃತ್ವದಲ್ಲಿ ಉಪವಿಭಾಗ ಅಪರಾಧ ಪತ್ತೆದಳ ಸಿಬ್ಬಂದಿಗಳಾದ ಎಎಸ್ಐ ತಖಿಉಲ್ಲಾ, ಹೆಡ್ ಕಾನ್ಸ್‌ಟೇಬಲ್ ರವಿಕುಮಾರ್, ವೆಂಕಟೇಶ್, ಕಾನ್ಸ್‌ಟೇಬಲ್ ಬಿಳಿಗೌಡ, ಶಿವಕುಮಾರ್ ದಾಳಿ ನಡೆಸಿ ಆರೋಪಿಯನ್ನು ಬಂಧಿಸಿ, ನ್ಯಾಯಾಲಯದ ಮುಂದೆ ಹಾಜರುಪಡಿಸಿದಾಗ ನ್ಯಾಯಾಧೀಶರು ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಹಾಜರುಪಡಿಸಿದ್ದಾರೆ.

ಟಿಪ್ಪರ್ ಮಗುಚಿ ಚಾಲಕ ಸಾವು



ಚಾಮರಾಜನಗರ, ಫೆ.28– ತಾಲೂಕಿನ ವೀರನಪುರ ಸಮೀಪವಿರುವ ಕರಿಕಲ್ಲು ಕ್ವಾರಿಯೊಂದರಲ್ಲಿ ಟಿಪ್ಪರ್ ಮಗುಚಿ ಬಿದ್ದ ಪರಿಣಾಮ ಚಾಲಕ ಸ್ಥಳದಲ್ಲಿಯೇ ಮೃತಪಟ್ಟಿರುವ ಘಟನೆ ನಡೆದಿದೆ.

ತಾಲೂಕಿನ ಹೊಂಗನೂರು ಗ್ರಾಮದ ಕುಮಾರ್(45) ಮೃತ ದುರ್ದೈವಿ.

ವೀರನಪುರ ಗ್ರಾಮದ ಹೊರವಲಯದಲ್ಲಿರುವ ಕ್ವಾರಿಯಲ್ಲಿ ಟಿಪ್ಪರ್ ಅನ್ನು ಚಲಾಯಿಸಿಕೊಂಡು ಬರುತ್ತಿದ್ದ ವೇಳೆ ನಿಯಂತ್ರಣ ತಪ್ಪಿ ಪ್ರಪಾತಕ್ಕೆ ಬಿದ್ದಿದೆ ಎನ್ನಲಾಗಿದೆ. ಇದರಿಂದ ಚಾಲಕನ ತಲೆಗೆ ತೀವ್ರವಾದ ಪೆಟ್ಟು ಬಿದ್ದು ಮೃತಪಟ್ಟಿದ್ದಾನೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಸ್ಥಳಕ್ಕೆ ತೆರಳಿದ ಪೊಲೀಸರು ಮೃತದೇಹವನ್ನು ಸಿಮ್ಸ್ ಆಸ್ಪತ್ರೆಯ ಶವಾಗಾರಕ್ಕೆ ರವಾನಿಸಿ ಮರಣೋತ್ತರ ಪರೀಕ್ಷೆ ಬಳಿಕ ವಾರಸುದಾರರಿಗೆ ಒಪ್ಪಿಸಿದರು. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ದ್ವಿತೀಯ ಪಿಯುಸಿ ಪರೀಕ್ಷೆ ಆರಂಭ

• ಪರೀಕ್ಷಾ ಕೇಂದ್ರಕ್ಕೆ ಜಿಲ್ಲಾಧಿಕಾರಿ ಶ್ರೀರೂಪ ಭೇಟಿ • ಮೊದಲ ದಿನದ ಪರೀಕ್ಷೆಗೆ 120 ವಿದ್ಯಾರ್ಥಿಗಳು ಗೈರು





ಪರೀಕ್ಷೆ ಮುಗಿಸಿ ಹೊರಬರುತ್ತಿರುವ ವಿದ್ಯಾರ್ಥಿಗಳು. ಪರೀಕ್ಷಾ ಕೇಂದ್ರಗಳಿಗೆ ಭೇಟಿ ನೀಡಿ ಪರಿಶೀಲಿಸಿದ ಜಿಲ್ಲಾಧಿಕಾರಿ

ಚಾಮರಾಜನಗರ, ಫೆ.28– ಜಿಲ್ಲೆಯಲ್ಲಿ ದ್ವಿತೀಯ ಪಿಯುಸಿ ಪರೀಕ್ಷೆ ಆರಂಭಗೊಂಡಿದ್ದು, ಮೊದಲ ದಿನವಾದ ಇಂದು ಜಿಲ್ಲಾಧಿಕಾರಿ ಶ್ರೀರೂಪ ಅವರು ಪರೀಕ್ಷಾ ಕೇಂದ್ರಗಳಿಗೆ ಭೇಟಿ ನೀಡಿ ಪರಿಶೀಲಿಸಿದರು.

ನಗರದ ಜೆಎಸ್ಎಸ್ ಮಹಿಳಾ ಪದವಿ ಪೂರ್ವ ಕಾಲೇಜಿನ ಪರೀಕ್ಷಾ ಕೇಂದ್ರಕ್ಕೆ ಭೇಟಿ ನೀಡಿದ ಜಿಲ್ಲಾಧಿಕಾರಿ ಶ್ರೀರೂಪ ಅವರು ಪರೀಕ್ಷೆಗೆ ಹಾಜರಾಗಿರುವ ವಿದ್ಯಾರ್ಥಿಗಳ ಸಂಖ್ಯೆಯ ವಿವರ ಪಡೆದರು. ಪರೀಕ್ಷಾ ಕೇಂದ್ರದಲ್ಲಿ ಪರೀಕ್ಷಾ ಕಾರ್ಯಕ್ಕೆ ನಿಯೋಜಿತರಾಗಿರುವ ಸಿಬ್ಬಂದಿಗಳ ಹಾಜರಾತಿಯನ್ನು ಪರಿಶೀಲಿಸಿದರು.

ಪರೀಕ್ಷಾ ಕೇಂದ್ರದಲ್ಲಿ ಕುಡಿಯುವ ನೀರು, ಇನ್ನಿತರ ಮೂಲ ಸೌಲಭ್ಯಗಳನ್ನು ಕಲ್ಪಿಸಿರುವ ಬಗ್ಗೆ ವೀಕ್ಷಿಸಿದರು. ಸಿಸಿ ಕ್ಯಾಮರಾ ಅಳವಡಿಕೆ ಹಾಗೂ ಇದರ ಕಾರ್ಯನಿರ್ವಹಣೆ ಬಗ್ಗೆ ಜಿಲ್ಲಾಧಿಕಾರಿಗಳು ಪರಿಶೀಲನೆ ನಡೆಸಿದರು. ಪರೀಕ್ಷಾ ಕೇಂದ್ರದಲ್ಲಿ ಆರೋಗ್ಯ ಇಲಾಖೆ, ಪೊಲೀಸ್ ಸಿಬ್ಬಂದಿ ನಿಯೋಜನೆ ಬಗ್ಗೆಯೂ ಪರಿಶೀಲಿಸಿ ವಿವರ ಪಡೆದುಕೊಂಡರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್ ಅವರು ಪರೀಕ್ಷಾ ಸಂಬಂಧ ಜಿಲ್ಲಾ ಪಂಚಾಯತ್‌ನಲ್ಲಿ ಸ್ಥಾಪಿಸಿರುವ ವೆಬ್‌ಕಾಸ್ಟಿಂಗ್ ಕಾರ್ಯ ವೈಖರಿಯನ್ನು ಪರಿಶೀಲಿಸಿದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮುತ್ತುರಾಜು ಅವರು ಸಹ ಪರೀಕ್ಷಾ ಕೇಂದ್ರಗಳಿಗೆ ಭೇಟಿ ನೀಡಿದರು.

ಪದವಿಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಪುಟ್ಟಗೌರಮ್ಮ, ನಗರದ ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜು, ಜೆ.ಎಸ್.ಎಸ್ ಮಹಿಳಾ ಪದವಿಪೂರ್ವ ಕಾಲೇಜು, ಬಾಲಕಿಯರ ಸರ್ಕಾರಿ ಪದವಿಪೂರ್ವ ಕಾಲೇಜು ಪರೀಕ್ಷಾ ಕೇಂದ್ರಗಳಿಗೆ ಭೇಟಿ ನೀಡಿ ಪರಿಶೀಲಿಸಿದರು.

ಮೊದಲ ದಿನ ಕನ್ನಡ ವಿಷಯ ಪರೀಕ್ಷೆ ಸುಗಮವಾಗಿ ನಡೆದಿದೆ. ಒಟ್ಟು 6293 ವಿದ್ಯಾರ್ಥಿಗಳು ಪರೀಕ್ಷೆಗೆ ನೊಂದಾಯಿಸಿದ್ದು, ಇವರಲ್ಲಿ 6173 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದಾರೆ. 120 ವಿದ್ಯಾರ್ಥಿಗಳು ಗೈರುಹಾಜರಾಗಿದ್ದಾರೆ ಎಂದು ಪದವಿಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕಿ ಪುಟ್ಟಗೌರಮ್ಮ ತಿಳಿಸಿದರು.

ಒಳ ಮೀಸಲಾತಿ ಬೇಡ, ಹಳೆಯ ಮೀಸಲಾತಿ ಮುಂದುವರೆಸಿ

ಅವೈಜ್ಞಾನಿಕ ಒಳಮೀಸಲಾತಿ ಜಾರಿ ಮಾಡಿದರೆ ಉಗ್ರ ಹೋರಾಟದ ಎಚ್ಚರಿಕೆ



ಪತ್ರಿಕಾಗೋಷ್ಠಿಯಲ್ಲಿ ಅಯ್ಯನಪುರಶಿವಕುಮಾರ್ ಮಾತನಾಡಿದರು

ಚಾಮರಾಜನಗರ: ಪರಿಶಿಷ್ಟ ಜಾತಿಗೆ ಒಳಮೀಸಲಾತಿ ಬೇಡ, ಹಳೆಯ ಮೀಸಲಾತಿ ಮುಂದುವರಿಸಬೇಕು ಎಂದು ಬಲಗೈ ಸಮುದಾಯಗಳ ಒಕ್ಕೂಟ ಹಾಗೂ ಚಾಮರಾಜನಗರ ತಾಲೂಕು ಆದಿಕರ್ನಾಟಕ ಅಭಿವೃದ್ಧಿ ಸಂಘದ ಆಸ್ತಿ ಸಂರಕ್ಷಣಾ ಸಮಿತಿ ಅಧ್ಯಕ್ಷ ಅಯ್ಯನಪುರ ಶಿವಕುಮಾರ್ ಆಗ್ರಹಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು. ಈಗ ಒಳ ಮೀಸಲಾತಿ ಬೇಕಾಗಿಲ್ಲ ಹಳೆಯ ಮೀಸಲಾತಿ ಮುಂದುವರಿಸುವಂತೆ ರಾಜ್ಯಾದ್ಯಂತ ಕೂಗು ಬರುತ್ತಿದೆ. ಒಳಮೀಸಲಾತಿಯ ಬಿ ಮತ್ತು ಸಿ ಗುಂಪಿನ ವರ್ಗದಲ್ಲಿರುವ ಸಮುದಾಯದವರು ಒಳ ಮೀಸಲಾತಿ ಬೇಡ, ಹಳೆಯ ಮೀಸಲಾತಿ ಮುಂದುವರಿಸುವಂತೆ ಒತ್ತಾಯ ಮಾಡುತ್ತಿವೆ. ಸರ್ಕಾರವು ಅದೇ ತೀರ್ಮಾನ ತೆಗೆದುಕೊಂಡಿದೆ ಎಂದರು.

ಮಂತ್ರಿಗಳಾದ ಕೆ.ಎಚ್.ಮುನಿಯಪ್ಪ, ಆರ್.ಬಿ.ತಿಮ್ಮಾಪುರ್ ಪತ್ರಿಕಾ ಹೇಳಿಕೆಗಳಲ್ಲಿ ಗೊಂದಲ ಉಂಟು ಮಾಡುತ್ತಿದ್ದಾರೆ. ಅದರಲ್ಲಿ ಒಳಮೀಸಲಾತಿ ಮಾಡುತ್ತೇನೆ ಎಂದು ಹೇಳಿಕೆ ನೀಡುತ್ತಿದ್ದಾರೆ. ಅದರಲ್ಲಿ ಒಳಮೀಸಲಾತಿ ಮಾಡಲು ಅವಕಾಶವೇ ಇಲ್ಲ. ಸರ್ಕಾರ ಅವರ ಒತ್ತಡಕ್ಕೆ ಮಣಿದು ಶೇ. 15ರಲ್ಲಿ ಒಳ ಮೀಸಲಾತಿ ಮಾಡಿದರೆ ರಾಜ್ಯಾದ್ಯಂತ ಒಳಮೀಸಲಾತಿಯ ಬಿ ಮತ್ತು ಸಿ ಗುಂಪಿನ ಸಮುದಾಯಗಳ ಉಗ್ರ ಹೋರಾಟವನ್ನು ಸರ್ಕಾರ ಎದುರಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಬೆಳಗಾವಿ ಚಳಿಗಾಲದ ಅಧಿವೇಶನದಲ್ಲಿ ಒಳಮೀಸಲಾತಿ ಚರ್ಚೆಗೆ ಅವಕಾಶ ಕೊಡಬೇಕಾಗಿತ್ತು. ಪರಿಶಿಷ್ಟ ಜಾತಿಯ 101 ಸಮುದಾಯಗಳಿಗೆ ಸೇರಿದ ಒಳ ಮೀಸಲಾತಿ ಬಿಲ್ ಕೂಲಂಕುಷವಾಗಿ ಚರ್ಚೆಗೆ ಇಟ್ಟು ನಂತರ ಬಿಲ್ ಪಾಸ್ ಮಾಡಬೇಕಿತ್ತು ಅ ಬಿಲ್ ಪಾಸ್ ಮಾಡುವ ಸಂದರ್ಭದಲ್ಲಿ ಯಾರಿಗೆ ಅನ್ಯಾಯವಾಗುತ್ತದೆ. ಎಂಬ ಅರಿವು ಇಲ್ಲ. ಒಳಮೀಸಲಾತಿ ಯಿಂದ ಸಮಸ್ಯೆಯಾಗುತ್ತದೆ ಎಂಬ ವಿಷಯ ತಿಳಿದ ತಕ್ಷಣವೇ ಆಡಳಿತ ಪಕ್ಷದ ಕೊಳ್ಳೇಗಾಲ ಶಾಸಕರಾದ ಎ.ಆರ್.ಕೃಷ್ಣಮೂರ್ತಿ ಚರ್ಚೆಗೆ ಅವಕಾಶ ಮಾಡಿಕೊಡುವಂತೆ ಸ್ಪೀಕರ್ ಅವರನ್ನು ಕೇಳಿದರೂ ಕೂಡ ಗಣನೀಯ ತೆಗೆದುಕೊಳ್ಳದೆ. ಹೌದು ಎನ್ನುವ ಪರ ಬಿಲ್ ಪಾಸ್ ಮಾಡಿ ಬಿಟ್ಟರು. ಒಳ ಮೀಸಲಾತಿಯಲ್ಲಿ ಅನ್ಯಾಯವಾಗಿರುವುದು ಸರ್ಕಾರಕ್ಕೂ ಮನದಟ್ಟಾಗಿದೆ ಆದರಿಂದ ಒಳ ಮೀಸಲಾತಿ ಬೇಕಾಗಿಲ್ಲ. ಸುಪ್ರೀಂಕೋರ್ಟ್‌ನಲ್ಲಿ ನಿರ್ಧಾರವಾದ ಮೇಲೆ ಪರಿಶಿಷ್ಟ ಜಾತಿಯ 101 ಸಮುದಾಯಗಳ ಚಿಂತಕರನ್ನು ಆಹ್ವಾನಿಸಿ ಕೂಲಂಕುಷವಾಗಿ ಚರ್ಚಿಸಿ ಯಾವ ಸಮುದಾಯಕ್ಕೂ ಅನ್ಯಾಯವಾಗದ ರೀತಿಯಲ್ಲಿ ಜಾರಿಗೊಳಿಸಬೇಕು ಎಂದು ಒತ್ತಾಯಿಸಿದರು.

ಪತ್ರಿಕಾಗೋಷ್ಠಿಯಲ್ಲಿ ತಾಲೂಕು ಗ್ಯಾರಂಟಿ ಯೋಜನೆಗಳ ಸಮಿತಿ ಅಧ್ಯಕ್ಷ ನಲ್ಲೂರು ಸೋಮೇಶ್ವರ, ನಗರಸಭಾ ಮಾಜಿ ಸದಸ್ಯ ಆರ್.ಪಿ.ನಂಜುಂಡಸ್ವಾಮಿ, ಮುಖಂಡರಾದ ನಾಗಯ್ಯ, ಸೋಮಣ್ಣ, ಗೋವಿಂದ ರಾಜು, ಮಹಾದೇವಸ್ವಾಮಿ, ಜನಾರ್ದನ ಇದ್ದರು.

ಇಂದು ಬೃಹತ್ ಮ್ಯಾರಥಾನ್ ಸ್ಪರ್ಧೆ

ಚಾಮರಾಜನಗರ: ಚಾಮರಾಜನಗರ ಜಿಲ್ಲಾ ಪೊಲೀಸ್ ವತಿಯಿಂದ ಕರ್ನಾಟಕ ಪೊಲೀಸ್ ರನ್ ಅಭಿಯಾನದಡಿ ಸೈಬರ್ ಅಪರಾಧಗಳ ಕುರಿತು ಅರಿವು ಮೂಡಿಸುವ ಸಂಬಂಧ ಬೃಹತ್ ಮಟ್ಟದ 5 ಕಿ.ಮೀ. ಮ್ಯಾರಥಾನ್ ಸ್ಪರ್ಧೆಯನ್ನು ಮಾ.1ರಂದು ಬೆಳಗ್ಗೆ 6 ಗಂಟೆಗೆ ನಗರದ ಜಿಲ್ಲಾ ಪೊಲೀಸ್ ಕವಾಯತು ಮೈದಾನದಲ್ಲಿ ಆಯೋಜಿಸಲಾಗಿದೆ.

ನಮ್ಮ ಪೊಲೀಸ್–ನಮ್ಮ ಹೆಮ್ಮೆ, ಎಲ್ಲರಿಗೂ ಫಿಟ್ನೆಸ್–ಮಾದಕ ಮುಕ್ತ ಕರ್ನಾಟಕ ಘೋಷಣೆಯೊಂದಿಗೆ ಮ್ಯಾರಾಥಾನ್ ನಡೆಯಲಿದೆ. ನಗರದ ಜಿಲ್ಲಾ ಪೊಲೀಸ್ ಕಚೇರಿ ಕವಾಯತು ಮೈದಾನದಿಂದ ಆರಂಭವಾಗುವ ಮ್ಯಾರಥಾನ್ ಬಿ.ರಾಚಯ್ಯ ಜೋಡಿರಸ್ತೆ–ಭುವನೇಶ್ವರಿ ವೃತ್ತ–ಸಂತೇಮರಹಳ್ಳಿ ವೃತ್ತ–ಪಾಲಿಟೆಕ್ನಿಕ್ ಕಾಲೇಜು(ಯೂ ಟರ್ನ್)ನಿಂದ ಪುನಹ–ಸಂತೇಮರಹಳ್ಳಿ ವೃತ್ತ–ಭುವನೇಶ್ವರಿ ವೃತ್ತ –ಜೋಡಿರಸ್ತೆ ಮಾರ್ಗವಾಗಿ ವಾಪಸ್ಸು ಬಂದು ಜಿಲ್ಲಾ ಪೊಲೀಸ್ ಕವಾಯತು ಮೈದಾನದಲ್ಲಿ ಮುಕ್ತಾಯಗೊಳ್ಳಲಿದೆ.

ಮ್ಯಾರಾಥಾನ್‌ನಲ್ಲಿ ಜಿಲ್ಲೆಯ ಎಲ್ಲಾ ಸಾರ್ವಜನಿಕರು, ವಿದ್ಯಾರ್ಥಿಗಳು, ಸಂಘ ಸಂಸ್ಥೆಗಳು ಮುಕ್ತವಾಗಿ ಬಾಗವಹಿಸಲು ಅವಕಾಶ ಕಲ್ಪಿಸಲಾಗಿದೆ.

ಮಕ್ಕಳು ಹಿರಿಯರ ಮಾರ್ಗದರ್ಶನದಲ್ಲಿ ನಡೆಯಿರಿ



ಹಿರಿಯ ಸಿವಿಲ್ ನ್ಯಾಯಾಧೀಶರಾದ ಈಶ್ವರ್ ಅವರು ಮಾತನಾಡಿದರು.

ಚಾಮರಾಜನಗರ: ಪ್ರೌಢಾವಸ್ಥೆಯ ಮಕ್ಕಳು ಹಿರಿಯರ ಮಾರ್ಗದರ್ಶನದಲ್ಲಿ ನಡೆಯಬೇಕು ಎಂದು ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಈಶ್ವರ್ ತಿಳಿಸಿದರು.

ನಗರದ ಸರ್ಕಾರಿ ಪಾಲಿಟೆಕ್ನಿಕಲ್ ಕಾಲೇಜು ಸಮೀಪದಲ್ಲಿರುವ ವೃತ್ತಿಪರ ಬಾಲಕಿಯರ ವಿದ್ಯಾರ್ಥಿ ನಿಲಯದಲ್ಲಿ ಮಾನಸ ಜಿಲ್ಲಾ ಸಂಪನ್ಮೂಲ ಕೇಂದ್ರ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ವತಿಯಿಂದ ನಡೆದ ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆಗಟ್ಟುವಿಕೆ ಕುರಿತು ಜಾಗೃತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಪ್ರೌಢಾವಸ್ಥೆ ಚಂಚಲ ಮನಸ್ಸಿಗೆ ಪರಿಣಾಮ ಬೀರುತ್ತದೆ. ಆಗಾಗಿ ಪ್ರೌಢಾವಸ್ಥೆಯ ಮಕ್ಕಳು ಮನಸ್ಸಿಗೆ ಕಡಿವಾಣ ಹಾಕಿ ಹಿರಿಯರ ಮಾರ್ಗದರ್ಶನದಲ್ಲಿ ನಡೆಯಬೇಕು. ಕ್ಷಣಿಕವಾದ ಪ್ರೀತಿ, ಪ್ರೇಮದಿಂದ, ಕೆಟ್ಟ ಚಟದಿಂದ ದೂರ ವಿರಬೇಕು. ನಿಮ್ಮ ಬುದ್ಧಿ ನಿಮ್ಮ ಕೈಯಲ್ಲಿಟ್ಟುಕೊಂಡು ಎಚ್ಚರದಿಂದ ಇದ್ದು ಓದಿನಕಡೆ ಗಮನ ಕೊಟ್ಟರೆ. ಒಳ್ಳೆಯ ವಿದ್ಯಾರ್ಥಿಯಾಗಿ ಮುಂದಿನ ದಿನಗಳಲ್ಲಿ ಒಳ್ಳೆಯ ಅಧಿಕಾರಿ ಆಗಬಹುದು ಎಂದರು.


ಮಕ್ಕಳ ರಕ್ಷಣೆಗಾಗಿ 54 ಹಕ್ಕುಗಳಿವೆ. ಭಾರತ ಸಂವಿಧಾನದಲ್ಲಿ ಮೂಲಭೂತ ಹಕ್ಕುಗಳಿದ್ದು ಬದುಕುವ ಹಕ್ಕು ಎಲ್ಲರಿಗೂ ಇದ್ದು ಅದೇ ರೀತಿಯಲ್ಲಿ. 18 ವರ್ಷದೊಳಗಿನ ಪ್ರತಿ ಮಕ್ಕಳಿಗೂ ಮೂಲಭೂತ ಮಾನವ ಹಕ್ಕುಗಳಾಗಿವೆ. ಮುಖ್ಯವಾಗಿ ಬದುಕು ಹಕ್ಕು, ಶಿಕ್ಷಣದ ಹಕ್ಕು, ರಕ್ಷಣೆಯಹಕ್ಕು, ಭಾಗವಹಿಸುವಿಕೆಯ ಹಕ್ಕು, ಅಭಿವೃದ್ಧಿ ಹೊಂದುವ ಹಕ್ಕು ಇದೆ ಎಂದರು.

ಬಾಲ್ಯವಿವಾಹದಿಂದ ಮಕ್ಕಳ ಹಕ್ಕು ಹಾಳಾಗುತ್ತದೆ. ಮಕ್ಕಳನ್ನು ಓದು ಬಿಡಿಸಿ ಬಾಲಕಾರ್ಮಿಕತೆಗೆ ದೂಡುವುದು ಒಂದು ಅಪರಾಧವಾಗಿದೆ. ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆಗಟ್ಟಲು 2012ರಲ್ಲಿ ಪೋಕ್ಸೋ ಕಾಯ್ದೆ ಜಾರಿಗೆ ಬಂದಿದೆ. ಲೈಂಗಿಕ ದೌರ್ಜನ್ಯ ಎಸಗಿದ ಆರೋಪಿಗೆ ವಿಶೇಷ ನ್ಯಾಯಾಲಯದಲ್ಲಿ ಜೀವಾವಧಿ ಶಿಕ್ಷೆ ಮರಣದಂಡನೆ, ಶಿಕ್ಷೆ ಇದೆ ಎಂದರು.

ಮಾನಸ ಜಿಲ್ಲಾ ಸಂಯೋಜಕ ಕೆ.ಸಿ.ರೇವಣ್ಣ, ಜನಹಿತಾಶಕ್ತಿ ಹೋರಾಟ ವೇದಿಕೆ ಜಿಲ್ಲಾಧ್ಯಕ್ಷ ರಾಮಸಮುದ್ರ ಸುರೇಶ್, ಅನುಪಮ ಟ್ರಸ್ಟ್‌ನ ಡಾ.ಪ್ರೇಮ ಮಾತನಾಡಿದರು. ನಿಲಯ ಪಾಲಕಿ ರಾಜಮ್ಮ, ಪ್ರಾಂಶುಪಾಲ ಸಿ.ರಂಗಸ್ವಾಮಿ, ವಿದ್ಯಾರ್ಥಿಗಳು ಹಾಜರಿದ್ದರು.

ಸಾವಯವ ಕೃಷಿಯಿಂದಷ್ಟೇ ಮನುಷ್ಯನಿಗೆ ಉಳಿಗಾಲ...!

ನಗುವನಹಳ್ಳಿ ಬೋರೇಗೌಡರ ಎಚ್ಚರಿಕಾ ನುಡಿ



ನಗುವನಹಳ್ಳಿ ಬೋರೇಗೌಡ

ಕೃಷಿಯಲ್ಲಿ ಅತಿಯಾದ ರಾಸಾಯನಿಕ ಗೊಬ್ಬರ ಹಾಗೂ ಕೀಟನಾಶಕ ಬಳಕೆ ಈಗಾಗಲೇ ಅಪಾಯ ಸೃಷ್ಟಿಸಿದೆ. ತಿಳಿದೂ ತಿಳಿದು ಉಣ್ಣುವ ತಟ್ಟೆಗೆ ವಿಷವಿಕ್ಕುವ ಕೃತ್ಯದಲ್ಲಿ ಎಲ್ಲರೂ ಪಾಲುದಾರರಾಗುತ್ತಿದ್ದೇವೆ. ಈಗಲಾದರೂ ರೈತರು ಸಾವಯವ ಕೃಷಿಯತ್ತ ಮರಳದಿದ್ದರೆ ಭವಿಷ್ಯ ಅತ್ಯಂತ ಘೋರವಾಗಿರಲಿದೆ.

ಇದು ದಶಕಗಳ ಹಿಂದೆಯೇ ಸಾವಯವ ಕೃಷಿಯಲ್ಲಿ ತೊಡಗಿಸಿಕೊಂಡು 85ರ ಇಳಿವಯಸ್ಸಿನಲ್ಲೂ ಸಾಕಷ್ಟು ರೈತರಿಗೆ ಮಾರ್ಗದರ್ಶನ ನೀಡುತ್ತಾ, ಸಾಂಪ್ರದಾಯಿಕ ಕೃಷಿಗೆ ಪ್ರೇರಣೆಯಾಗಿರುವ ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲೂಕಿನ ನಗುವನಹಳ್ಳಿಯ ಎಸ್.ಬೋರೇಗೌಡರ ಎಚ್ಚರಿಕೆ ಮಾತುಗಳು.

ನಾಲ್ಕು ದಶಕಗಳ ಹಿಂದೆ ಕೃಷಿ ವಿವಿ ಕುಲಪತಿಯಾಗಿದ್ದ ಡಾ.ವೀರೇಶ್ ಅವರ ಪರಿಚಯವಾಗಿ, ಅವರು ಸಾವಯವ ಕೃಷಿಗೆ ಪ್ರೋತ್ಸಾಹಿಸಿದರು. ನನಗಾಗ 40–42 ವರ್ಷ. ಸಾವಯವ ಕೃಷಿ ಬಗ್ಗೆ ಆಸಕ್ತಿ ತೋರಿದ್ದರಿಂದ ನಮ್ಮಿಬ್ಬರನ್ನೂ ಹಲವರು ಅಣಕಿಸಿದರು. ಆದರೆ ಅವರ ಮಾತುಗಳಿಗೆ ತಲೆ ಕೆಡಿಸಿಕೊಳ್ಳದೆ ರಾಸಾಯನಿಕ ಹಾಗೂ ಕೀಟನಾಶಕ ರಹಿತ ಕೃಷಿ ಮಾಡಿ, ಯಶಸ್ವಿಯಾದೆ. ಆಧುನಿಕ ಹಾಗೂ ಸಾವಯವ ಕೃಷಿ ನಡುವಿನ ವ್ಯತ್ಯಾಸದ ಬಗ್ಗೆ ಸಾಧ್ಯವಾದಷ್ಟು ಜನರಿಗೆ ಮನದಟ್ಟು ಮಾಡಿಕೊಟ್ಟೆ. ಹತ್ತಾರು ರೈತರು ನನ್ನಿಂದ ಪ್ರೇರಣೆಗೊಂಡು ಸಾವಯವ ಕೃಷಿ ಅಳವಡಿಸಿಕೊಂಡರು ಎನ್ನುತ್ತಾರೆ ಬೋರೇಗೌಡರು.

ನಾನು ಕೃಷಿ ಬಿಡಲ್ಲ

ನಮ್ಮ ತಂದೆ ಜಮೀನಿನಲ್ಲಿ ಪಾಲು ನೀಡಿರಲಿಲ್ಲ. ಹಾಗಾಗಿ ನಾನು ಮೈಸೂರಿನ ಕೆ.ಟಿ.ಸ್ಟ್ರೀಟ್‌ನಲ್ಲಿ ಪ್ರಾವಿಷನ್ ಸ್ಟೋರ್ ಇಟ್ಟುಕೊಂಡು ಜೀವನ ನಡೆಸುತ್ತಿದ್ದೆ. ನಂತರ ಅಲ್ಲಿ ಎಲೆಕ್ಟ್ರಾನಿಕ್ಸ್ ಅಂಗಡಿಗಳು ಹೆಚ್ಚಾಗಿದ್ದರಿಂದ ವ್ಯಾಪಾರಿಗಳ ಸಲಹೆಯಂತೆ ಇದ್ದಿಲು, ಉಪ್ಪು ವ್ಯಾಪಾರ ಆರಂಭಿಸಿದೆವು. ನಂತರ ನನ್ನ ತಂದೆ ಜಮೀನಿನಲ್ಲಿ ಪಾಲು ನೀಡಿದರು. ಅಷ್ಟರಲ್ಲಿ ಹೆಚ್.ಡಿ.ಕೋಟೆ ತಾಲೂಕು ಗದ್ದಿಗೆ ಬಳಿ ಜಮೀನು ಖರೀದಿಸಿ, ವ್ಯವಸಾಯ ಮಾಡುತ್ತಿದ್ದೆ. ನನ್ನ ಇಬ್ಬರು ಪುತ್ರರಲ್ಲಿ ಒಬ್ಬರು ಅಮೆರಿಕಾದಲ್ಲಿ ನೆಲೆಸಿದ್ದು, ಮತ್ತೊಬ್ಬರು ಅಂಗಡಿ ವ್ಯವಹಾರ ನೋಡಿಕೊಳ್ಳುತ್ತಾರೆ. ಪುತ್ರಿಗೆ ವಿವಾಹವಾಗಿದೆ. ನಾನು ಮಾತ್ರ ಇಂದಿಗೂ ವ್ಯವಸಾಯ ಬಿಟ್ಟಿಲ್ಲ. ಕೋಟ್ಯಾಂತರ ಬೆಲೆಬಾಳುವ ಎರಡು ಎಕರೆ ಭೂಮಿಯನ್ನು ನಾನಿರುವವರೆಗೆ ಯಾವುದೇ ಕಾರಣಕ್ಕೂ ಮಾರಾಟ ಮಾಡುವುದಿಲ್ಲ, ಕೃಷಿಯನ್ನೂ ಬಿಡುವುದಿಲ್ಲ ಎಂದು ಮಕ್ಕಳಿಗೆ ಕಟ್ಟುನಿಟ್ಟಾಗಿ ಹೇಳಿದ್ದೇನೆ ಎಂಬುದು ಅವರ ದಿಟ್ಟ ನುಡಿ.

ರಾಸಾಯನಿಕ ಗೊಬ್ಬರ ಹಾಗೂ ಕೀಟನಾಶಕ ಬಳಕೆಯಿಂದ ಆರಂಭದಲ್ಲಿ ಉತ್ಪಾದನೆ ಪ್ರಮಾಣ ಹೆಚ್ಚಾಗಬಹುದು. ಆದರೆ ಅದರಿಂದ ಮಣ್ಣಿನ ಫಲವತ್ತತೆ ಹಾಳಾಗುತ್ತದೆ. ವಿಷಯುಕ್ತ ಮಣ್ಣಿನಲ್ಲಿ ಬೆಳೆದಿದ್ದನ್ನು ಸೇವಿಸುವ ಮನುಷ್ಯನ ಆರೋಗ್ಯವೂ ಹದಗೆಡುತ್ತದೆ. ಸಣ್ಣ ವಯಸ್ಸಿನಲ್ಲೇ ಕ್ಯಾನ್ಸರ್, ನರ ಸಮಸ್ಯೆ, ಹೃದಯಾಘಾತ, ಮಧುಮೇಹ, ರಕ್ತದೊತ್ತಡದಂತಹ ಸಮಸ್ಯೆಗಳಿಗೆ ತುತ್ತಾಗಿ 50–60 ವಯಸ್ಸಿಗೇ ಸಾವನ್ನಪ್ಪುತ್ತಿದ್ದಾರೆ. ಇತರೆ ಜೀವಜಂತುಗಳೂ ಸರ್ವನಾಶವಾಗುತ್ತವೆ. ದಿನ ಕಳೆದಂತೆ ಇಡೀ ಪರಿಸರವನ್ನೇ ಸರ್ವನಾಶ ಮಾಡಲಾಗುತ್ತಿದೆ. ಮುಂದಿನ ಪೀಳಿಗೆಗೆ ಬರಡು ಭೂಮಿಯನ್ನು ಬಳುವಳಿಯಾಗಿ ನೀಡುವತ್ತ ವೇಗವಾಗಿ ಸಾಗಿದ್ದೇವೆ.



ನೈಸರ್ಗಿಕ ಗೊಬ್ಬರ ತಯಾರಿಕೆಯಲ್ಲಿ ನಿರತರಾಗಿರುವ ನಗುವನಹಳ್ಳಿ ಬೋರೇಗೌಡರು

ನಾನು 15–20 ವರ್ಷಗಳ ಹಿಂದೆಯೇ ಸಾವಯವ ಕೃಷಿ ಪದ್ಧತಿಯಲ್ಲಿ ಶ್ವೇತಸುಂದರಿ ಬಿಳಿ ರಾಗಿ ಬೆಳೆದಿದ್ದೆ. ಇದನ್ನು ಕೆಲ ರೈತರು ಮಜ್ಜಿಗೆ ರಾಗಿ ಎನ್ನುತ್ತಿದ್ದರು. ಕನಕಪುರದ ಕಡೆಗೆ ಹೋಗಿ ಒಂದಷ್ಟು ರಾಗಿ ತಂದೆವು. ನನ್ನೊಂದಿಗೆ ಬೇರೊಬ್ಬ ರೈತರು ಬಿಳಿ ರಾಗಿಯನ್ನು ಯಶಸ್ವಿಯಾಗಿ ಬೆಳೆದರು. ಆ ರಾಗಿಯನ್ನು ಸಿಎಫ್‌ಟಿಆರ್‌ಐನಲ್ಲಿ ಪರೀಕ್ಷೆ ಮಾಡಿಸಿ, ಅದರಲ್ಲಿ ಯಾವ ಯಾವ ಪೌಷ್ಟಿಕಾಂಶಗಳು ಎಷ್ಟು ಪ್ರಮಾಣದಲ್ಲಿವೆ ಎಂಬ ವರದಿ ಪಡೆದಿದ್ದೆ. ನಾರು, ಸುಣ್ಣ, ಟ್ಯಾನಿನ್, ಪೊಟ್ಯಾಶಿಯಂ ಮತ್ತು ಲೈಸಿನ್ ಎಂಬ ಅಮಾನೋ ಆಮ್ಲ ಹೆಚ್ಚಿನ ಪ್ರಮಾಣದಲ್ಲಿದ್ದು, ಶ್ವೇತ ಸುಂದರಿ ರಾಗಿ ಅತ್ಯುತ್ತಮ ಆಹಾರವಾಗಿದೆ. 100 ಗ್ರಾಂ ರಾಗಿಯಲ್ಲಿ 351 ಕಿಲೋ ಕ್ಯಾಲರಿ ಶಕ್ತಿ ಪ್ರಮಾಣವಿದ್ದು, ಮಧುಮೇಹ, ರಕ್ತದೊತ್ತಡ, ದೊಡ್ಡ ಕರುಳಿನ ಕ್ಯಾನ್ಸರ್, ಹೃದಯ ಕಾಯಿಲೆ ಇದ್ದವರಿಗೆ ಈ ರಾಗಿ ತುಂಬಾ ಸಹಕಾರಿ ಎಂದು ಸಿಎಫ್‌ಟಿಆರ್‌ಐ ವರದಿಯಲ್ಲಿ ವಿವರಣೆ ನೀಡಲಾಗಿದೆ.

ದಶಕದಿಂದ ಬಡಿದುಕೊಳ್ಳುತ್ತಿದ್ದೇನೆ

ಭಾರತ ಸೇರಿದಂತೆ ವಿಶ್ವದೆಲ್ಲೆಡೆ ಎಷ್ಟು ಪ್ರಮಾಣದಲ್ಲಿ ರಾಸಾಯನಿಕ ಗೊಬ್ಬರ ಹಾಗೂ ಕೀಟನಾಶಕ ಬಳಕೆ ಮಾಡಲಾಗುತ್ತಿದೆ. ಅದರಿಂದಾಗುವ ದುಷ್ಪರಿಣಾಮಗಳೇನು, ಆಧುನಿಕ ಕೃಷಿ ಪದ್ಧತಿ ಬಿಟ್ಟು ಸಾವಯವ ಕೃಷಿ ಮಾಡುವುದರಿಂದ ಆಗುವಂತಹ ಪ್ರಯೋಜನಗಳೇನು ಸೇರಿದಂತೆ ಈ ಕುರಿತ ಸಮಗ್ರ ಮಾಹಿತಿಯನ್ನೊಳಗೊಂಡ ಅಂಕಣವನ್ನು 2001ರಲ್ಲೇ ಬರೆದಿದ್ದೆ. ಈ ಬಗ್ಗೆ ನಿರಂತರವಾಗಿ ರೈತರಿಗೆ ತಿಳಿಸಿ, ಆಸಕ್ತರ ಜಮೀನಿನಲ್ಲಿ ಕೃಷಿ ಮಾಡಲು ನಾನೇ ಮಾರ್ಗದರ್ಶನ ನೀಡಿದ್ದೇನೆ. ವರ್ಷದ ಹಿಂದೆ ವಿವಿಧ ಜಿಲ್ಲೆಯ ಸುಮಾರು 150 ರೈತರನ್ನು ಗಣಪತಿ ಆಶ್ರಮಕ್ಕೆ ಆಹ್ವಾನಿಸಿ, ಶ್ರೀಗಳ ನೆರವಿನಿಂದ ವಿಜ್ಞಾನಿಗಳ ಮೂಲಕವೇ ಸಾವಯವ ಕೃಷಿ ಬಗ್ಗೆ ಮಾಹಿತಿ ಕೊಡಿಸಿದೆ. ಇತ್ತೀಚೆಗೆ ಹಲವರು ಕೃಷಿಗೆ ರಾಸಾಯನಿಕ ಬಳಸಬೇಡಿ ಎಂದು ಸರಣಿ ಲೇಖನ ಬರೆಯುತ್ತಿದ್ದಾರೆ. ಕೃಷಿ ಇಲಾಖೆಯವರೂ ಮಣ್ಣಿನ ರಕ್ಷಣೆ ಬಗ್ಗೆ ಈಗ ಮಾತನಾಡಲಾರಂಭಿಸಿದ್ದಾರೆ. ಆದರೆ ನಾನು ಇದನ್ನೇ ದಶಕಗಳಿಂದ ಬಾಯಿ ಬಡಿದುಕೊಳ್ಳುತ್ತಿದ್ದೇನೆ.

ಕಡಿಮೆ ಖರ್ಚಿನಲ್ಲಿ ಕೃಷಿ

ಸಾವಯವ ಕೃಷಿಗೆ ಕೇಂದ್ರ ಸರ್ಕಾರ ಸಾಕಷ್ಟು ಆರ್ಥಿಕ ನೆರವು ನೀಡುತ್ತಿದೆ. ನಾವು ಎರಡು ಎಕರೆಯಲ್ಲಿ ಭತ್ತ ಬೆಳೆಯುತ್ತೇವೆ. ಕೊಟ್ಟಿಗೆ ಗೊಬ್ಬರ, ಹಸಿರೆಲೆ ಗೊಬ್ಬರ ಮಾತ್ರ ಬಳಸುತ್ತೇವೆ. ಇದಕ್ಕೇನು ಖರ್ಚು ಬರುವುದಿಲ್ಲ. ಭತ್ತದ ಕೊಯ್ಲಿನ ನಂತರ ಭೂಮಿ ತೇವ ಇರುವಾಗಲೇ 10 ಕೆಜಿ ಚಂಬೆ, 30 ಕೆಜಿ ಹುರುಳಿ, 5 ಕೆಜಿ ಎಳ್ಳು ಮಿಶ್ರಣವನ್ನು ಚೆಲ್ಲಿದರೆ ಸಾಕು ಒಂದೂವರೆ ಎರಡು ತಿಂಗಳಲ್ಲೇ ಎಕರೆಗೆ ನಾಲ್ಕೈದು ಟನ್ ಹಸಿರೆಲೆ ಗೊಬ್ಬರ ಸಿದ್ಧವಾಗುತ್ತದೆ. ಒಂದೊಂದು ಸೊಪ್ಪಿಗೂ ಒಂದೊಂದು ಗುಣ ಹೊಂದಿರುವುದರಿಂದ ಬೆಳೆಗೆ ಅತ್ಯಗತ್ಯವಾದ ಲಘು ಪೋಷಕಾಂಶಗಳು ಸುಲಭ ಹಾಗೂ ಸರಳವಾಗಿ ಸಿಗುತ್ತವೆ. ಇದೆಲ್ಲವೂ ವೈಜ್ಞಾನಿಕವಾಗಿಯೂ ಸಾಬೀತಾಗಿರುವುದರಿಂದ ಕೃಷಿ ಇಲಾಖೆಯಿಂದಲೂ ನೆರವು ಸಿಗುತ್ತದೆ.

ಭತ್ತ, ರಾಗಿ, ಗೋಧಿ, ತರಕಾರಿ ಯಾವ ಬೆಳೆಗೂ ಬಿಡದೆ ರಾಸಾಯನಿಕ ಗೊಬ್ಬರ ಹಾಗೂ ಕೀಟನಾಶಕವನ್ನು ಯಥೇಚ್ಛವಾಗಿ ಬಳಸಲಾಗುತ್ತಿದೆ. 1960ರ ದಶಕದಲ್ಲಿ 30–40 ವಿಧದ ಕೀಟಬಾಧೆ ಇತ್ತು. ಆದರೆ ಈಗ 300ಕ್ಕೂ ಹೆಚ್ಚು ಕೀಟಗಳು ಉಪದ್ರ ನೀಡುತ್ತಿವೆ. ಹಾಗಾದರೆ ಅಷ್ಟೊಂದು ಪ್ರಮಾಣದ ಕೀಟನಾಶಕ ಬಳಸಿದ ಪರಿಣಾಮ ವಾದರೂ ಏನು. ಹುಳು ಹತ್ತಿ ಹಾಳಾಗುತ್ತಿರುವ ಶೇ.30ರಷ್ಟು ಆಹಾರ ಉತ್ಪನ್ನವನ್ನು ಏಕೆ ಉಳಿಸಿಕೊಳ್ಳಲಾಗುತ್ತಿಲ್ಲ.

ಅಧಿಕ ಇಳುವರಿ ಆಸೆ ಬಿಡಬೇಕು

ಸದ್ಯ ಅನೇಕ ವಿದ್ಯಾವಂತರು, ಉದ್ಯೋಗಿಗಳು ಭೂಮಿ ಖರೀದಿಸಿ, ಸಾವಯವ ಪದ್ಧತಿಯಲ್ಲಿ ಕೃಷಿ ಮಾಡುತ್ತಿದ್ದಾರೆ. ಆರಂಭದಲ್ಲಿ ಉತ್ಪಾದನೆ ಪ್ರಮಾಣ ಸ್ವಲ್ಪ ಕಡಿಮೆ ಎನಿಸಬಹುದು, ಆದರೆ ದೀರ್ಘಕಾಲ ಅಧಿಕ ಪ್ರಮಾಣದ ಹಾಗೂ ವಿಷಮುಕ್ತ ಬೆಳೆ ಪಡೆಯಬಹುದು. ರೈತರು ಹಾಗೂ ಕೃಷಿ ಇಲಾಖೆ ಅಧಿಕಾರಿಗಳು ಈಗಲಾದರೂ ಎಚ್ಚೆತ್ತುಕೊಳ್ಳಬೇಕು. ರೈತರು ಆರಂಭದಲ್ಲೇ ಅಧಿಕ ಪ್ರಮಾಣದ ಉತ್ಪಾದನೆಗೆ ಮಾರು ಹೋಗದೆ, ರಾಸಾಯನಿಕ ಗೊಬ್ಬರ ಹಾಗೂ ಕೀಟನಾಶಕ ಮುಕ್ತ ಕೃಷಿಗೆ ಮರಳಬೇಕು. ಕೃಷಿ ಇಲಾಖೆ ಇದನ್ನು ಗಂಭೀರವಾಗಿ ಪರಿಗಣಿಸಬೇಕು. ರಾಸಾಯನಿಕ ಗೊಬ್ಬರ, ಕೀಟನಾಶಕಗಳನ್ನು ಬಳಸದೆ ನೈಸರ್ಗಿಕ ಗೊಬ್ಬರ ಬಳಕೆಗೆ ಪ್ರೋತ್ಸಾಹಿಸಬೇಕು. ಸಾವಯವ ಕೃಷಿಗೆ ವ್ಯಾಪಕ ಉತ್ತೇಜನ ದೊರಕಿದರೆ ಮಾತ್ರ ಭೂಮಿ ಜೊತೆಗೆ ನಾವೂ ಉಳಿಯಲು ಸಾಧ್ಯ ಎಂಬುದು ಬೋರೇಗೌಡರ ಮಹದಾಶಯವಾಗಿದೆ.



ಸಾವಯವ ಗೊಬ್ಬರ ತಯಾರಿಸುವ ಬಗ್ಗೆ ಮಾಹಿತಿ ನೀಡುತ್ತಿರುವುದು




ಸಾವಯವ ಪದ್ಧತಿಯಲ್ಲಿ ಬೆಳೆದ ರಾಗಿ ಪೈರು ಪ್ರದರ್ಶನ

ಮಕ್ಕಳ ಚಿತ್ರಕಥೆ: ಮರ ಕಡಿಯುವವನಿಗೆ ಸಿಕ್ಕಿದ್ದು...! (ಕಳೆದ ಸಂಚಿಕೆಯಿಂದ)


■ ಹೆಚ್.ಜಿ.ಎನ್.ಪ್ರಸಾದ್
ಮೊ. 98453 76199



ರಾಮಯ್ಯನ ಕೈಯ್ಯಲ್ಲಿದ್ದ ಚಿನ್ನದ ಕೊಡಲಿಯನ್ನು ಕಂಡ ಆತನ ಸ್ನೇಹಿತ ಭೀಮಯ್ಯ, 'ನಿನಗೆ ಹೇಗೆ ಸಿಕ್ಕಿತು ಈ ಚಿನ್ನದ ಕೊಡಲಿ..?' ಎಂದು ಪ್ರಶ್ನಿಸಲು ರಾಮಯ್ಯ ನಡೆದ ಘಟನೆಯನ್ನು ಆತನಿಗೆ ಸಂಪೂರ್ಣ ವಿವರಿಸಿದ. ದುಷ್ಟ ಹಾಗೂ ಅತೀ ಆಸೆಯ ಸ್ವಭಾವವುಳ್ಳ ಭೀಮಯ್ಯ, ತಾನೂ ಕೂಡ ಚಿನ್ನದ ಕೊಡಲಿಯನ್ನು ಪಡೆದು ಕೊಳ್ಳಬೇಕೆಂದು ತೀರ್ಮಾನಿಸಿದ.



ಮರು ದಿನ ಭೀಮಯ್ಯನೂ ಕೂಡ ಅದೇ ಕೆರೆಯ ಬಳಿ ಹೋಗಿ ಅದೇ ಮರವನ್ನು ಹತ್ತಿ, ಕೈಲಿದ್ದ ಕೊಡಲಿಯನ್ನು ನೀರಿಗೆಸೆದು ತಾನೂ ಕೂಡ ಜಲದೇವತೆಯನ್ನು ಕುರಿತು ಪ್ರಾರ್ಥಿಸಿದ.




ಜಲದೇವತೆಯು ಭೀಮಯ್ಯನಿಗೂ ಪ್ರತ್ಯಕ್ಷವಾಗಲು ಭೀಮಯ್ಯ 'ಮರ ಕಡಿಯುವಾಗ ನನ್ನ ಕೊಡಲಿಯು ಕೈ ತಪ್ಪಿ ಜಾರಿ ನೀರಿನೊಳಗೆ ಬಿದ್ದುಬಿಟ್ಟಿದೆ'... ಎಂದು ಸುಳ್ಳು ಹೇಳಿ, 'ದಯವಿಟ್ಟು ಅದನ್ನು ತೆಗೆದು ಕೊಡು ದೇವಿ...!' ಎಂದು ಬೇಡಿಕೊಂಡ.



ಅದನ್ನು ಕೇಳಿದ ಜಲದೇವತೆಯು ಕೊಳದ ಆಳದಿಂದ ಅವನ ನಿಜವಾದ ಕೊಡಲಿಯನ್ನು ತೆಗೆದು, 'ಇದೇ ತಾನೆ ನಿನ್ನ ಕೊಡಲಿ...' ಎಂದು ಪ್ರಶ್ನಿಸಲು ಭೀಮಯ್ಯ 'ಇಲ್ಲ... ಇಲ್ಲಾ... ಇದು ನನ್ನದಲ್ಲ!' ಎಂದು ನಿರಾಕರಿಸಿದ.



ಮತ್ತೆ ಜಲದೇವತೆಯು ನೀರಿನಲ್ಲಿ ಮುಳುಗಿ ಬೆಳ್ಳಿಯ ಕೊಡಲಿಯನ್ನು ತಂದು ನೀಡಲು ಮುಂದಾದಾಗ, ಭೀಮಯ್ಯ 'ಇದೂ ಕೂಡ ನನ್ನದಲ್ಲಾ...!' ಎಂದು ನಿರಾಕರಿಸಿಬಿಟ್ಟ. ಪುನಃ ದೇವತೆಯು ನೀರಿನಿಂದ ಒಂದು ಚಿನ್ನದ ಕೊಡಲಿಯನ್ನು ತಂದು ತೋರಿಸಿದಳು. ಅದನ್ನು ಕಂಡ ಭೀಮಯ್ಯ ಅತೀವ ಸಂತೋಷದಿಂದ, 'ಇದೆ... ಇದೇ... ನನ್ನ ಕೊಡಲಿ...!' ಎಂದ.



ಆಗ ಜಲ ದೇವತೆಯು ಕೋಪದಿಂದ 'ನೀನು ನನಗೆ ಸುಳ್ಳು ಹೇಳಿದೆ, ನಿನಗೆ ಅತಿ ಆಸೆ ಇದೆ!' ಎಂದು ಹೇಳಿ, ಏನನ್ನೂ ನೀಡದೆ ಮಾಯವಾಗಿಬಿಟ್ಟಳು. ಸುಳ್ಳು ಹೇಳಿದ್ದಕ್ಕೆ ಭೀಮಯ್ಯನಿಗೆ ತೀವ್ರ ನಿರಾಸೆ ಕಾದಿತ್ತು ನಿಜ ಹೇಳಿದ್ದಕ್ಕೆ ರಾಮಯ್ಯನಿಗೆ ಬಹುಮಾನ ನೀಡಲಾಯಿತು. (ಮುಗಿಯಿತು)

ನೀತಿ:–'ಸತ್ಯಕ್ಕೆ ಎಂದೂ ಸತ್ಫಲ ಸಿಕ್ಕೆ ಸಿಗುತ್ತೆ'

ವಾರಭವಿಷ್ಯ

1.03.2026 ರಿಂದ 7.03.2026

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ: ರವಿ–ಕುಂಭ, ಚಂದ್ರ–ಕಟಕ, ಸಿಂಹ, ಕನ್ಯಾ, ತುಲಾ, ಕುಜ–ಕುಂಭ, ಬುಧ–ಕುಂಭ, ಗುರು–ಮಿಥುನ, ಶುಕ್ರ–ಮೀನ, ಶನಿ–ಮೀನ, ರಾಹು–ಕುಂಭ ಮತ್ತು ಕೇತು–ಸಿಂಹ

ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ್ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
'ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ'
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ: 9740973224, 9739548720



ಮೇಷ (ಚು,ಚೆ,ಲ,ಲಿ,ಲು,ಲೆ,ಲೂ,ಅ)

ಈ ವಾರ ಯಾವುದೇ ವಿಚಾರದಲ್ಲಿ ಆತುರದ ತೀರ್ಮಾನ ಬೇಡ. ಪ್ರಯತ್ನ ಕಾರ್ಯಗಳಲ್ಲಿ ಯಶಸ್ಸು ಉಂಟಾಗಲು ನೆರೆಹೊರೆಯವರ ಸಹಕಾರ ಬೇಕಾಗುತ್ತದೆ. ಸಾಡೇಸಾತಿಯ ಪ್ರಭಾವದಿಂದ ಅಕಾರಣ ವಾದ ಕಲಹಗಳು ಉಂಟಾಗುತ್ತವೆ. ಬೇಡದ ವಿಚಾರಗಳಿಗೆ ಹಣ ಪೋಲಾಗುವುದು. ನ್ಯಾಯವಾದಿಗಳಿಗೆ ಹೊಸ ಕಕ್ಷಿದಾರ ದೊರಕುವರು. ಉಷ್ಣ ಸಂಬಂಧಿ ಕಾಯಿಲೆ ಕಾಡುವುದು.

ಶ್ರೀ ಗಣೇಶ ಉಪಾಸನೆ. ಶುಭಸಂಖ್ಯೆ–5

ವೃಷಭ (ಇ,ಉ,ಎ,ಒ,ವ,ವಿ,ವು,ವೆ,ವೊ)

ಈ ವಾರದಲ್ಲಿ ಖಾಸಗಿ ಉದ್ಯೋಗಿಗಳಿಗೆ ಬೋನಸ್ ಇತ್ಯಾದಿ ಧನಲಾಭ. ಹೊಸ ಯೋಜನೆಗಳಿಗೆ ಕೈ ಹಾಕಲು ಗ್ರಹಾನುಕೂಲವಿದೆ. ಮನೆಯಲ್ಲಿ ಮಂಗಳವಾದ್ಯ ಮೊಳಗೀತು. ದ್ವಿದಳ ಧಾನ್ಯಗಳ ಫಸಲು ಸಮೃದ್ಧಿಯಾಗಿ ಬರುವುದು. ಎಣ್ಣೆ ವ್ಯಾಪಾರಿಗಳಿಗೆ ನಿರೀಕ್ಷೆ ಮೀರಿ ವ್ಯಾಪಾರ ಹಾಗೂ ಧನಲಾಭವಾಗುವುದು. ಅಶುಭ ಕೇತುವಿನ ಕಾರಣ ದುಷ್ಟ ಜನರ ಸಹವಾಸದಿಂದ ನಿಮಗೆ ಅಪಕೀರ್ತಿ.

ಶ್ರೀ ಚಾಮುಂಡೇಶ್ವರಿ ದರ್ಶನ. ಶುಭಸಂಖ್ಯೆ–4

ಮಿಥುನ (ಕ,ಕಿ,ಕು,ಘ,ಙ,ಛ,ಕೆ,ಕೊ,ಹ)

ವಾರದ ಆರಂಭಕ್ಕೆ ಬಂಧು–ಮಿತ್ರರ ಸಹಾಯ, ಕೌಟುಂಬಿಕ ಸಮಸ್ಯೆಗಳಿಗೆ ಪರಿಹಾರ, ನೆರೆಹೊರೆಯಲ್ಲಿ ಸೌಹಾರ್ದತೆಯ ವಾತಾವರಣ ಕಂಡು ಬರುವುದು. ವಾರ ಮಧ್ಯೆ ಜಾತ್ರೆ, ತೇರುಗಳಲ್ಲಿ ಭಾಗವಹಿಸುವಿರಿ. ದ್ವಿತೀಯ ಕೇತು ಇರುವ ಕಾರಣ ಅಪರಿಚಿತ ವ್ಯಕ್ತಿಗಳಿಂದ ಮೋಸ ಹೋಗುವ ಸಾಧ್ಯತೆ ಇರುತ್ತದೆ.

ಶ್ರೀ ಅಷ್ಟ ಮಂತ್ರ ಜಪಿಸಿ, ಶುಭಸಂಖ್ಯೆ–1

ಕಟಕ (ಹೊ,ಹು,ಹೆ,ಡ,ಡಿ,ಡು)

ಸಪ್ತಾಹದ ಆದಿಗೆ ನಿಮ್ಮ ರಾಶಿಗೆ ಬರುವ ನಿಮ್ಮ ರಾಶ್ಯಾಧಿಪತಿ ಚಂದ್ರ ಮೈ–ಮನಗಳಲ್ಲಿ ನವಚೈತನ್ಯ, ಮನೆಯಲ್ಲಿ ಮಂಗಳ ಕಾರ್ಯ ಜರುಗುವಿಕೆಯಂತಹ ಶುಭಫಲಗಳನ್ನು ನೀಡಲಿದ್ದಾನೆ. ಕ್ಷೀರಜನ್ಯ ವಸ್ತು ವ್ಯಾಪಾರ, ಪಶುಸಂಗೋಪನೆ ದುಪ್ಪಟ್ಟು ಲಾಭವನ್ನು ನೀಡಲಿದೆ. ಸ್ತ್ರೀಯರು ಅಲಂಕಾರಿಕ ವಸ್ತುಗಳಿಗೆ ಹೆಚ್ಚಿನ ಹಣ ವ್ಯಯಿಸುವರು. ವಾರಾಂತ್ಯಕ್ಕೆ ಪಿಕ್‌ನಿಕ್ ಮೂಡ್

ಶ್ರೀ ದೇವಿಸ್ತುತಿ, ಶುಭಸಂಖ್ಯೆ–2

ಸಿಂಹ (ಮ,ಮಿ,ಮು,ಮೊ,ಮೆ,ಟ,ಟಿ,ಟು,ಟೆ)

ಈ ವಾರದಲ್ಲಿ ಕೆಲಸ ಕಾರ್ಯಗಳಲ್ಲಿ ವಿಘ್ನಗಳು ಉಂಟಾದರೂ ಧೃತಿಗೆಡದೆ ಮುಂದುವರೆಯಿರಿ. ಪ್ರಯತ್ನಶೀಲರಾಗಿ ದೈವ ಸಹಾಯ ದೊರಕುವುದು. ಗೃಹ ಸಂಬಂಧಿ ವಿಚಾರಗಳಲ್ಲಿ ಉಂಟಾಗಿದ್ದ ಭಿನ್ನಾಭಿಪ್ರಾಯಗಳು ನಿವಾರಣೆ ಆಗುವುದು. ನಿಮ್ಮ ಬ್ಯಾಂಕ್ ಡಿಟೇಲ್ಸ್ ಇತರರೊಡನೆ ಹಂಚಿಕೊಳ್ಳಬೇಡಿ. ಮಹಿಳಾ ಮಣಿಗಳು ವಾಯು ವಿಹಾರಕ್ಕೆ ತೆರಳುವಾಗ ಮಾಂಗಲ್ಯ ಸರ ರಕ್ಷಿಸಿಕೊಳ್ಳಿ.

ಶ್ರೀ ಶಶಿಮೂಲಮಂತ್ರ ಜಪಿಸಿ, ಶುಭಸಂಖ್ಯೆ–9

ಕನ್ಯಾ (ಟೊ,ಪ,ಪಿ,ಪು,ಷ,ಣ,ಠ,ಪೆ,ಪೊ)

'ಜಗದಲ್ಲಿ ನಡೆಯುವುದೆಲ್ಲ ಜಗದೀಶನ ಇಚ್ಛೆ' ವಾರದ ಆದಿಭಾಗಕ್ಕೆ ಕಾರ್ಯ ಸಫಲತೆ, ಆದಾಯದಲ್ಲಿ ಹೆಚ್ಚಳ. ನೂತನ ವಾಹನ ಹೊಂದುವ ಯೋಗವಿದೆ. ವ್ಯಾಪಾರ ವ್ಯವಹಾರಕ್ಕೆ ಸಂಬಂಧಿತ ಹೊಸ ಒಪ್ಪಂದಗಳು ಏರ್ಪಡುವುದು. ವಾರದ ದ್ವಿತೀಯಾರ್ಧಕ್ಕೆ ಆರೋಗ್ಯ ಸಮರ್ಪಕವಾಗಿ ಇರದು. ಔಷಧೋಪಚಾರದ ಖರ್ಚುಗಳು ಎದುರಾಗುವುದು. ಅನಾಚಾರಿಗಳ ಸಹವಾಸದಿಂದ ದೂರವಿರಿ.

ಶ್ರೀ ಶ್ರೀನಿವಾಸದೇವನ ಉಪಾಸನೆ, ಶುಭಸಂಖ್ಯೆ–8

ತುಲಾ (ರ,ರಿ,ರು,ರೆ,ರೊ,ತ,ತಿ,ತು,ತೆ)

ವಾರದ ಆರಂಭಕ್ಕೆ ಗೌರವಾನ್ವಿತ ವ್ಯಕ್ತಿಗಳ ಭೇಟಿ ಹಾಗೂ ಅವರ ಮಾರ್ಗದರ್ಶನ ಪ್ರಾಪ್ತಿ. ನೀವೂ ಕೂಡ ಪ್ರಭಾವಿಗಳೆನಿಸಿ ಎದರಾಳಿಗಳ ಮೇಲೆ ವಿಜಯವನ್ನು ಸಾಧಿಸುವಿರಿ. ನೂತನ ವಾಹನ ಹೊಂದುವ ಕನಸು ನನಸಾಗುವುದು. ದ್ವಿದಳ ಧಾನ್ಯ, ಎಣ್ಣೆಕಾಳುಗಳ ವ್ಯಾಪಾರ ಭರಾಟೆಯಿಂದ ನಡೆದು ಅಧಿಕ ಧನಲಾಭವಾಗುವುದು. ಅಕಾಲ ಭೋಜನದಿಂದ ವಾಯು ಪ್ರಕೋಪ.

ಶ್ರೀ ಅಪರಾಜಿತ ಸ್ತೋತ್ರ ಪಠಿಸಿ, ಶುಭಸಂಖ್ಯೆ–3

ವೃಶ್ಚಿಕ (ತೊ,ನ,ನಿ,ನು,ನೆ,ನೊ,ಯು,ಯಿ,ಯ)

ಈ ವಾರದಲ್ಲಿ ಕೆಲಸ ಕಾರ್ಯಗಳಲ್ಲಿ ವಿಘ್ನಗಳು ಉಂಟಾದರೂ ಅಧೀರರಾಗುವ ಅಗತ್ಯವಿಲ್ಲ. ದೈವ ಸಹಾಯವಿಲ್ಲದೆ ಜಯ ದೊರಕದು, ಪ್ರಯತ್ನವಿಲ್ಲದೆ ದೈವ ಸಹಾಯವೂ ದೊರಕದು. ಐಟಿ, ಬಿಟಿ ಮಂದಿಗಳಿಗೆ ಉನ್ನತ ಸ್ಥಾನ ದೊರೆಯುವುದು ಜೊತೆಗೆ ಹೊರದೇಶಕ್ಕೆ ತೆರಳುವ ಸಂಭವವಿದೆ. ಬೃಹತ್ ಉದ್ಯಮಪತಿಗಳಿಗೆ ನೌಕರರ ಅಸಹಕಾರದಿಂದ ನಷ್ಟವಾದೀತು. ನಿಮ್ಮವರೇ ನಿಮ್ಮನ್ನು ಅನುಮಾನಿಸಿ ನೋಡುವರು. ಆತುರದ ಡ್ರೈವಿಂಗ್ ಆಪತ್ತು ತರುವುದು.

ಶ್ರೀ ನೃಸಿಂಹ ಆರಾಧನೆ, ಶುಭಸಂಖ್ಯೆ–6

ಧನುಸ್ಸು (ಯೆ,ಯೊ,ಬ,ಬಿ,ಬು,ಧ,ಭ,ಢ,ಬೆ)

ಈ ವಾರ ವೈಯಕ್ತಿಕ ಹಾಗೂ ಸಾಮಾಜಿಕ ವಿಷಯಗಳಲ್ಲಿ ಪ್ರಗತಿಪರ ಚಿಂತನೆಗಳಿಂದ ಖ್ಯಾತಿಯನ್ನು ಪಡೆಯುವಿರಿ. ಚರ–ಸ್ಥಿರ ಆಸ್ತಿ ವ್ಯವಹಾರಗಳು ನಿಮ್ಮ ಭಾಗ್ಯದ ಬಾಗಿಲು ತೆರಯಲಿದೆ. ಮನೆಯಲ್ಲೂ ಆಫೀಸಿನಲ್ಲೂ ಉಂಟಾಗುವ ಬದಲಾವಣೆಗಳಿಗೆ ಸಿದ್ಧರಾಗಿರಿ. 'ಮಾತು ಬಲ್ಲವ ಮಾಣಿಕ್ಯ ತಂದ' ಎಂಬ ಗಾದೆ ಮಾತಿನಂತೆ ಉತ್ತಮ ಮಾತಿನಿಂದ ಶುಭಫಲ. ಸಾಹಸ ಪ್ರವೃತ್ತಿಯಿಂದ ಕಾರ್ಯ ಸಾಧನೆ.

ಶ್ರೀ ಶಿರಡಿ ಸಾಯಿ ಉಪಾಸನೆ, ಶುಭಸಂಖ್ಯೆ–5

ಮಕರ (ಬೊ,ಜ,ಜೆ,ಶಿ,ಶು,ಶೆ,ಶೊ,ಗ,ಗಿ)

ನಿಮ್ಮ ರಾಶಿಯ ದ್ವಿತೀಯ ಭಾವದಲ್ಲಿ ನಾಲ್ಕು ಗ್ರಹಗಳ ಗ್ರಹಯುದ್ಧ ನಡೆದಿರುವ ಕಾರಣ ಮನೆಯಲ್ಲಿ ಸಾಮರಸ್ಯದ ಕೊರತೆ, ಅಪನಂಬಿಕೆಗಳಿಂದ ಮನಃಶಾಂತಿಗೆ ಭಂಗ. ವಾರ ಮಧ್ಯೆ ಕೆಲವೊಂದು ಶುಭ ಪ್ರಸಂಗಗಳು ನಡೆಯುವುದು. ಬಂಧು ಜನರ ವಿಶ್ವಾಸಕ್ಕೆ ಪಾತ್ರರಾಗುವಿರಿ. ಎಳ್ಳು ಹಾಗೂ ಕಪ್ಪು ಧಾನ್ಯಗಳು ವಿಫುಲವಾಗಿ ಬೆಳೆಯುವುದು. ಆರೋಗ್ಯದಲ್ಲಿ ಏರು–ಪೇರು ಉಂಟಾದೀತು, ಸೂಕ್ತ ಚಿಕಿತ್ಸೆ ಪಡೆಯಿರಿ.

ಶ್ರೀ ಶನಿ ಮಹಾತ್ಮೆ ಕಥೆ ಓದಿ, ಶುಭಸಂಖ್ಯೆ–7

ಕುಂಭ (ಗು,ಗೆ,ಗೊ,ಸ,ಸಿ,ಸು,ಸೆ,ಸೊ,ದ)

ಈ ವಾರ ವ್ಯಾಪಾರ–ವ್ಯವಹಾರಗಳು ಹೊಸ ಚೇತರಿಕೆ ಕಂಡು ಧನಲಾಭವಾಗುವುದು. ಬ್ಯಾಂಕ್ ಸಾಲಕ್ಕೆ ಪ್ರಯತ್ನಿಸಿದರೆ ಸಫಲರಾಗುವಿರಿ. ಜಾತ್ರೆ–ತೇರು ಇತ್ಯಾದಿ ಧಾರ್ಮಿಕ ಕಾರ್ಯಗಳಲ್ಲಿ ಭಾಗವಹಿಸಿ ಧನ್ಯತಾ ಭಾವ. ನಿಮ್ಮ ರಾಶಿಯಲ್ಲೇ ಸಾಗಿರುವ ಗ್ರಹಯುದ್ಧದಿಂದಾಗಿ ನೀವು ಎಲ್ಲಾ ವಿಚಾರಗಳಲ್ಲಿ ಜಾಗರೂಕರಾಗಿರಬೇಕು. ಜವಾಬ್ದಾರಿಯಿಂದ ಡ್ರೈವಿಂಗ್ ಮಾಡಿ ಸರ್ಕಾರಕ್ಕೆ ದಂಡ ತೆರುವುದನ್ನು ತಪ್ಪಿಸಿಕೊಳ್ಳಿ.

ಶ್ರೀ ವಿಷ್ಣು ಸಹಸ್ರನಾಮ ಪಠಿಸಿ, ಶುಭಸಂಖ್ಯೆ–2

ಮೀನ (ದಿ,ದು,ಖ,ಝ,ಥ,ತೆ,ದೊ,ಚ,ಚಿ)

ಈ ವಾರ ನೀವು ಹಂತ ಹಂತವಾಗಿ ಮೇಲುಸ್ತರಕ್ಕೆ ಬರಲು ನಿಮ್ಮ ಪರಿಶ್ರಮವೇ ಕಾರಣವಾಗಿದೆ. ಅವರಿವರನ್ನು ನಂಬದಿರಿ. 'ಹಂಗಿನ ಅರಮನೆಗಿಂತ ರಾಗಿ ಅಂಬಲಿ ಲೇಸು' ಎಂಬಂತೆ ನಡೆದುಕೊಳ್ಳಿ. ಹೆಚ್ಚಿನ ಗ್ರಹಗಳು ನಿಮಗೆ ಅನುಕೂಲಕರವಾಗಿ ಇಲ್ಲದ ಕಾರಣ ಹಣಕಾಸಿನ ಸಮಸ್ಯೆ, ಆರೋಗ್ಯ ಸಮಸ್ಯೆಗಳು ಕಾಡುವುದು. ಪಾಲುದಾರಿಕೆ ವ್ಯವಹಾರದಲ್ಲಿ ಒಮ್ಮತದ ಕೊರತೆಯಿಂದ ನಿಮ್ಮ ಯೋಜನೆಗಳು ಗುರಿಮುಟ್ಟದು.

ಶ್ರೀ ದಕ್ಷಿಣಾಮೂರ್ತಿ ಸ್ತೋತ್ರ ಪಠಿಸಿ, ಶುಭಸಂಖ್ಯೆ–3

೯ನೇ ದಿನಕ್ಕೆ ಕಾಲಿಟ್ಟ ಕೆಎಸ್‌ಐಸಿ ಕಾರ್ಖಾನೆ ಉಳಿಸಿ ಹೋರಾಟ

ಸರ್ಕಾರ ಮೊಂಡುತನ ತೋರಿದರೆ ತಿ.ನರಸೀಪುರ ಬಂದ್

ಪ್ರತಿಭಟನಾಕಾರರನ್ನು ಬೆಂಬಲಿಸಿ ಪುರಸಭಾ ಮಾಜಿ ಸದಸ್ಯ ಅರ್ಜುನ್ ಎಚ್ಚರಿಕೆ

ತಿ.ನರಸೀಪುರ, ಫೆ.28– ಕೆಎಸ್‌ಐಸಿ ಕಾರ್ಖಾನೆ ಉಳಿವಿಗಾಗಿ ಕಾರ್ಮಿಕರು, ರಾಜಕೀಯ ಮುಖಂಡರು, ಪರಿಸರವಾದಿಗಳು ನಡೆಸುತ್ತಿರುವ ಪ್ರತಿಭಟನೆಗೆ ಸರ್ಕಾರ ಬಗ್ಗದೇ ಮೊಂಡುತನ ಪ್ರದರ್ಶನ ಮಾಡಿದರೆ ತಿ.ನರಸೀಪುರ ಬಂದ್ ಮಾಡಿ ಉಗ್ರ ಪ್ರತಿಭಟನೆ ಮಾಡಲಾಗುತ್ತದೆ ಎಂದು ಪುರಸಭೆ ಮಾಜಿ ಸದಸ್ಯ ಹಾಗೂ ಚಿತ್ರನಟ ಅರ್ಜುನ್ ರಮೇಶ್ ಎಚ್ಚರಿಕೆ ನೀಡಿದರು.

ಕೆಎಸ್‌ಐಸಿ ಆವರಣದಲ್ಲಿ ಕ್ರೀಡಾಂಗಣ ನಿರ್ಮಾಣಕ್ಕೆ ವಿರೋಧ ವ್ಯಕ್ತಪಡಿಸಿ ಕಾರ್ಖಾನೆಯ ಕಾರ್ಮಿಕರು ಕಳೆದ ಒಂಬತ್ತು ದಿಗಳಿಂದ ಕರ್ತವ್ಯಕ್ಕೆ ಗೈರಾಗಿ ನಡೆಸುತ್ತಿರುವ ಪ್ರತಿಭಟನೆಗೆ ಶುಕ್ರವಾರ ಬೆಂಬಲ ಸೂಚಿಸಿ ಮಾತನಾಡಿದ ಅವರು ಕಳೆದ ಒಂಬತ್ತು ದಿನಗಳಿಂದ ಕಾರ್ಮಿಕರು ಕರ್ತವ್ಯಕ್ಕೆ ಗೈರಾಗಿ ತಮ್ಮ ಭವಿಷ್ಯದ ದೃಷ್ಟಿಯಿಂದ ಕಾರ್ಖಾನೆ ಆವರಣದಲ್ಲಿ ಕ್ರೀಡಾಂಗಣ ನಿರ್ಮಾಣ ಮಾಡುವುದನ್ನು ವಿರೋಧಿಸಿ ಪ್ರತಿಭಟನೆ ಮಾಡುತ್ತಿದ್ದಾರೆ. ಆದರೆ ಈವರೆಗೆ ಸರ್ಕಾರದಿಂದ ಯಾವುದೇ ಪ್ರತಿಕ್ರಿಯೆ ವ್ಯಕ್ತವಾಗಿಲ್ಲ ಎಂದರು.

> ಸರ್ಕಾರ ಮೊಂಡುತನ ಪ್ರದರ್ಶನ ಮಾಡುತ್ತಿರುವಂತೆ ಕಾಣುತ್ತಿದೆ. ಒಂದು ವೇಳೆ ಶೀಘ್ರದಲ್ಲೇ ಸರ್ಕಾರ ತನ್ನ ನಿಲುವು ಪ್ರಕಟಿಸಬೇಕು,ಇಲ್ಲದಿದ್ದಲ್ಲಿ ತಿ.ನರಸೀಪುರ ಬಂದ್ ಮಾಡಿ ಉಗ್ರ ಪ್ರತಿಭಟನೆ ಮಾಡಲಾಗುತ್ತದೆ. ನಾಳೆಯಿಂದಲೇ ಪ್ರತಿ ವರ್ತಕರನ್ನು ಭೇಟಿ ಮಾಡಿ ಬಂದ್ ಮಾಡಲು ಸಹಕಾರ ನೀಡುವಂತೆ ಕೈ ಮುಗಿದು ಕೇಳುತ್ತೇನೆ.ಕಾಲಿಗೆ ಬಿದ್ದಾದರೂ ಬಂದ್ ಮಾಡಿಸುವ ಕೆಲಸವನ್ನು ಆದಷ್ಟು ಬೇಗ ಮಾಡುತ್ತೇನೆ –ಅರ್ಜುನ್

ಕಾರ್ಮಿಕರೆಲ್ಲರಿಂದ ಉಪವಾಸ ಸತ್ಯಾಗ್ರಹ: ಕ್ರೀಡಾಂಗಣ ನಿರ್ಮಾಣ ವಿರೋಧಿಸಿ ಈಗ ಇಬ್ಬರು ಮಾತ್ರವೇ ಉಪವಾಸ ಸತ್ಯಾಗ್ರಹ ಮಾಡಿದ್ದೇವೆ. ಸರ್ಕಾರ ಹೀಗೆಯೇ ಮೊಂಡುತನ ಪ್ರದರ್ಶಿಸಿದರೆ ಕಾರ್ಖಾನೆಯ ಮಹಿಳಾ ಕಾರ್ಮಿಕರು ಸೇರಿದಂತೆ ಎಲ್ಲರೂ ಆಮರಣಾಂತ ಉಪವಾಸ ಸತ್ಯಾಗ್ರಹ ಮಾಡುವ ಮೂಲಕ ಸರ್ಕಾರಕ್ಕೆ ಎಚ್ಚರಿಕೆ ಕೊಡುವ ಕೆಲಸ ಮಾಡುತ್ತೇವೆ ಎಂದರು.

ತಾಕತ್ತಿದ್ದರೆ ಉಪವಾಸ ಸತ್ಯಾಗ್ರಹ ಮಾಡಿ: ಉಪವಾಸ ಸತ್ಯಾಗ್ರಹದ ಕುರಿತು ಮತ್ತೊಬ್ಬ ದಲಿತ ಮುಖಂಡ ಹೇಳಿಕೆ ನೀಡಿ ಬಿಜೆಪಿಯವರು ಮಂಗನಾಟ ಆಡಿ ಜನರನ್ನು ರಂಜಿಸುತ್ತಿದ್ದಾರೆ ಎಂದಿದ್ದಾರೆ. ಬಿಜೆಪಿಯವರು ಮನುಷ್ಯರಲ್ವಾ, ಬಿಜೆಪಿಯವರಿಗೆ ಹೊಟ್ಟೆ ಹಸಿವಾಗಲ್ವ, ಮೂರು ದಿನದಿಂದ ನೀರು ಕೂಡ ಕುಡಿಯದೇ ಉಪವಾಸ ಇದ್ದಾರಲ್ಲ. ಅದು ಕಾಣಲಿಲ್ವ, ನಿಮಗೆ ತಾಕತ್ತಿದ್ದರೆ ಇಲ್ಲಿ ಬಂದು ಉಪವಾಸ ಮಾಡಿ ತೋರಿಸಿ ನೋಡೋಣ ಎಂದು ಕಿಡಿಕಾರಿದ ರಮೇಶ್ ಇಲ್ಲಿ ಯಾರಾದ್ರು ಒಳ್ಳೆಯ ಕೆಲಸ ಮಾಡುತ್ತಿದ್ದಾರೆ ಎಂದರೆ ಅದನ್ನು ಸಹಿಸೋದಿಲ್ಲ ಎಂದರು.

ಅಡ್ಡಗೋಡೆ ಮೇಲೆ ದೀಪ ಇಟ್ಟಂತೆ: ಮತ್ತೊಬ್ಬರಿದ್ದಾರೆ ಸಮಾಜ ಸೇವಕ ಎಂಬ ಹೆಸರಲ್ಲಿ ರೋಲ್ ಕಾಲ್ ಮಾಡುತ್ತಾ ಅಡ್ಡಗೋಡೆ ಮೇಲೆ ದೀಪ ಇಟ್ಟಂತೆ ಮಾತನಾಡುತ್ತಾರೆ. ಈ ಕಡೆ ಕ್ರೀಡಾಂಗಣದ ಪರವಾಗಿದ್ದಾನೋ ಅಥವಾ ಕೆಎಸ್‌ಐಸಿ ಪರವಾಗಿದ್ದಾನೋ ಎರಡನ್ನೂ ಹೇಳದೇ ಬ್ಯಾಲೆನ್ಸ್ ಆಗಿ ಮಾತಾಡ್ತಾರೆ. ಈ ವ್ಯಕ್ತಿಯ ಇತಿಹಾಸ ಎಲ್ಲ ಗೊತ್ತಿದೆ, ನೀವು ಎಲ್ಲೆಲ್ಲಿ ಎಷ್ಟೆಷ್ಟು ರೋಲ್ ಕಾಲ್ ಮಾಡಿದ್ದೀರಾ ಬನ್ನಿ ಹೇಳ್ತೀನಿ ಎಂದು ಟೀಕೆ ವ್ಯಕ್ತಪಡಿಸಿದರು.

ಪ್ರಧಾನಿಯೇ ಬಂದರೂ ಕಾರ್ಖಾನೆ ಮುಚ್ಚಲು ಬಿಡಲ್ಲ: ಕರ್ನಾಟಕ ರಾಜ್ಯ ರೈತ ಕಲ್ಯಾಣ ಸಂಘದ ಅಧ್ಯಕ್ಷ ಚಂದನ್ ಗೌಡ ಮಾತನಾಡಿ ಮೈಸೂರು ಮಹಾರಾಜರು ಸ್ಥಾಪಿಸಿದ ಮೈಸೂರು ಸಿಲ್ಕ್ ಸೀರೆ ತಯಾರಿಸಲು ನೂಲು ತೆಗೆಯುವ ಘಟಕವನ್ನು ಮುಚ್ಚಲು ಅವಕಾಶ ನೀಡುವುದಿಲ್ಲ. ಮುಖ್ಯಮಂತ್ರಿಯಲ್ಲ, ಪ್ರಧಾನಮಂತ್ರಿಯೇ ಬಂದು ಹೇಳಿದರು. ಸಾವಿರಾರು ಕಾರ್ಮಿಕರು ಮತ್ತು ಅವರ ಕುಟುಂಬಗಳಿಗೆ ಅನ್ನ ನೀಡುತ್ತಿರುವ ಸಂಸ್ಥೆಯನ್ನು ಯಾವುದೇ ಕಾರಣಕ್ಕೂ ಮುಚ್ಚಲು ಬಿಡುವುದಿಲ್ಲ.

ಕಾರ್ಮಿಕರೆಲ್ಲರೂ ದೃತಿಗೆಡದೇ ಧೈರ್ಯದಿಂದಿರಿ, ನಿಮ್ಮೊಂದಿಗೆ ನಾವು ಸದಾ ಕಾಲ ಬೆಂಗಾವಲಾಗಿ ಇರುತ್ತೇವೆ ಎಂದು ಆತ್ಮ ಸ್ಥೈರ್ಯ ತುಂಬಿದರು. ಕಾರ್ಮಿಕರಲ್ಲಿ ಕ್ರೀಡಾಂಗಣ ನಿರ್ಮಾಣ ವಿರೋಧದ ಬಗ್ಗೆ ಗಟ್ಟಿ ನಿಲುವಿರಬೇಕು, ಆಗ ಮಾತ್ರವೇ ಕಾರ್ಮಿಕರ ಹೋರಾಟಕ್ಕೆ ಜಯ ಸಿಗಲಿದೆ. ಮುಖ್ಯಮಂತ್ರಿಗಳಿಗೆ ಕ್ರೀಡಾಂಗಣ ನಿರ್ಮಾಣದಿಂದ ಆಗಬಹುದಾದ ತೊಂದರೆಗಳ ಬಗ್ಗೆ ಪೂರ್ಣ ಪ್ರಮಾಣದ ಮಾಹಿತಿ ಇಲ್ಲ ಎನಿಸುತ್ತದೆ, ಹಾಗಾಗಿ ಪರಿಶೀಲನೆ ನಂತರ ಮುಖ್ಯಮಂತ್ರಿಯವರೇ ಕ್ರೀಡಾಂಗಣ ನಿರ್ಮಾಣ ಪ್ರಕ್ರಿಯೆಯನ್ನು ಕೈ ಬಿಡುತ್ತಾರೆ ಎಂಬ ವಿಶ್ವಾಸ ನಮಗಿದೆ ಎಂದರು. ನಾಳಿನ ನಿಮ್ಮಮುಂದಿನ ಭವಿಷ್ಯಕ್ಕೋಸ್ಕರ ನಿಮ್ಮ ಬದುಕಿಗೆ ಹೆಗಲು ಕೊಡುವವರನ್ನು ಮುಂಬರುವ ಚುನಾವಣೆಯಲ್ಲಿ ಆಯ್ಕೆ ಮಾಡಿಕೊಂಡರೇ ನಿಮ್ಮ ಭವಿಷ್ಯ ಸುಂದರವಾಗಿರುತ್ತದೆ ಆ ನಿಟ್ಟಿನಲ್ಲಿ ಕಾರ್ಮಿಕರು ದೃಢ ಹಾಗು ಕಠಿಣ ನಿರ್ಧಾರ ತೆಗೆದುಕೊಳ್ಳಬೇಕಾಗುತ್ತದೆ ಎಂದು ಸಲಹೆ ನೀಡಿದರು.

ಈ ವೇಳೆ ಪರಿಸರ ಬಳಗದ ರಾಜ್ಯ ಕಾರ್ಯದರ್ಶಿ ಪರಶುರಾಮೇಗೌಡ, ಪರಿಸರ ಬಳಗ ಮತ್ತು ಗ್ರಾಹಕ ಪರಿಷತ್ತಿನ ಕಾರ್ಯದರ್ಶಿ ಪ್ರಭಾ ನಂದೀಶ್, ರೈತ ಮುಖಂಡ ಕಿರಗಸೂರು ಶಂಕರ್, ಪರಶುರಾಮೇಗೌಡ, ಸಿ.ಡಿ.ವೆಂಕಟೇಶ್, ಪ್ರಸಾದ್ ನಾಯಕ್, ಪ್ರದೀಪ್, ಸೇರಿದಂತೆ ರೈತ ಮುಖಂಡರು, ಪರಿಸರ ಬಳಗದ ಸದಸ್ಯರು ಹಾಜರಿದ್ದರು.



ತಿ.ನರಸೀಪುರದಲ್ಲಿ ಕೆಎಸ್‌ಐಸಿ ಉಳಿಸಿ ಹೋರಾಟಕ್ಕೆ ಪುರಸಭೆ ಮಾಜಿ ಸದಸ್ಯ ಅರ್ಜುನ್ ರಮೇಶ್, ಕರ್ನಾಟಕ ರಾಜ್ಯ ರೈತ ಕಲ್ಯಾಣ ಸಂಘದ ಅಧ್ಯಕ್ಷ ಚಂದನ್ ಗೌಡ ಸೇರಿದಂತೆ ಪರಿಸರವಾದಿಗಳು ಬೆಂಬಲ ಸೂಚಿಸಿದರು.

ಕಾಣದ ದೇವ್ವಗಳು ಜಗದಲ್ಲಿಲ್ಲ, ಕಾಣುವ ಮನುಷ್ಯನೇ ದೇವ್ವ

ರಾಷ್ಟ್ರೀಯ ವಿಜ್ಞಾನ ದಿನಾಚರಣೆಯಲ್ಲಿ ಹುಲಿಕಲ್ ನಟರಾಜ್ ಅಭಿಪ್ರಾಯ

ಹೆಚ್.ಡಿ.ಕೋಟೆ : ವಿದ್ಯಾವಂತರಾದರೆ ಸಾಲದು ಬುದ್ದಿವಂತರಾಗಬೇಕು, ಬುದ್ದಿವಂತರಾದರೆ ಸಾಲದು, ಪ್ರಜ್ಞಾವಂತರಾಗಬೇಕು ಎಂದ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ಸದಸ್ಯ ಹುಲಿಕಲ್ ನಟರಾಜು, ಕಾಣದ ದೆವ್ವಗಳು ಈ ಜಗದಲ್ಲಿಲ್ಲ, ಕಾಣುವ ಮನುಷ್ಯರೇ ದೆವ್ವಗಳು. ಇವುಗಳ ಹಾವಳಿಯಿಂದ ಈ ರಾಷ್ಟ್ರವನ್ನು ಕಾಪಾಡುವ ಸ್ಥಿತಿ ಬಂದೊದಗಿದೆ ಎಂದರು.

ಪಟ್ಟಣದ ಅಂಬೇಡ್ಕರ್ ಭವನದಲ್ಲಿ ತಾಲೂಕು ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿ, ಶಾಲಾ ಶಿಕ್ಷಣ ಇಲಾಖೆ ಮತ್ತು ಸರಗೂರಿನ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ವತಿಯಿಂದ ಆಯೋಜಿಸಲಾಗಿದ್ದ ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಉದ್ದೇಶಿಸಿ ಮಾತನಾಡಿದರು.

ಪಂಚಾಂಗವನ್ನು ಬಿಟ್ಟು ಪಂಚ ಅಂಗಗಳ ಕಡೆ ಗಮನಕೊಡಬೇಕು, ಮನೆಯ ವಾಸ್ತು ಬಗ್ಗೆ ಚಿಂತಿಸದೇ, ಮನಸ್ಸಿನ ವಾಸ್ತು ಸ್ಥಿತಿಯನ್ನು ಅರಿತುಕೊಂಡಾಗ ಮನುಷ್ಯನಲ್ಲಿರುವ ಮೂಡನಂಬಿಕೆ ದೂರವಾಗಲಿದೆ ಎಂದ ಅವರು ಮೂಡನಂಬಿಕೆಯಿಂದ ಹಿರಿಯರು ಹುಣಸೇ ಮರದ ಬಳಿ ಹೋಗದಂತೆ ಸೂಚಿಸುತ್ತಾರೆ. ಅರಳಿ ಅಥವಾ ಆಲದ ಮರಗಳನ್ನು ಸುತ್ತುವಂತೆ ಸೂಚಿಸುತ್ತಾರೆ. ಹುಣಸೇ ಮರದಲ್ಲಿ ಆಮ್ಲಜನಕ ಬಿಡುಗಡೆ ಪ್ರಮಾಣ ಕಡಿಮೆ ಇರುತ್ತದೆ. ಅದೇ ರೀತಿ ಅರಳಿ ಮತ್ತು ಆಲದ ಮರದಲ್ಲಿ ಆಮ್ಲಜನಕವನ್ನು ಹೆಚ್ಚಿನ ಪ್ರಮಾಣದಲ್ಲಿ ಬಿಡುಗಡೆ ಮಾಡುತ್ತದೆ. ಆದ್ದರಿಂದ ಹಿರಿಯರು ಮೇಲಿನ ಸೂಚನೆ ನೀಡುತ್ತಾರೆ ಎಂದರು.



ರಾಷ್ಟ್ರೀಯ ವಿಜ್ಞಾನ ದಿನಚರಣೆ ಕಾರ್ಯಕ್ರಮ ಉದ್ಘಾಟಿಸಿದ ಸೌಮ್ಯ ಅನೀಲ್ ಚಿಕ್ಕಮಾದು.

ಕ್ಷೇತ್ರ ಶಿಕ್ಷಣಾಧಿಕಾರಿ ಸಿ.ಎನ್. ರಾಜು ಮಾತನಾಡಿ ಹೆಚ್.ಡಿ.ಕೋಟೆ ತಾಲೂಕು ಬಹುಪಾಲು ಕಾಡಂಚಿನಿಂದ ವಿದ್ಯಾರ್ಥಿಗಳು ವಿದ್ಯಾಭ್ಯಾಸಕ್ಕೆ ಪಟ್ಟಣಕ್ಕೆ ಆಗಮಿಸುತ್ತಿದ್ದು ಇಂತಹ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣವನ್ನು ನೀಡುವತ್ತ ನಮ್ಮ ಶಿಕ್ಷಕರು ಪಣ ತೊಟ್ಟಿದ್ದಾರೆ ಎಂದರು.

ಶಾಸಕ ಅನಿಲ್ ಚಿಕ್ಕಮಾದು ಅವರು ವಿಜ್ಞಾನದ ಉತ್ತಮ ಮಾದರಿಗಳಿಗೆ ಮೊದಲನೇ ಬಹುಮಾನ 10000, ಎರಡನೆಯ ಬಹುಮಾನ 7500 3ನೇ ಬಹುಮಾನ 5000 ಬಹುಮಾನವಾಗಿ ನೀಡಲಾಯಿತು.

ಇದೇ ಸಂದರ್ಭದಲ್ಲಿ ತಾಲೂಕಿನ 100ಕ್ಕೂ ಹೆಚ್ಚು ಶಾಲೆಯ ವಿದ್ಯಾರ್ಥಿಗಳು ತಮ್ಮ ಶಿಕ್ಷಕರ ಮಾರ್ಗದರ್ಶನದಲ್ಲಿ ವಿವಿಧ ವಿಜ್ಞಾನದ ಮಾದರಿಗಳನ್ನು ಪ್ರದರ್ಶಿಸಿದರು.

ಉತ್ತಮ ವಿಜ್ಞಾನದ ಮಾದರಿ ಮಾಡಿದ ಹೊನ್ನಮ್ಮನ ಕಟ್ಟೆ ಗ್ರಾಮದ ಸೈಂಟ್ ಥಾಮಸ್ ಪ್ರಥಮ ಬಹುಮಾನ 10 ಸಾವಿರ, ದ್ವಿತೀಯ ಬಹುಮಾನ ಹಿರೇಹಳ್ಳಿ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ, 7500,ರೂ. ತೃತೀಯ ಬಹುಮಾನ ಹಿಟ್ನಾ ಕಾಲೋನಿಯ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗೆ 5,000 ಬಹುಮಾನ ನೀಡಲಾಯಿತು.

ಶಿಕ್ಷಕರಿಗೆ ಕ್ವಿಜ್‌ಗಳನ್ನು ನಡೆಸಿ ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಮುಖಂಡರಾದ ಎಚ್.ಸಿ.ನರಸಿಂಹಮೂರ್ತಿ, ಜೀವಿಕಾ ಬಸವರಾಜು, ಬಿಆರ್‌ಸಿ ಕೃಷ್ಣಯ್ಯ, ನಾರಾಯಣಸ್ವಾಮಿ, ಜಿನ್ನಹಳ್ಳಿ ರಾಜನಾಯಕ, ಕನ್ನಡ ಪ್ರಮೋದ್, ಸತೀಶ್, ಹರ್ಷ, ಜಯಪ್ರಕಾಶ್, ಚಿಕ್ಕದೇವು, ಚಂದ್ರಶೇಖರ್, ಕಿರಣ್, ಪ್ರಸನ್ನ, ಪದ್ಮರಾಜು, ಪ್ರಮೋದ್, ಪ್ರಕಾಶ್, ನಾಗರಾಜು, ಮಹೇಂದ್ರ, ಮಹೇಶ್, ಪ್ರಸನ್ನ, ಮಹದೇವಸ್ವಾಮಿ, ವಿನೋದ್, ಗಿರೀಶ್ ಮೂರ್ತಿ, ಮಹದೇವು, ರಾಮಮೂರ್ತಿ, ಶಾಲಾ ಶಿಕ್ಷಕರು ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಹಾಜರಿದ್ದರು.

ಸನ್ಮಾನ



ತಿ.ನರಸೀಪುರ ತಾಲೂಕಿನ ಆಲಗೂಡು ಗ್ರಾಮದಲ್ಲಿ ಹಿರಿಯ ಶಸ್ತ್ರ ಚಿಕಿತ್ಸಕ ಡಾ.ರೇವಣ್ಣ ಹಾಗೂ ಬಿಜೆಪಿ ಪ್ರಧಾನ ಕಾರ್ಯದರ್ಶಿಯಾಗಿ ನೇಮಕಗೊಂಡ ಡಾ.ಮಲ್ಲಿಕಾರ್ಜುನ ಸ್ವಾಮಿ ಅವರನ್ನು ಯುವ ಮುಖಂಡ ಪ್ರದೀಪ್ ಸನ್ಮಾನಿಸಿದರು. ಎಸ್ಸಿ ಮೋರ್ಚ ಕಾರ್ಯದರ್ಶಿ ಅ ಲಗೋಡು ಮಂಜು, ಮುದ್ದುಕೃಷ್ಣ, ಕುಮಾರ್, ಮಹೇಶ್ ಇದ್ದಾರೆ.

ರಸ್ತೆ ಅಗಲೀಕರಣ ನೆಪದಲ್ಲಿ ಶಾಲೆ ನೆಲಸಮ ಖಂಡಿಸಿ

ಮಾಜಿ ಶಾಸಕ ಮಂಜುನಾಥ್ ನೇತೃತ್ವದಲ್ಲಿ ಪ್ರತಿಭಟನೆ

ಹುಣಸೂರು: ನಗರದ ಕಲ್ಕುಣಿಕೆ ಸರ್ಕಲ್‌ನಲ್ಲಿರುವ ಐತಿಹಾಸಿಕ ಸರ್ಕಾರಿ ಶಾಲೆಯನ್ನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ಅವೈಜ್ಞಾನಿಕವಾದ ರಸ್ತೆ ಅಭಿವೃದ್ಧಿ ನೆಪದಲ್ಲಿ ನೆಲಸಮ ಮಾಡಿ ರಸ್ತೆ ಅಗಲಿಕರಣಕ್ಕೆ ಮುಂದಾಗಿರುವುದನ್ನು ಖಂಡಿಸಿ ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಅವರು ಕಲ್ಕುಣಿಕೆ ಶಾಲಾಭಿವೃದ್ಧಿ ಸಮಿತಿ, ಪೋಷಕರ ಸಮಿತಿ, ಹಿರಿಯ ವಿದ್ಯಾರ್ಥಿಗಳ ಸಮಿತಿ ಹಾಗೂ ಗ್ರಾಮಸ್ಥರುಗಳೊಂದಿಗೆ ಪ್ರತಿಭಟನೆ ನಡೆಸಿದರು.

ಈ ವೇಳೆ ಹೆಚ್.ಪಿ.ಮಂಜುನಾಥ್ ಮಾತನಾಡಿ ಸ್ವಾತಂತ್ರ್ಯ ಪೂರ್ವದಲ್ಲಿ ಆರಂಭಗೊಂಡ ಕಲ್ಕುಣಿಕೆ ಸರ್ಕಲ್ ಸರ್ಕಾರಿ ಶಾಲೆಯು ಶತಮಾನೋತ್ಸವದ ಅಂಚಿನಲ್ಲಿದೆ. ಈ ಶಾಲೆಯಲ್ಲಿ ಕಲಿತ ಸಾವಿರಾರು ಮಂದಿ ವಿದ್ಯಾರ್ಥಿಗಳು ಉನ್ನತ ಮಟ್ಟಕ್ಕೇರಿದ್ದಾರೆ. ಈ ಶಾಲೆಯು ಭಾಗದ ಜನರ ಅಸ್ಮಿತೆಯಾಗಿದ್ದು ಇದನ್ನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು, ಅವೈಜ್ಞಾನಿಕವಾಗಿ ರಸ್ತೆ ಅಭಿವೃದ್ಧಿ ನೆಪದಲ್ಲಿ ಶಾಲೆ ತೆರವು ಮಾಡಲು ಹೊರಟಿ ರುವುದು ಖಂಡನೀಯ. ಈ ಕೂಡಲೆ ಅವೈಜ್ಞಾನಿಕವಾಗಿ ಕೂಡಿರುವ ರಸ್ತೆ ಅಗಲಿಕರಣ ಕಾಮಗಾರಿಯನ್ನು ನಿಲ್ಲಿಸಬೇಕು. ಇಲ್ಲದಿದ್ದರೆ ಶಾಲಾಭಿವೃದ್ಧಿ ಸಮಿತಿ, ಪೋಷಕರ ಸಮಿತಿ, ಹಿರಿಯ ವಿದ್ಯಾರ್ಥಿಗಳ ಸಮಿತಿ ಹಾಗೂ ಗ್ರಾಮಸ್ಥರು ಗಳೊಂದಿಗೆ ಉಗ್ರ ಪ್ರತಿಭಟನೆ ನಡೆಸಲಾಗುವುದೆಂದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರಿಗೆ ಎಚ್ಚರಿಕೆ ನೀಡಿ ತಾಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೂಲಕ ಮನವಿ ಪತ್ರ ಸಲ್ಲಿಸಲಾಯಿತು.



ಈ ವೇಳೆ ಶಾಲಾ ಅಭಿವೃದ್ಧಿ ಸಮಿತಿಯವರು, ಪೋಷಕರು ಹಿರಿಯ ವಿದ್ಯಾರ್ಥಿಗಳು ಹಾಗೂ ಗ್ರಾಮಸ್ಥರು ಭಾಗವಹಿಸಿದ್ದರು

ಅರ್ಜುನಹಳ್ಳಿ ರಾಜಯ್ಯ, ಗೌರಮ್ಮ ದಂಪತಿಗೆ ನುಡಿ ನಮನ

ಕೆ.ಆರ್.ನಗರ: ಕೆ.ಆರ್.ನಗರ ತಾಲೂಕಿನ ಅರ್ಜುನಹಳ್ಳಿ ಗ್ರಾಮದ ಪ್ರಗತಿಪರ ಹೋರಾಟಗಾರ, ಹಿರಿಯ ದಲಿತ ಮುಖಂಡ ಹಾಗೂ ಜಿ.ಪಂ. ಮಾಜಿ ಸದಸ್ಯ ಅರ್ಜುನಹಳ್ಳಿ ರಾಜಯ್ಯ ಮತ್ತು ಅವರ ಧರ್ಮಪತ್ನಿ ಗೌರಮ್ಮ ಅವರುಗಳಿಗೆ ನುಡಿ ನಮನ ಕಾರ್ಯಕ್ರಮವನ್ನು ನಾಳೆ (ಭಾನುವಾರ) ಬೆಳಗ್ಗೆ 11 ಗಂಟೆಗೆ ಅರ್ಜುನಹಳ್ಳಿ ಗ್ರಾಮದ ಸಂತೆ ಮೈದಾನದ ಎಪಿಎಂಸಿ ಆವರಣದಲ್ಲಿ ಅಯೋಜಿಸಲಾಗಿದೆ.



ದಿವ್ಯ ಸಾನಿಧ್ಯವನ್ನು ಮೈಸೂರಿನ ಗಾಂಧಿನಗರದ ಉರಿಲಿಂಗ ಪೆದ್ದಿ ಮಠದ ಶ್ರೀಜ್ಞಾನಪ್ರಕಾಶ ಸ್ವಾಮಿಜಿ ವಹಿಸಲಿದ್ದು ಶಾಸಕ. ಡಿ.ರವಿಶಂಕರ್ ಅಧ್ಯಕ್ಷತೆ ವಹಿಸಲಿದ್ದಾರೆ.

ತಾಲೂಕಿನ ಸಮಸ್ತ ಜನತೆ, ರಾಜಕೀಯ ಮುಖಂಡರು ಹಾಗೂ ದಲಿತ ಮುಖಂಡರ ನೇತೃತ್ವದಲ್ಲಿ ಈ ನುಡಿ ನಮನ ಕಾರ್ಯಕ್ರಮ ಜರುಗಲಿದೆ ಎಂದು ದಿವಂಗತ ಅರ್ಜುನಹಳ್ಳಿ ರಾಜಯ್ಯ ಪುತ್ರ ಮೈಸೂರು ಜಿಲ್ಲಾ ಕಾಂಗ್ರೆಸ್ ಕಾನೂನು ಸಮಿತಿ ಅಧ್ಯಕ್ಷ ಹಾಗೂ ವಕೀಲರಾದ ಎ.ಆರ್.ಕಾಂತರಾಜ್ ತಿಳಿಸಿದ್ದಾರೆ.

ನಮ್ಮ ತಂದೆ ಈಡೀ ದಲಿತ ಸಮುದಾಯವನ್ನೇ ತನ್ನ ಕುಟುಂಬವನ್ನಾಗಿಸಿ ಕೊಂಡು ಸಂಘಟನೆ ಮತ್ತು ಹೋರಾಟದ ಮೂಲಕ ದನಿ ಇಲ್ಲದ ದಮನಿತ ಸಮುದಾಯಕ್ಕೆ ದನಿಯಾಗಿದ್ದವರು ಹಾಗಾಗಿ ಜಿಲ್ಲೆಯ ಮತ್ತು ದಲಿತ ಸಂಘಟನೆಗಳ ಮುಖಂಡರು ಈ ನುಡಿ ನಮನ ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸುವಂತೆ ಮನವಿ ಮಾಡಿದ್ದಾರೆ

ಶ್ರೀ ಗುಂಜಾ ನರಸಿಂಹಸ್ವಾಮಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸುವ ಮೂಲಕ ಬಿಎಸ್‌ವೈ ಬರ್ತ್‌ಡೇ

ತಿ.ನರಸೀಪುರ, ಫೆ.28– ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ 84ನೇ ವರ್ಷದ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಪಟ್ಟಣದ ಶ್ರೀಗುಂಜಾನರಸಿಂಹ ಸ್ವಾಮಿ ದೇವಸ್ಥಾನದಲ್ಲಿ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಉಪಸ್ಥಿತಿಯಲ್ಲಿ ವಿಶೇಷ ಪೂಜೆಯೊಂದಿಗೆ ಅರ್ಚನೆ ಮಾಡಿಸಿ ಆಯುಸ್ಸು ವೃದ್ದಿಗೆ ಪ್ರಾರ್ಥಿಸಲಾಯಿತು.

ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರಿಗೆ ಭಗವಂತ ಉತ್ತಮ ಆರೋಗ್ಯ ನೀಡುವುದರ ಜೊತೆಗೆ ಅವರ ಕುಟುಂಬದ ಕುಡಿ ಬಿ.ವೈ.ವಿಜಯೇಂದ್ರ ಅವರ ರಾಜಕೀಯ ಜೀವನ ಉತ್ತಮವಾಗಿರಲಿ ಎಂದು ಕಾರ್ಯಕರ್ತರು ಪ್ರಾರ್ಥನೆ ಸಲ್ಲಿಸಿದರು.

ಈ ವೇಳೆ ಪುರಸಭೆ ಮಾಜಿ ಸದಸ್ಯ ಎಸ್.ಕೆ.ಕಿರಣ್ ಮಾತನಾಡಿ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ 84ನೇ ಹುಟ್ಟುಹಬ್ಬದ ಶುಭಾಶಯಗಳನ್ನು ಕೋರುತ್ತಾ ದೇವರು ಉತ್ತಮ ಆರೋಗ್ಯ ಐಶ್ವರ್ಯ ಕರುಣಿಸಲಿ ಜೊತೆಗೆ ವಿಜಯೇಂದ್ರ ಅವರ ರಾಜಕೀಯ ಭವಿಷ್ಯ ಉಜ್ವಲಗೊಳ್ಳಲಿ, ಕರ್ನಾಟಕದಲ್ಲಿ ಬಿಜೆಪಿ ಸರ್ಕಾರವನ್ನು ಅಧಿಕಾರಕ್ಕೆ ತಂದು ರಾಜ್ಯದ ರೈತರಿಗೆ ಮತ್ತು ಬಡವರ ಏಳಿಗೆಗೆ ಶ್ರಮಿಸುವ ಶಕ್ತಿಯನ್ನು ಭಗವಂತ ಅವರಿಗೆ ಕರುಣಿಸಲಿ ಎಂದು ಎಲ್ಲರೂ ಪ್ರಾರ್ಥಿಸಿದ್ದೇವೆ ಎಂದರು.



ತಿ.ನರಸೀಪುರ ಪಟ್ಟಣದ ಶ್ರೀ ಗುಂಜಾನರಸಿಂಹಸ್ವಾಮಿ ದೇವಸ್ಥಾನದಲ್ಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ನಡೆದ ವಿಶೇಷ ಪೂಜಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಅವರನ್ನು ಪುರಸಭೆ ಮಾಜಿ ಸದಸ್ಯ ಎಸ್.ಕೆ.ಕಿರಣ್ ಸನ್ಮಾನಿಸಿದರು.

ಜಿಲ್ಲಾಧ್ಯಕ್ಷರಾದ ಕುಂಬರಹಳ್ಳಿ ಸುಬ್ಬಣ್ಣ, ತಾಲೂಕು ಅಧ್ಯಕ್ಷ ಸತ್ಯಪ್ಪ, ಪುರಸಭೆ ಮಾಜಿ ಸದಸ್ಯ ಎಸ್.ಕೆ.ಕಿರಣ್, ಕೆ.ಸಿ.ಲೋಕೇಶ್ ನಾಯಕ್, ಟೌನ್ ಅಧ್ಯಕ್ಷ ಲೋಕೇಶ್, ಬನ್ನೂರು ರಾಮಚಂದ್ರ ದಾಸಯ್ಯ, ಮಾಜಿ ಎಂಎಲ್ಸಿ ರಮೇಶ್, ಪುರಸಭಾ ಸದಸ್ಯರಾದ ಅರ್ಜುನ್ ರಮೇಶ್, ಅನಿಲ್ ಕುಮಾರ್, ಮಹದೇವಶೆಟ್ಟಿ, ಕರೋಹಟ್ಟಿ ರಾಜಶೇಖರ್, ಬೆನಕನಹಳ್ಳಿ ವಿಜಯ ಕುಮಾರ್ , ಸಿಡಿ ವೆಂಕಟೇಶ್ ಸೇರಿದಂತೆ ಮತ್ತಿತರರಿದ್ದರು.

ಹಾಲು ತರಲೆಂದು ಹೊರ ಹೋದ ವ್ಯಕ್ತಿ ನಾಪತ್ತೆ

ಮೈಸೂರು: ಮೈಸೂರಿನ ಮೇಟಗಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಆಶ್ರಮವೊಂದರ ನಿವಾಸಿ ವಿಶಾಲ್ ಎಂಬುವವರು ಹಾಲು ತರಲೆಂದು ಆಶ್ರಮದಿಂದ ಹೊರ ಹೋದವರು ಆಶ್ರಮಕ್ಕೆ ಹಿಂತಿರುಗದೆ ನಾಪತ್ತೆಯಾಗಿದ್ದಾರೆ. ನಾಪತ್ತೆಯಾದ ವಿಶಾಲ್ 40 ವರ್ಷದವರಾಗಿದ್ದು, ದುಂಡು ಮುಖ, ಸಾಧಾರಣ ಮೈಕಟ್ಟು, ಗೋಧಿ ಮೈಬಣ್ಣ, ಕಪ್ಪು ಬಣ್ಣದ ತಲೆಗೂದಲು ಉಳ್ಳವರಾಗಿದ್ದು, ಕಾಣೆಯಾದ ವೇಳೆ ನೀಲಿ ಬಣ್ಣದ ಟೀ ಶರ್ಟ್, ಹಸಿರು ಬಣ್ಣದ ನೈಟ್ ಪ್ಯಾಂಟ್ ಧರಿಸಿರುತ್ತಾರೆ. ಇವರ ಬಗ್ಗೆ ಸುಳಿವು ಸಿಕ್ಕಲ್ಲಿ ಮೇಟಗಳ್ಳಿ ಪೊಲೀಸ್ ಠಾಣೆ ದೂರವಾಣಿ ಸಂಖ್ಯೆ 0821–2418339, 2148315, 2148115 ಮೂಲಕ ಮಾಹಿತಿ ನೀಡುವಂತೆ ಪ್ರಕಟಣೆ ಕೋರಿದೆ.



ಕಾಮಿಡಿ ಕಿಲಾಡಿ ದಂಪತಿಗೆ ಸನ್ಮಾನ



ಕಂಪಲಾಪುರ ಸಮೀಪದ ರಾಮದೂರಿನಲ್ಲಿ ಇತ್ತೀಚಿಗೆ ಸರಳ ಸಂಸ್ಕೃತಿ ಉತ್ಸವ, ಬಸವತತ್ವ ಸಮಾವೇಶ ಹಾಗೂ ಜಯದೇವ ಸಮುದಾಯ ಭವನ ಉದ್ಘಾಟನಾ ಕಾರ್ಯಕ್ರಮದಲ್ಲಿ ಕಾಮಿಡಿ ಕಿಲಾಡಿಗಳು ಖ್ಯಾತಿಯ ಭುವನೇಶ್ ಹಾಸನ್ ದಂಪತಿಗಳನ್ನು ಮುರುಘಾ ಮಠದ ಮೋಕ್ಷಾಪತಿ ಸನ್ಮಾನಿಸಿದರು. ನಟ ಕುಮಾರ್ ಅರಸೇಗೌಡ, ಜೂ.ದ್ವಾರಕೀಶ್ ಇನ್ನಿತರರು ಇದ್ದರು.

ಶಿಕ್ಷಣದಿಂದ ಸಾಮಾಜಿಕ ಬದಲಾವಣೆ



ಸರಗೂರು: ಶಿಕ್ಷಣವು ಬದುಕನ್ನು ಬದಲಾಯಿಸುತ್ತದೆ. ಆ ಮೂಲಕ, ಸಾಮಾಜಿಕ ಬದಲಾವಣೆಗೆ ಕಾರಣವಾಗುತ್ತದೆ. ಬಡವರು ಮತ್ತು ಶೋಷಿತರ ಬಿಡುಗಡೆಗೆ ಇರುವ ಏಕೈಕ ಅಸ್ತ್ರ ಶಿಕ್ಷಣ. ಹಾಗಾಗಿ, ತಂದೆ–ತಾಯಂದಿರು ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಬೇಕು ಎಂದು ಶಾಸಕ ಅನಿಲ್ ಚಿಕ್ಕಮಾದು ಸಲಹೆ ನೀಡಿದರು.

ತಾಲೂಕಿನ ಹಾದನೂರು ಗ್ರಾಮದಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶಾಲಾ ವಾರ್ಷಿಕೋತ್ಸವ ಸಮಾರಂಭದಲ್ಲಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು ಸಮಾಜದಲ್ಲಿ ಆರ್ಥಿಕವಾಗಿ ಹಿಂದುಳಿದಿರುವ ಶೋಷಿತರು ಹಾಗೂ ಕೂಲಿ ಕಾರ್ಮಿಕರಿಗೆ ಶಿಕ್ಷಣವನ್ನು ನೀಡುವ ಮೂಲಕ ಸಾಮಾಜಿಕ ನ್ಯಾಯವನ್ನು ಅನುಷ್ಠಾನಗೊಳಿಸುವ ಕೆಲಸವಾಗಬೇಕು. ಸರ್ಕಾರಿ ಶಾಲೆಗಳ ಅಭಿವೃದ್ಧಿಯಿಂದಲೇ ಅದು ಸಾಧ್ಯವಾಗಬೇಕು. ಶಾಲಾ ಹಂತದಲ್ಲಿ ಮಕ್ಕಳಲ್ಲಿ ನ್ಯಾಯದ ಪ್ರಜ್ಞೆ ಬೆಳೆಯಬೇಕು ಎಂದು ತಿಳಿಸಿದರು.

ರೈತರು ಮತ್ತು ಕಾರ್ಮಿಕರು ಖಾಸಗಿ ಶಾಲೆಯ ವ್ಯಾಮೋಹಕ್ಕೆ ಬಲಿಯಾಗಿ ತಾವುಗಳು ಕಷ್ಟಪಟ್ಟು ದುಡಿದ ಹಣವನ್ನೆಲ್ಲ ಕಳೆದುಕೊಳ್ಳುತ್ತಿದ್ದಾರೆ. ಅದೇ ಹಣವನ್ನು ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಬಳಸಿ, ತಮ್ಮ ಮಕ್ಕಳ ಅಭಿವೃದ್ಧಿಗೆ ಶ್ರಮಿಸಬೇಕು ಎಂದರು.

ಗ್ರಾಪಂ ಉಪಾಧ್ಯಕ್ಷ ಪ್ರಕಾಶ್, ಮಾಜಿ ಜಿಪಂ ಸದಸ್ಯ ಪಿ.ರವಿ, ಮೈಮುಲ್ ಅಧ್ಯಕ್ಷ ಈರೇಗೌಡ, ಬಿಇಓ ಸಿ.ಎನ್.ರಾಜು, ಎಸ್‌ಡಿಎಂಸಿ ಅಧ್ಯಕ್ಷ ನಂಜಪ್ಪ ಮಾತನಾಡಿದರು.

ಶಾಲೆಯ ಮುಖ್ಯ ಶಿಕ್ಷಕಿ ಶಾಂತಮ್ಮ ಕಳೆದ ವರ್ಷದ ಶೈಕ್ಷಣಿಕ, ಕ್ರೀಡಾ ಮತ್ತು ಸಾಂಸ್ಕೃತಿಕ ಸಾಧನೆಗಳ ವರದಿ ನೀಡಿದರು.

ಮುಖ್ಯ ಶಿಕ್ಷಕಿ ಶಾಂತಮ್ಮ ಶಿಕ್ಷಕರಾದ ಎಸ್.ಸಿ.ರೇಖಾ, ನಾಗೇಶ್ ಮೂರ್ತಿ, ಇವರನ್ನು ಶಾಸಕರು ಸನ್ಮಾನಿಸಿದರು, ಸಹಶಿಕ್ಷಕರಾದ ಸಿದ್ದರಾಜು, ಕೃಷ್ಣಮೂರ್ತಿ, ಪ್ರಸನ್ನ ಕುಮಾರ್, ಹೇಮಾ, ಸಿದ್ದಯ್ಯ, ಇವರನ್ನು ಅಭಿನಂದಿಸಲಾಯಿತು. ವಿದ್ಯಾರ್ಥಿಗಳು ಹಾಗೂ ಪೋಷಕರು ಕ್ರೀಡೆಯಲ್ಲಿ ಭಾಗವಹಿಸಿದ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು,

ಮಹದೇವಮ್ಮ ನಿಧನ

ಸುತ್ತೂರು: ನಂಜನಗೂಡು ತಾಲೂಕು ಬೊಕ್ಕಳ್ಳಿ ಗ್ರಾಮದ ಮಹದೇವಮ್ಮ (90) ನಿಧನರಾದರು.



ದಿವಂಗತರು ನಾಲ್ವರು ಪುತ್ರರು, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯ ಸ್ವಗ್ರಾಮದಲ್ಲಿ ನೆರವೇರಿತು.

ನಂ.ಗೂಡಲ್ಲಿ 6.88 ಕೋಟಿ ರೂ. ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ

ನಂಜನಗೂಡು: 4 ಕೋಟಿ 85 ಲಕ್ಷ ವೆಚ್ಚದಲ್ಲಿ ಹುಲ್ಲಹಳ್ಳಿ–ನಂಜನಗೂಡು ಮುಖ್ಯರಸ್ತೆಯ ಮರು ಡಾಂಬರೀಕರಣ ಕಾಮಗಾರಿ ಹಾಗೂ ತಾಲೂಕಿನ ವಿವಿಧ ಗ್ರಾಮಗಳಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನ ಸೇರಿದಂತೆ ಒಟ್ಟು 6 ಕೋಟಿ 88 ಲಕ್ಷ ವೆಚ್ಚದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲಾಗಿದೆ ಎಂದು ಶಾಸಕ ದರ್ಶನ್ ಧ್ರುವನಾರಾಯಣ ತಿಳಿಸಿದರು.

ತಾಲೂಕಿನ ಹುಲ್ಲಹಳ್ಳಿ ಗ್ರಾಮದಲ್ಲಿ ವಿಧಾನಪರಿಷತ್ ಸದಸ್ಯ ಯತೀಂದ್ರ ಸಿದ್ದರಾಮಯ್ಯ ಜೊತೆಗೂಡಿ 4 ಕೋಟಿ 85 ಲಕ್ಷ ವೆಚ್ಚದಲ್ಲಿ ನಂಜನಗೂಡು–ಹುಲ್ಲಹಳ್ಳಿ ಮುಖ್ಯರಸ್ತೆಯ ಮರು ಡಾಂಬರೀಕರಣ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದರು.

ಕಾಂಗ್ರೆಸ್ ಸರ್ಕಾರ ಬಂದ ನಂತರ ಹುಲ್ಲಹಳ್ಳಿ ಗ್ರಾಮಕ್ಕೆ 20 ಕೋಟಿ ರೂ. ವೆಚ್ಚದಲ್ಲಿ ಹುರ ಮತ್ತು ಹುಲ್ಲಹಳ್ಳಿ ಮುಖ್ಯರಸ್ತೆಯನ್ನು ಅಭಿವೃದ್ಧಿ ಪಡಿಸಲಾಗಿದೆ, ಹುಲ್ಲಹಳ್ಳಿ ಗ್ರಾಮದಲ್ಲಿ 50 ಲಕ್ಷ ವೆಚ್ಚದಲ್ಲಿ ಸಿಸಿ ರಸ್ತೆ, ಟಿಎಸ್ಪಿ ಯೋಜನೆಯಡಿ 50 ಲಕ್ಷ, ಸಾಮಾನ್ಯ ಬೀದಿಯಲ್ಲಿ ರಸ್ತೆ ಅಭಿವೃದ್ಧಿಗೆ 25 ಲಕ್ಷ ಎಸಿಪಿ ಯೋಜನೆಯಲ್ಲೂ ಸಹ ಅತಿ ಹೆಚ್ಚು ಅನುದಾನವನ್ನು ನೀಡಿ ಗ್ರಾಮವನ್ನು ಅಭಿವೃದ್ಧಿಪಡಿಸಲಾಗಿದೆ. ಈಗ ನಂಜನಗೂಡು ಮತ್ತು ಹುಲ್ಲಹಳ್ಳಿಗೆ ಸಂಪರ್ಕ ಕಲ್ಪಿಸುವ ಮುಖ್ಯ ರಸ್ತೆಯು ಗುಂಡಿ ಬಿದ್ದು ಸಂಪೂರ್ಣವಾಗಿ ಹದಗೆಟ್ಟಿತ್ತು. ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಸಹ ವರುಣ ಭಾಗಕ್ಕೆ ಇದೇ ರಸ್ತೆಯ ಮಾರ್ಗವಾಗಿ ತೆರಳುತ್ತಿದ್ದ ಕಾರಣ, ರಸ್ತೆಯ ಅಭಿವೃದ್ಧಿಗೆ ಅನುದಾನ ನೀಡುವಂತೆ ಮನವಿ ನೀಡಿದ ತಕ್ಷಣ ಮುಖ್ಯಮಂತ್ರಿಗಳ ಗಮನಕ್ಕೆ ತಂದು 4 ಕೋಟಿ 85 ಲಕ್ಷ ಅನುದಾನವನ್ನು ಬಿಡುಗಡೆಗೊಳಿಸಲು ಸಹಕರಿಸಿದ್ದಾರೆ. ಜೊತೆಗೆ ಇಂದು ಅವರೇ ಗುದ್ದಲಿ ಪೂಜೆ ಕಾರ್ಯಕ್ರಮ ದಲ್ಲೂ ಭಾಗಿಯಾಗಿದ್ದಾರೆ, ದೇಬೂರು ಗ್ರಾಮದಿಂದ ಹುಲ್ಲಹಳ್ಳಿ ವರೆಗೆ 10 ಕಿಮೀ ಉದ್ದದ ರಾಜ್ಯ ಹೆದ್ದಾರಿಯ ಮರು ಡಾಂಬರೀಕರಣ ಕಾಮಗಾರಿ ಪೂರ್ಣಗೊಂಡು ಜನರಿಗೆ ಅನುಕೂಲವಾಗಲಿದೆ ಎಂದರು.



ಶಾಸಕ ದರ್ಶನ್ ದ್ರುವನಾರಾಯಣ್, ವಿಧಾನಪರಿಷತ್ ಸದಸ್ಯ ಯತೀಂದ್ರ ಸಿದ್ದರಾಮಯ್ಯ ಜೊತೆಗೂಡಿ ನಂಜನಗೂಡು–ಹುಲ್ಲಹಳ್ಳಿ ಮುಖ್ಯರಸ್ತೆಯ ಮರು ಡಾಂಬರೀಕರಣ ಕಾಮಗಾರಿಗೆ ಚಾಲನೆ ನೀಡಿದರು.

ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಮಾತನಾಡಿ ವಿಪಕ್ಷಗಳು ಗ್ಯಾರಂಟಿ ಯೋಜನೆಗಳಿಂದಾಗಿ ರಾಜ್ಯದಲ್ಲಿ ಅಭಿವೃದ್ಧಿ ಕುಂಠಿತವಾಗಿದೆ, ಆರ್ಥಿಕ ಸ್ಥಿತಿ ಕುಸಿದಿದೆ ಎಂದು ಆರೋಪಿಸುತ್ತಿವೆ ಆದರೆ ಕಾಂಗ್ರೆಸ್ ಸರ್ಕಾರ ಬಂದ ನಂತರ ಕೊಟ್ಟ ಮಾತಿನಂತೆ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿದೆ, ಗ್ಯಾರಂಟಿ ಯೋಜನೆಗಳಿಗಾಗಿಯೇ ವರ್ಷಕ್ಕೆ 60 ಸಾವಿರ ಕೋಟಿ ಖರ್ಚು ಮಾಡಲಾಗುತ್ತಿದೆ ಅಲ್ಲದೆ ಗ್ಯಾರಂಟಿ ಯೋಜನೆಗಳಿಂದ ಅಭಿವೃದ್ಧಿ ಕುಂಠಿತವಾಗಿಲ್ಲ, ಆರ್ಥಿಕ ಸ್ಥಿತಿ ಉತ್ತಮವಾಗಿದೆ ಎಂಬುದಕ್ಕೆ ನಂಜನಗೂಡು ಮತ್ತು ವರುಣಾ ಕ್ಷೇತ್ರ ಸೇರಿದಂತೆ ರಾಜ್ಯದ ವಿವಿಧ ಕ್ಷೇತ್ರಗಳಲ್ಲಿ ನಡೆಯುತ್ತಿರುವ ಅಭಿವೃದ್ಧಿ ಕಾಮಗಾರಿಗಳೇ ಉದಾಹರಣೆಯಾಗಿದ್ದು ವಿಪಕ್ಷಗಳ ಆರೋಪಕ್ಕೆ ಹುರಳಿಲ್ಲ ಎಂದರು.

ಈ ವೇಳೆ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಕುರಹಟ್ಟಿ ಮಹೇಶ್, ಸಿ.ಎಂ.ಶಂಕರ್, ಶ್ರೀಕಂಠನಾಯಕ, ಮೃಗಾಲಯ ಪ್ರಾಧಿಕಾರ ಅಧ್ಯಕ್ಷ ಹಾಡ್ಯ ರಂಗಸ್ವಾಮಿ, ವಾಲ್ಮೀಕಿ ಅಭಿವೃದ್ಧಿ ನಿಗಮ ಮಾಜಿ ಅಧ್ಯಕ್ಷ ಎಚ್.ಸಿ.ಬಸವರಾಜು, ಗ್ಯಾರಂಟಿ ಅನುಷ್ಠಾನ ಸಮಿತಿ ತಾಲೂಕು ಅಧ್ಯಕ್ಷ ಕೆಮಾರುತಿ, ಎಸ್‌ಸಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಉಪ್ಪಿನಹಳ್ಳಿ ಶಿವಣ್ಣ, ಅಕ್ರಮ ಸಕ್ರಮ ಸಮಿತಿ ಸದಸ್ಯ ಹಾಡ್ಯ ಜಯರಾಮ, ಜಯಮಾಲ, ಸಾಮಾಜಿಕ ಜಾಲತಾಣ ಅಧ್ಯಕ್ಷ ಶಿರಮಳ್ಳಿ ಮಹೇಶ್, ಮಹೇಂದ್ರ ಮುಖಂಡರಾದ ಅಲ್ಲೆ ಮಹದೇವು, ಸೂರ್ಯ ಕುಮಾರ್, ಹುಲ್ಲಹಳ್ಳಿ ಗ್ರಾಮ ಉಪಾಧ್ಯಕ್ಷ ಲೋಕೇಶ್, ಯುವ ಕಾಂಗ್ರೆಸ್ ಅಧ್ಯಕ್ಷ ವಿಜಯಕುಮಾರ್, ಮಹೇಶ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಮೈಸೂರು ಮಿತ್ರ

ಭಾನುವಾರ 1 ಮಾರ್ಚ್ 2026

ಎಂಡಿಎ 200 ಮೂಲೆ, ಮಧ್ಯಂತರ ನಿವೇಶನ ಇ-ಹರಾಜು

● ಮಾರ್ಚ್ 11ರಿಂದ ಆರಂಭ ● 186 ಕೋಟಿ ಆದಾಯ ನಿರೀಕ್ಷೆ ● ಹರಾಜಿನಲ್ಲಿ ಭಾಗಿಯಾಗಲು 36 ಗಂಟೆ ಅವಧಿ ನಿಗದಿ ● ಎಂಡಿಎ ಅಸ್ತಿತ್ವಕ್ಕೆ ಬಂದ ನಂತರ 2 ನೇ ಇ- ಹರಾಜು

ಮೈಸೂರು, ಫೆ.28(ಬಿಎಲ್‌ಯು)– ಮೈಸೂರು ನಗರದ ವಿವಿಧ ಬಡಾವಣೆಗಳಲ್ಲಿ 186 ಕೋಟಿ ಮೌಲ್ಯದ 200 ಮೂಲೆ ಹಾಗೂ ಮಧ್ಯಂತರ ನಿವೇಶನಗಳನ್ನು ಇ-ಹರಾಜು ಮೂಲಕ ಮಾರಾಟ ಮಾಡುವ ಪ್ರಕ್ರಿಯೆಯನ್ನು ಮೈಸೂರು ಅಭಿವೃದ್ಧಿ ಪ್ರಾಧಿಕಾರ (ಎಂಡಿಎ) ಆರಂಭಿಸಿದೆ.

ಮುಡಾ, ಎಂಡಿಎ ಆಗಿ ಪರಿವರ್ತನೆಗೊಂಡ ನಂತರ ಇದು ಎರಡನೇ ಇ-ಹರಾಜು ಆಗಲಿದೆ. ಈ ಮೂಲಕ ಮೂಲೆ ಹಾಗೂ ಮಧ್ಯಂತರ ನಿವೇಶನಗಳಲ್ಲಿ ಕಾಂಪ್ಲೆಕ್ಸ್ ಇತರೆ ಕಟ್ಟಡ ನಿರ್ಮಾಣ ಮಾಡುವವರ ಕನಸು ನನಸಾಗಲಿದೆ.



ಇ-ಹರಾಜು ಪ್ರಕ್ರಿಯೆಯು ಮಾರ್ಚ್ 11ರಂದು ಸಂಜೆ 6 ಗಂಟೆ ನಂತರ ಪ್ರಾರಂಭವಾಗಿ ಏಪ್ರಿಲ್ 7ರಂದು ಕೊನೆಗೊಳ್ಳಲಿದೆ. ಇ-ಹರಾಜಿನಲ್ಲಿ ಭಾಗವಹಿಸಲು ನೋಂದಣಿಗೆ ಮಾರ್ಚ್ 23ರ ಸಂಜೆ 5 ಗಂಟೆವರೆಗೆ ಸಮಯವಿರುತ್ತದೆ.

ಈ ಕುರಿತು 'ಮೈಸೂರು ಮಿತ್ರ'ನಿಗೆ ವಿವರ ನೀಡಿದ ಎಂಡಿಎ ಆಯುಕ್ತ ಕೆ.ಆರ್.ರಕ್ಷಿತ್, ಆಸಕ್ತಿ ಹೊಂದಿರುವ ಬಿಲ್ಡರ್‌ಗಳು ಇ-ಹರಾಜಿನಲ್ಲಿ ನೋಂದಾಯಿಸಿಕೊಳ್ಳಲು ಹಾಗೂ ಇಎಂಡಿ ಪಾವತಿ ಮಾಡಲು ಮಾರ್ಚ್ 23 ರವರೆಗೆ ಸಮಯಾವಕಾಶ ನೀಡಿದ್ದೇವೆ ಎಂದು ತಿಳಿಸಿದರು. ಅಲ್ಲದೆ ಪ್ರತಿ ಇ- ಹರಾಜಿನಲ್ಲಿ ಭಾಗವಹಿಸಲು ಬಿಡ್ಡರ್‌ಗಳಿಗೆ 36 ಗಂಟೆಗಳ ಅವಧಿಯನ್ನು ನಿಗದಿ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

ಎಂಡಿಎ ಆದ ನಂತರ ಮೊದಲ ಬಾರಿಗೆ ನಡೆದ ಇ- ಹರಾಜಿನಲ್ಲಿ 100 ನಿವೇಶನಗಳಿಂದ 113 ಕೋಟಿ ಲಾಭ ಗಳಿಸಿದ್ದೇವೆ. ಆ ವೇಳೆ 70 ನಿವೇಶನಗಳಿಗೆ ಸಲ್ಲಿಸಿದ್ದ ಒಂದೇ ಬಿಡ್ ತಿರಸ್ಕರಿಸಿದ್ದೇವೆ ಎಂದು ರಕ್ಷಿತ್ ತಿಳಿಸಿದರು.

ಇ-ಹರಾಜಿಗಿರುವ ನಿವೇಶನಗಳ ಮಾಹಿತಿ: ನಾಚನಹಳ್ಳಿ- ಕುಪ್ಪಲೂರು 3ನೇ ಹಂತ 'ಡಿ' ಬ್ಲಾಕ್, ಜೆ.ಪಿ.ನಗರ, 1ನೇ ಹಂತ 'ಎಫ್' ಬ್ಲಾಕ್, ದಟ್ಟಗಳ್ಳಿ 3ನೇ ಹಂತ, ವಿಜಯನಗರ 4ನೇ ಹಂತ, ಹೆಬ್ಬಾಳು 1 ಮತ್ತು 2ನೇ ಹಂತಗಳು, ವಿಜಯನಗರ 2ನೇ ಹಂತ, ದೇವನೂರು 2ನೇ ಹಂತ, ಶಾಂತವೇರಿ ಗೋಪಾಲಗೌಡ ನಗರ, ಲಾಲ್ ಬಹದ್ದೂರು ಶಾಸ್ತ್ರಿ ನಗರ, ಲಲಿತಾದ್ರಿಪುರ (ದಕ್ಷಿಣ), ಗಾಯತ್ರಿಪುರಂ 1ನೇ ಹಂತ, ಸಾತಗಳ್ಳಿ 2ನೇ ಹಂತ, ಹಂಚ್ಯಾ ಸಾತಗಳ್ಳಿ 'ಬಿ' ವಲಯ ಮತ್ತು ವಸಂತನಗರ ಬಡಾವಣೆಗಳಲ್ಲಿ ಮೂಲೆ ಹಾಗೂ ಮಧ್ಯಂತರ ನಿವೇಶನಗಳು ಇ-ಹರಾಜಿನಲ್ಲಿ ದೊರೆಯುತ್ತದೆ

ಇ-ಹರಾಜು ವೇಳಾ ಪಟ್ಟಿ

- ▶1 ರಿಂದ 50 ಸೈಟ್‌ಗಳ ಇ-ಹರಾಜಿಗೆ ನೇರ ಬಿಡ್ಡಿಂಗ್ ಮಾರ್ಚ್ 26ರ ಬೆಳಿಗ್ಗೆ 11 ರಿಂದ ಮಾರ್ಚ್ 27ರ ಸಂಜೆ 4ರವರೆಗೆ ನಡೆಯಲಿದೆ.
- ▶51 ರಿಂದ 100 ಸೈಟ್‌ಗಳ ಇ-ಹರಾಜಿಗೆ ನೇರ ಬಿಡ್ಡಿಂಗ್ ಮಾರ್ಚ್ 30ರ ಬೆಳಿಗ್ಗೆ 11 ರಿಂದ ಏಪ್ರಿಲ್ 1ರ ಸಂಜೆ 4 ಗಂಟೆವರೆಗೆ ನಡೆಯಲಿದೆ.
- ▶101 ರಿಂದ 150 ಸೈಟ್‌ಗಳ ಇ-ಹರಾಜಿಗೆ ನೇರ ಬಿಡ್ಡಿಂಗ್ ಏಪ್ರಿಲ್ 4ರ ಬೆಳಿಗ್ಗೆ 11 ರಿಂದ ಏಪ್ರಿಲ್ 1ರ ಸಂಜೆ 4 ಗಂಟೆವರೆಗೆ ನಡೆಯಲಿದೆ.
- ▶151 ರಿಂದ 200 ಸೈಟ್‌ಗಳ ಇ-ಹರಾಜಿಗೆ ನೇರ ಬಿಡ್ಡಿಂಗ್ ಏಪ್ರಿಲ್ 6ರ ಬೆಳಿಗ್ಗೆ 11 ರಿಂದ ಏಪ್ರಿಲ್ 7ರ ಸಂಜೆ 4ವರೆಗೆ ನಡೆಯಲಿದೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಭಾರತಿ ಟೀಚರ್ -1 ಪ್ರದರ್ಶನ (ಕ), ಫೋರ್ತ್ ಫ್ಲೋರ್-3 ಪ್ರದರ್ಶನ (ತಮಿಳು)	
ವುಡ್‌ಲ್ಯಾಂಡ್ಸ್	(ದೂ: 2422871)
ರೈಸ್ ಆಫ್ ಅಶೋಕ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಓ ರೋಮಿಯೋ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಹಯಗ್ರೀವ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಲ್ಯಾಂಡ್ ಲಾರ್ಡ್ (ಕ)	4 ಪ್ರದರ್ಶನಗಳು
ರಾಜಕಮಲ್	
ತಾಯಿ ಕಿಳವಿ (ತ)	4 ಪ್ರದರ್ಶನಗಳು
ಸಂಗಂ	
ಹಯಗ್ರೀವ (ಕ)	4 ಪ್ರದರ್ಶನಗಳು
ಲಿಡೋ	
ವೀರ ಕಂಬಳ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಸೂರಿ ಅಣ್ಣ (ಕ)	4 ಪ್ರದರ್ಶನಗಳು

ಲಾಲ್ ಬಹದ್ದೂರ್ ಶಾಸ್ತ್ರಿ ನಗರದಲ್ಲಿ ಬೀದಿ ನಾಯಿಗಳಿಗೆ ಜಿಂಕೆ ಬಲಿ



ಮೈಸೂರು, ಫೆ.28(ಎಂಟಿವೈ)– ಬೀದಿ ನಾಯಿ ದಾಳಿಗೆ ಜಿಂಕೆ ಬಲಿಯಾದ ಘಟನೆ ಮೈಸೂರಿನ ಲಾಲ್ ಬಹದ್ದೂರ್ ಶಾಸ್ತ್ರಿ ನಗರದಲ್ಲಿ ನಡೆದಿದೆ

ಶನಿವಾರ ಸಂಜೆ 4.30ರಲ್ಲಿ ಎಲ್ಲಿಂದಲೋ ತಪ್ಪಿಸಿಕೊಂಡು ಬಂದ 8-10 ವರ್ಷದ ಗಂಡು ಜಿಂಕೆ ಮೇಲೆ ಬೀದಿ ನಾಯಿಗಳು ದಾಳಿ ಮಾಡಿವೆ. ಇದನ್ನು ಗಮನಿಸಿದ ಸ್ಥಳೀಯರು ಜಿಂಕೆ ರಕ್ಷಣೆಗೆ ಪ್ರಯತ್ನಿಸಿದ್ದಾರೆ. ಆದರೆ, ಸೂಕ್ಷ್ಮ ಪ್ರಾಣಿಯಾಗಿರುವ ಜಿಂಕೆ ಅಘಾತಕ್ಕೊಳ್ಳಗಾಗಿದೆ. ಸ್ಥಳೀಯರು ಉಪಚರಿಸುವ ಪ್ರಯತ್ನ ಮಾಡಿದರೂ ಹೃದಯಾಘಾತಕ್ಕೆ ಒಳಗಾಗಿ ಸಾವನ್ನಪ್ಪಿದೆ. ವಿಷಯ ತಿಳಿದು ಸ್ಥಳಕ್ಕೆ ಬಂದ ಆರ್‌ಎಫ್‌ಓ ಸಂತೋಷ್ ಹೂಗಾರ್ ಹಾಗೂ ಸಿಬ್ಬಂದಿ, ಜಿಂಕೆ ಕಳೇಬರವನ್ನು ಕೊಂಡೊಯ್ದು ಪಶುವೈದ್ಯರಿಂದ ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ವರಕೋಡು ಮೀಸಲು ಅರಣ್ಯದಲ್ಲಿ ಸುಟ್ಟು ಹಾಕಿದ್ದಾರೆ.

ಅಂತರ ಕಾಲೇಜುಗಳ ವಿದ್ವತ್- 2ಕೆ26 ಬಿಜ್‌ಟೆಕ್ ಉತ್ಸವಕ್ಕೆ ತೆರೆ

ಹುಬ್ಬಳ್ಳಿಯ ಕೆಎಲ್‌ಇ ಕಾಲೇಜಿನ ವಿದ್ಯಾರ್ಥಿಗಳ ತಂಡಕ್ಕೆ ಸಮಗ್ರ ಪ್ರಶಸ್ತಿ



ರಾಜ್ಯಮಟ್ಟದ ಅಂತರ ಕಾಲೇಜುಗಳ ವಿದ್ವತ್-2ಕೆ26 ಎರಡು ದಿನಗಳ 'ಬಿಜ್‌ಟೆಕ್ ಉತ್ಸವ'ದಲ್ಲಿ ಮಾಜಿ ಮೇಯರ್ ಪಿ.ವಿಶ್ವನಾಥ್, ಕೋಶಾಧ್ಯಕ್ಷ ಶ್ರೀಶೈಲ ರಾಮಣ್ಣವರ್, ಪ್ರಥಮ ದರ್ಜೆ ಕಾಲೇಜು ನಿರ್ವಹಣಾ ಮಂಡಳಿ ಅಧ್ಯಕ್ಷ ಟಿ.ನಾಗರಾಜು, ಪ್ರಾಂಶುಪಾಲ ಡಾ.ಎಸ್.ಮರೀಗೌಡ ಸೇರಿದಂತೆ ಇತರರಿದ್ದರು.

ಮೈಸೂರು, ಫೆ.28(ಎಸ್‌ಪಿಎನ್)– ಮೈಸೂರಿನ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನಲ್ಲಿ ಏರ್ಪಡಿಸಿದ್ದ ರಾಜ್ಯಮಟ್ಟದ ಅಂತರ ಕಾಲೇಜುಗಳ ವಿದ್ವತ್-2ಕೆ26 ಎರಡು ದಿನಗಳ 'ಬಿಜ್‌ಟೆಕ್ ಉತ್ಸವ' ಶನಿವಾರ ಸಮಾರೋಪಗೊಂಡಿತು.

ಈ ವೇಳೇ ವಿದ್ಯಾವರ್ಧಕ ಸಂಘದ ಗೌರವ ಕಾರ್ಯದರ್ಶಿ, ಮಾಜಿ ಮೇಯರ್ ಪಿ.ವಿಶ್ವನಾಥ್ ಮಾತನಾಡಿ, ವಿದ್ಯಾರ್ಥಿಗಳಲ್ಲಿರುವ ಜ್ಞಾನ, ಸಂಶೋಧನೆ, ಸೃಜನಶೀಲತೆ ಹಾಗೂ ವಿದ್ಯಾರ್ಥಿಗಳ ಅಂತರ್ಗತವಾಗಿರುವ ಸುಪ್ತ ಪ್ರತಿಭೆಯನ್ನು ಹೊರತರುವಲ್ಲಿ ವಿದ್ವತ್-2ಕೆ26 ಯಶಸ್ವಿಯಾಗಿದೆ. ಇದರ ಹಿಂದೆ ಶಿಕ್ಷಕರ ಪಾತ್ರವೂ ಇದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ವಿದ್ಯಾರ್ಥಿಗಳು ಅತ್ಯುನ್ನತ ಗುರಿಗಳನ್ನು ತಮ್ಮ ಜೀವನದಲ್ಲಿ ಇಟ್ಟುಕೊಂಡು ಮುಂದೆ ಸಾಗಬೇಕಿದೆ. ವಿದ್ವತ್-2ಕೆ26 ನಿಮ್ಮೆಲ್ಲರ ಮನಸ್ಸಿನಲ್ಲಿ ಸದಾ ಬೆಳಗುತ್ತಿರಲಿ ಮತ್ತು ವಿದ್ಯಾರ್ಥಿಗಳು ರಾಷ್ಟ್ರದ ಉಜ್ವಲ ಭವಿಷ್ಯಕ್ಕೆ ದೀಪ ಸ್ತಂಭವಾಗಲಿ ಎಂದು ಆಶಿಸಿದ ಅವರು, ಇಂತಹ ಕಾರ್ಯಕ್ರಮದ ಸ್ಪರ್ಧೆಗಳು ಹೆಚ್ಚು ನಡೆದಷ್ಟು ವಿದ್ಯಾರ್ಥಿಗಳಲ್ಲಿ ಜ್ಞಾನ ಹಾಗೂ ಸಾಮರ್ಥ್ಯ ಹೆಚ್ಚುತ್ತದೆ ಎಂದರು.

ಈ ಕಾರ್ಯಕ್ರಮದಲ್ಲಿ ಒಟ್ಟಾರೆ 18 ವಿಭಾಗಗಳಲ್ಲಿ ನಡೆದ ಎಲ್ಲಾ ಸ್ಪರ್ಧೆಗಳಲ್ಲಿ ರಾಜ್ಯದ ವಿವಿಧ ಜಿಲ್ಲೆಗಳ ಒಟ್ಟು 67 ತಂಡಗಳು ಭಾಗವಹಿಸಿದ್ದವು. ಪ್ರಧಾನ ಸ್ಪರ್ಧೆಗಳಲ್ಲಿ 67 ತಂಡಗಳು, ಅನುಸಾಂಘಿಕ ಸ್ಪರ್ಧೆಗಳಲ್ಲಿ 103 ತಂಡಗಳು, ಕ್ರೀಡಾ ಸ್ಪರ್ಧೆಗಳಲ್ಲಿ 27 ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ 34 ತಂಡಗಳಿಂದ 700ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಈ ಸ್ಪರ್ಧೆಗಳಲ್ಲಿ ವಿಜೇತರಾದ ಎಲ್ಲಾ ವಿಭಾಗದ ಅಭ್ಯರ್ಥಿಗಳಿಗೆ ನಗದು ಬಹುಮಾನ ಹಾಗೂ ಟ್ರೋಫಿ ನೀಡಲಾಯಿತು. ಒಟ್ಟಾರೆ ಸಮಗ್ರ ಚಾಂಪಿಯನ್ ಶಿಪ್ ವಿಜೇತರಾದ ಹುಬ್ಬಳ್ಳಿಯ ಕೆ.ಎಲ್.ಇ ಕಾಲೇಜಿನ ವಿದ್ಯಾರ್ಥಿಗಳ ತಂಡಕ್ಕೆ ರೂ.15,000 ರೂ. ನಗದು ಹಾಗೂ ಟ್ರೋಫಿ ನೀಡಿ ಗೌರವಿಸಲಾಯಿತು.

ವೇದಿಕೆಯಲ್ಲಿ ವಿದ್ಯಾವರ್ಧಕ ಸಂಘದ ಕೋಶಾಧ್ಯಕ್ಷ ಶ್ರೀಶೈಲ ರಾಮಣ್ಣವರ್, ಪ್ರಥಮ ದರ್ಜೆ ಕಾಲೇಜು ನಿರ್ವಹಣಾ ಮಂಡಳಿ ಅಧ್ಯಕ್ಷ ಟಿ.ನಾಗರಾಜು, ಪ್ರಾಂಶುಪಾಲ ಡಾ.ಎಸ್.ಮರೀಗೌಡ, ವಿದ್ವತ್ 2ಕೆ26 ಕಾರ್ಯಕ್ರಮದ ಸಂಚಾಲಕಿ ಪ್ರೊ.ಎನ್.ಗೀತಾ, ಸಂಚಾಲಕರಾದ ಪ್ರೊ.ಬಿ.ಸ್ಮಿತ, ಪ್ರೊ.ಎಂ.ಎಸ್.ಮೇಘನಾ ಸೇರಿದಂತೆ ಬೋಧಕ, ಬೋಧಕೇತರರು ಹಾಗೂ ನಾನಾ ಕಾಲೇಜುಗಳ ವಿದ್ಯಾರ್ಥಿಗಳು ಹಾಜರಿದ್ದರು.

ಇಂದಿನಿಂದ ಶ್ರೀ ಕಾಳಿಕಾಂಬ ಜಾತ್ರೆ

ನಂಜನಗೂಡು, ಫೆ.28– ತಾಲೂಕಿನ ನಂದಿಗುಂದ ಗ್ರಾಮದಲ್ಲಿ ಭಾನುವಾರ (ಮಾ.1)ದಿಂದ ಮೂರು ದಿನ ಶ್ರೀ ಕಾಳಿಕಾಂಬ ಜಾತ್ರಾ ಮಹೋತ್ಸವ ಜರುಗಲಿದೆ.

ಭಾನುವಾರ ರಾತ್ರಿ 8ಕ್ಕೆ ಶ್ರೀ ಕಾಳಿಕಾದೇವಿಗೆ ಹೋಮ, ರುದ್ರಾಭಿಷೇಕ, ಉತ್ಸವ, ಕಪಿಲಾ ನದಿಯಿಂದ ಶ್ರೀ ಮುನಿಯಮ್ಮ ಮತ್ತು ಶ್ರೀ ಮಂಚಮ್ಮನ ಕೇಲು ತರುವುದು, ಸೋಮವಾರ ಮಡಿಯ ನಡಿಗೆ, ಕೇಲು ಉತ್ಸವ, ಬಾಯಿಬೀಗ ಸೇವೆ, ತಂಪುಪೂಜೆ ಹಾಗೂ ಮಂಗಳವಾರ ಸಂಜೆ 5.30ಕ್ಕೆ ಕೊಂಡೋತ್ಸವ ಜರುಗಲಿದೆ.

ಆತ್ಮೀಯ ಅಭಿನಂದನೆ



ಮೈಸೂರು ತಾಲೂಕು, ಜಯಪುರ ಹೋಬಳಿಯ ದೊಡ್ಡಹುಂಡಿ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಮುಖ್ಯಶಿಕ್ಷಿಯಾಗಿ ಸೇವೆ ಸಲ್ಲಿಸಿ, ನಿವೃತ್ತರಾದ ಸರಳಾದೇವಿಯವರನ್ನು ಶಾಲೆಯ ಸಹಶಿಕ್ಷಕರು, ಜಯಪುರ, ಡಿ.ಸಾಲುಂಡಿ, ಉದ್ಬೂರು ಕ್ಲಸ್ಟರ್ ವ್ಯಾಪ್ತಿಯ ಶಿಕ್ಷಕರು, ಎಸ್‌ಡಿಎಂಸಿ ಪದಾಧಿಕಾರಿಗಳು ಮತ್ತು ಹಳೆಯ ವಿದ್ಯಾರ್ಥಿಗಳು ಆತ್ಮೀಯವಾಗಿ ಅಭಿನಂದಿಸಿದರು.

ಇಂದು ಶ್ರೀ ವಿದ್ಯಾ ಗಣಪತಿ ದೇವಸ್ಥಾನದ ವಿಮಾನ ಗೋಪುರ ಉದ್ಘಾಟನೆ

ಮೈಸೂರು, ಫೆ.28–ಮೈಸೂರಿನ ವಿಜಯಶ್ರೀಪುರ ಬಡಾವಣೆಯ ಶ್ರೀ ವಿದ್ಯಾ ಗಣಪತಿ ದೇವಸ್ಥಾನಕ್ಕೆ ನೂತನವಾಗಿ ನಿರ್ಮಿಸಿರುವ ವಿಮಾನ ಗೋಪುರದ ಉದ್ಘಾಟನೆ ಹಾಗೂ ಕುಂಭಾಭಿಷೇಕ ಕಾರ್ಯಕ್ರಮ ಭಾನುವಾರ(ಮಾ.1) ಜರುಗಲಿದೆ.

ಬೆಳಗ್ಗೆ 6 ಗಂಟೆಯಿಂದಲೇ ವಿವಿಧ ಪೂಜಾ ಕೈಂಕರ್ಯಗಳು ಆರಂಭವಾಗಲಿದ್ದು, 10.30ಕ್ಕೆ ಗೋಪುರ ಶಿಖರದ ಕುಂಭಾಭಿಷೇಕ, 11.30ಕ್ಕೆ ಪೂರ್ಣಾಹುತಿ, 12ಕ್ಕೆ ಮಹಾ ಮಂಗಳಾರತಿ ನೆರವೇರಲಿದೆ. ಮೈಸೂರು-ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕರಾದ ಜಿ.ಟಿ.ದೇವೇಗೌಡರು, ಕೆ.ಹರೀಶ್‌ಗೌಡ, ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಮಾಜಿ ಸಂಸದ ಪ್ರತಾಪ್ ಸಿಂಹ, ಮಾಜಿ ಶಾಸಕ ಎಲ್.ನಾಗೇಂದ್ರ ಮತ್ತಿತರ ಗಣ್ಯರು ಭಾಗವಹಿಸಲಿದ್ದಾರೆ.

ಸ್ವಾಗತ



ಖಾಸಗಿ ಕಾರ್ಯಕ್ರಮದಲ್ಲಿ ಭಾಗವಹಿಸಲು ಶನಿವಾರ ಮೈಸೂರಿಗೆ ಆಗಮಿಸಿದ್ದ ಕೇಂದ್ರ ರೈಲ್ವೆ ಮತ್ತು ಜಲಶಕ್ತಿ ಇಲಾಖೆ ರಾಜ್ಯ ಸಚಿವ ವಿ.ಸೋಮಣ್ಣ ಅವರನ್ನು ಮೈಸೂರು ಹೊರವಲಯದಲ್ಲಿ ಶಾಸಕ ಟಿ.ಎಸ್.ಶ್ರೀವತ್ಸ, ಮಾಜಿ ಸಂಸದ ಪ್ರತಾಪಸಿಂಹ ಆತ್ಮೀಯವಾಗಿ ಸ್ವಾಗತಿಸಿದರು. ಈ ವೇಳೆ ಬಿಜೆಪಿ ಗ್ರಾಮಾಂತರ ಅಧ್ಯಕ್ಷ ಕುಂಬ್ರಳ್ಳಿ ಸುಬ್ಬಣ್ಣ, ಮುಖಂಡರಾದ ಖಂಡೇಶ್, ಪ್ರದೀಪ್ ಕುಮಾರ್ ಇತರರು ಉಪಸ್ಥಿತರಿದ್ದರು.

ಮೇಲ್ಛಾವಣಿ ಕುಸಿದ ಕನಕಗಿರಿ ಶಾಲೆಗೆ ಎಂಜಿಪಿ ಸದಸ್ಯರು ಭೇಟಿ; ಶಾಲಾ ಶಿಕ್ಷಣ ಇಲಾಖಾ ನಿರ್ಲಕ್ಷ್ಯತೆಗೆ ಆಕ್ರೋಶ



ಮೇಲ್ಛಾವಣಿ ಕುಸಿದ ಶಾರದಾವಿಲಾಸ ಸರ್ಕಾರಿ ಪ್ರಾಥಮಿಕ ಶಾಲೆಗೆ ಎಂಜಿಪಿ ಸದಸ್ಯರು ಭೇಟಿ ನೀಡಿ, ಪರಿಶೀಲಿಸಿದರು.

ಮೈಸೂರು,ಫೆ.28(ಎಸ್‌ಪಿಎನ್)– ಮೈಸೂರು ಜಿಲ್ಲೆಯಲ್ಲಿ ಸರ್ಕಾರಿ ಶಾಲಾ ಕಟ್ಟಡಗಳು ಶಿಥಿಲಗೊಂಡು ಅನಾಹುತ (ಜೀವಹಾನಿ)ಗಳು ಸಂಭವಿಸುತ್ತಿದ್ದರೂ ಜಿಪಂ ಇಂಜಿನಿಯರಿಂಗ್ ವಿಭಾಗ ಇಲ್ಲವೇ ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ಹಾಗೂ ಶಿಕ್ಷಣ ಇಲಾಖೆ ಹಿರಿಯ ಅಧಿಕಾರಿಗಳು, ಸರ್ಕಾರಿ ಶಾಲಾ ಕಟ್ಟಡ ಸುರಕ್ಷತೆ ಕುರಿತು ಯಾವುದೇ ಕ್ರಮ ವಹಿಸಿಲ್ಲ ಎಂದು ಮೈಸೂರು ಗ್ರಾಹಕ ಪರಿಷತ್ ಸದಸ್ಯರು, ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಮೇಲ್ಛಾವಣಿ ಕುಸಿದು ಸಹಶಿಕ್ಷಕಿಯೊಬ್ಬರಿಗೆ ಗಾಯಗಳಾಗಿದ್ದ ಹಿನ್ನಲೆಯಲ್ಲಿ ಮೈಸೂರು ಕನಕಗಿರಿ ಶಾರದಾ ವಿಲಾಸ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಭೇಟಿ ನೀಡಿ, ಬಳಿಕ ಮಾಧ್ಯಮಗಳಿಗೆ ಮಾಹಿತಿ ನೀಡಿದ ಎಂಜಿಪಿ ಸದಸ್ಯರು, ಈ ಶಾಲೆಯಲ್ಲಿ ಎರಡು ಕೊಠಡಿಗಳು ಶಿಥಿಲಗೊಂಡಿವೆ. ಇದರಲ್ಲೊಂದರ ಮೇಲ್ಛಾವಣಿಯ ಗಾರೆ ಚಕ್ಕೆ ಸಹಶಿಕ್ಷಕಿ ಸೌಮ್ಯ ಎಂಬುವವರಿಗೆ ತಲೆ ಮೇಲೆ ಬಿದ್ದು, ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಈ ಅನಾಹುತ ಕುರಿತು ಮಾಧ್ಯಮಗಳಲ್ಲಿ ಪ್ರಕಟವಾಗಿದ್ದರೂ ಅಧಿಕಾರಿಗಳು ಮಾತ್ರ ಸ್ಥಳಕ್ಕೆ ಭೇಟಿ ನೀಡಿಲ್ಲ. ಮೇಲ್ಛಾವಣಿ ಮೇಲೆ ಪುಂಡರು ಕುಡಿದು ಬಿಸಾಕಿರುವ ಬಿಯರ್ ಬಾಟಲ್ ಬಿದ್ದಿವೆ. ಶಾಲಾ ಆವರಣ ಅನೈರ್ಮಲ್ಯದಿಂದ ಕೂಡಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಶಾಲಾ ಆವರಣದಲ್ಲಿ ಮೂರು ಕೊಠಡಿಗಳು ಲಭ್ಯವಿದ್ದರೂ ಉದ್ಘಾಟನೆ ಭಾಗ್ಯ ಕಾಣದ ಹಿನ್ನಲೆಯಲ್ಲಿ ಅವುಗಳಲ್ಲಿ ಕುಳಿತು ಪಾಠ-ಪ್ರವಚನ ಕೇಳುವ ಸೌಭಾಗ್ಯ ಈ ಶಾಲಾ ವಿದ್ಯಾರ್ಥಿಗಳಿಗೆ ಇಲ್ಲವಾಗಿದೆ. ನಿನ್ನೆಯ ಘಟನೆಯಲ್ಲಿ ಮೂರನೇ ತರಗತಿಯ ವಿದ್ಯಾರ್ಥಿನಿ ಸಂಧ್ಯಾ(ಹೆಸರು ಬದಲಾಯಿಸಲಾಗಿದೆ) ಮತ್ತು ಇತರೆ ವಿದ್ಯಾರ್ಥಿನಿಯರಿಗೆ ಸಹಶಿಕ್ಷಕಿ ಸೌಮ್ಯ ಅವರು ಎಚ್ಚರವಹಿಸದಿದ್ದರೆ ದೊಡ್ಡ ಅನಾಹುತವಾಗುತ್ತಿತ್ತು. ಇನ್ನಾದರೂ ಶಾಲಾ ಶಿಕ್ಷಣ ಇಲಾಖೆ ಹಿರಿಯ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಕ್ಕಳ ಆಯೋಗ, ಜಿಪಂ ಇಂಜಿನಿಯರಿಂಗ್ ವಿಭಾಗದ ಅಧಿಕಾರಿಗಳು ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ, ಘಟನೆ ಪರಿಶೀಲಿಸಬೇಕು ಎಂದು ಒತ್ತಾಯಿಸಿದ್ದಾರೆ.

ಮಳೆಗಾಲಕ್ಕೂ ಮುನ್ನ ಮೈಸೂರು ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿ ಶಿಥಿಲಗೊಂಡಿರುವ ಎಲ್ಲಾ ಸರ್ಕಾರಿ ಶಾಲಾ ಕಟ್ಟಡಗಳ ಸುರಕ್ಷತೆ ಕುರಿತು ಜಿಪಂ ಇಂಜಿನಿಯರಿಂಗ್ ವಿಭಾಗ ಮತ್ತು ಶಾಲಾ ಶಿಕ್ಷಣ ಇಲಾಖೆ ಹಿರಿಯ ಅಧಿಕಾರಿಗಳು ಸಹಯೋಗದೊಂದಿಗೆ ತಪಾಸಣೆ ಮಾಡಬೇಕು. ಶಿಥಿಲಗೊಂಡಿರುವ ಕಟ್ಟಡಗಳ ಬಗ್ಗೆ ಮುನ್ನೆಚ್ಚರಿಕಾ ಕ್ರಮವಹಿಸಬೇಕು ಎಂದು ಒತ್ತಾಯಿಸಿದ್ದಾರೆ. ಈ ವೇಳೆ ಮೈಗ್ರಾಪ ಸಂಚಾಲಕ ಕೆ.ವಿ.ಭಾನುಪ್ರಶಾಂತ್, ಸದಸ್ಯರಾದ ನಿವೃತ್ತ ಮುಡಾ ಅಧಿಕಾರಿ ನಟರಾಜ್, ಹಿರಿಯ ವಕೀಲರಾದ ಡಾ.ಜಿ.ಬಿ.ಮೂರ್ತಿ, ವಿ.ಬಿ.ಪ್ರದೀಶ್ ಕುಮಾರ್ ಸೇರಿದಂತೆ ಇತರರಿದ್ದರು.



ಮೇಲ್ಛಾವಣಿಯಿಂದ ನೆಲಕ್ಕೆ ಬಿದ್ದು ಹರಡಿರುವ ಗಾರೆಚಕ್ಕೆ.

ಶ್ರೀಲಂಕಾ ವಿರುದ್ಧ ಗೆದ್ದೂ ಟೂರ್ನಿಯಿಂದ ಹೊರಬಿದ್ದ ಪಾಕಿಸ್ತಾನ

ಸೆಮಿಸ್‌ಗೆ ಕಿವೀಸ್ ಎಂಟ್ರಿ



ಶ್ರೀಲಂಕಾ, ಫೆ.28(ವಿವಿಹೆಚ್)– ನಾಯಕ ದಸುನ್ ಶನಕ ಹೋರಾಟದ ಫಲವಾಗಿಯೂ ಅತಿಥೇಯ ಶ್ರೀಲಂಕಾ ಪ್ರವಾಸಿ ಪಾಕಿಸ್ತಾನ ವಿರುದ್ಧ 5ರನ್‌ಗಳ ಅಂತರದಿಂದ ಸೋಲನ್ನನುಭವಿಸಿತು. ಇತ್ತ ಶ್ರೀಲಂಕಾ ವಿರುದ್ಧ ಗೆದ್ದರೂ ಏನು ಪ್ರಯೋಜನವಿಲ್ಲದೆ ಪಾಕಿಸ್ತಾನ ಟೂರ್ನಿಯಿಂದ ಹೊರನಡೆದರೆ, ರನ್‌ರೇಟ್ ಆಧಾರದ ಮೇಲೆ ನ್ಯೂಜಿಲೆಂಡ್ ಸೆಮಿ ಫೈನಲ್ಸ್‌ಗೆ ಎಂಟ್ರಿಕೊಟ್ಟಿದೆ.

ಇಲ್ಲಿನ ಪಲ್ಲೆಕೆಲೆ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಐಸಿಸಿ ಟಿ20 ವಿಶ್ವಕಪ್ 2026ರ ಸೂಪರ್ 8 ಸುತ್ತಿನ ಗ್ರೂಪ್-2ರ ಅಂತಿಮ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಪಾಕಿಸ್ತಾನ ಸಾಹಿಬ್ಜಾದಾ ಫರ್ಹಾನ್ 100(60ಎಸೆತ), ಫಖರ್ ಜಮಾನ್ 84(42ಎ) ಸಹಾಯದಿಂದ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 212 ರನ್ ಕಲೆಹಾಕಿ ಶ್ರೀಲಂಕಾಗೆ 213 ರನ್‌ಗಳ ಗುರಿಯನ್ನು ನೀಡಿತ್ತು.

ನಾಯಕ ದಸುನ್ ಶನಕ ಅಜೇಯ 76(31ಎ), ಪವನ್ ರಥ್ನಾಯಕೆ 58(37ಎ) ಹೋರಾಟ ಫಲವಾಗಿಯೂ ಈ ಬೃಹತ್ ಮೊತ್ತ ಬೆನ್ನತ್ತುವಲ್ಲಿ ವಿಫಲವಾದ ಶ್ರೀಲಂಕಾ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 207ರನ್ ಗಳಿಸಿ ಸೋಲೊಪ್ಪಿಕೊಂಡಿತು.

ಈ ಪಂದ್ಯದಲ್ಲಿ ಪಾಕಿಸ್ತಾನ ಇಷ್ಟು ಬೃಹತ್ ಮೊತ್ತ ಕಲೆಹಾಕಿದರೂ ಶ್ರೀಲಂಕಾವನ್ನು 147 ರನ್‌ಗೆ ಅಥವಾ ಅದಕ್ಕಿಂತ ಕಡಿಮೆ ರನ್‌ಗೆ ಕಟ್ಟಿಹಾಕಿದರೆ ಮಾತ್ರ ನ್ಯೂಜಿಲೆಂಡ್‌ಗಿಂತ ಹೆಚ್ಚಿನ ನೆಟ್ ರನ್‌ರೇಟ್ ಪಡೆದು ಸೆಮಿಫೈನಲ್ ಪ್ರವೇಶಿಸಬಹುದಾದ ಅವಕಾಶವಿತ್ತು. ಆದರೆ ಶ್ರೀಲಂಕಾ 15.5 ಓವರ್‌ಗಳಲ್ಲಿ 148 ರನ್ ಮುಟ್ಟಿದ್ದು, ಪಾಕ್ ಸೆಮಿಫೈನಲ್ ತಲುಪಲು ಇದ್ದ ಕೊನೆಯ ಅವಕಾಶವನ್ನು ಕೈಚೆಲ್ಲಿದೆ. ಈ ಮೂಲಕ ಪಾಕಿಸ್ತಾನ ಟೂರ್ನಿಯಿಂದ ಎಲಿಮಿನೇಟ್ ಆಗಿದ್ದು, ನ್ಯೂಜಿಲೆಂಡ್ ಸೆಮಿಫೈನಲ್ ಪ್ರವೇಶಿಸಿದೆ.

ನೇಮಕ



ಮೈಸೂರು,ಫೆ.28(ಪಿಎಂ)– ಬಿಜೆಪಿ ಮೈಸೂರು ಗ್ರಾಮಾಂತರ ಜಿಲ್ಲಾ ಎಸ್‌ಟಿ ಮೋರ್ಚಾ ಪ್ರಧಾನ ಕಾರ್ಯದರ್ಶಿಯಾಗಿ ಟಿ.ನರಸೀಪುರ ವಿಧಾನಸಭಾ ಕ್ಷೇತ್ರದ ಮಹೇಶ್ ನಾಯಕ ಅವರನ್ನು ನೇಮಕ ಮಾಡಿರುವುದಾಗಿ ಪಕ್ಷದ ಜಿಲ್ಲಾಧ್ಯಕ್ಷ ಕೆ.ಎನ್.ಸುಬ್ಬಣ್ಣ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಚೊಚ್ಚಲ ರಣಜಿ ಟ್ರೋಫಿ ಮುಡಿಗೇರಿಸಿಕೊಂಡ ಜಮ್ಮು-ಕಾಶ್ಮೀರ; ಕರ್ನಾಟಕ ರನ್ನರ್‌ಅಪ್



ಟ್ರೋಫಿಯೊಂದಿಗೆ ಸಂಭ್ರಮಿಸಿದ ಜಮ್ಮು ಕಾಶ್ಮೀರ ತಂಡದ ಆಟಗಾರರು.

ಹುಬ್ಬಳ್ಳಿ, ಫೆ.28(ವಿವಿಹೆಚ್)– 8 ಬಾರಿ ರಣಜಿ ಚಾಂಪಿಯನ್ ಕರ್ನಾಟಕವನ್ನು ಮಣಿಸಿದ ಜಮ್ಮು ಕಾಶ್ಮೀರ ಬರೋಬ್ಬರಿ 67 ವರ್ಷಗಳ ಇತಿಹಾಸದಲ್ಲಿ ಮೊದಲ ಬಾರಿಗೆ ರಣಜಿ ಟ್ರೋಫಿಯನ್ನು ಎತ್ತಿಹಿಡಿಯಿತು.

ಇಲ್ಲಿನ ಕೆಎಸ್‌ಸಿಎ ಕ್ರಿಕೆಟ್ ಮೈದಾನದಲ್ಲಿ ನಡೆದ ಜಮ್ಮು ಮತ್ತು ಕಾಶ್ಮೀರ ಮತ್ತು ಕರ್ನಾಟಕ ನಡುವಣ ಫೈನಲ್ಸ್ ಪಂದ್ಯದಲ್ಲಿ, ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ಜಮ್ಮು ಕಾಶ್ಮೀರ ತಂಡವು ತನ್ನ ಮೊದಲ ಇನ್ನಿಂಗ್ಸ್‌ನಲ್ಲಿ 173.1 ಓವರ್‌ಗಳಲ್ಲಿ 584 ರನ್‌ಗಳನ್ನು ಕಲೆಹಾಕಿತು. ಇದಕ್ಕೆ ಉತ್ತರವಾಗಿ, ಕರ್ನಾಟಕ ತಂಡವು ಮೊದಲ ಇನ್ನಿಂಗ್ಸ್‌ನಲ್ಲಿ 93.3 ಓವರ್‌ಗಳಲ್ಲಿ 293 ರನ್‌ಗಳಿಗೆ ಆಲೌಟ್ ಆಯಿತು.

ಇತ್ತ 291ರನ್‌ಗಳ ಮುನ್ನಡೆಯೊಂದಿಗೆ ಎರಡನೇ ಇನ್ನಿಂಗ್ಸ್ ಆರಂಭಿಸಿದ ಜಮ್ಮು ಮತ್ತು ಕಾಶ್ಮೀರಕ್ಕೆ 113 ಓವರ್‌ಗಳಲ್ಲಿ ಕೇವಲ 4 ವಿಕೆಟ್ ನಷ್ಟಕ್ಕೆ 342 ರನ್ ಗಳಿಸಿ 630 ರನ್‌ಗಳ ಮುನ್ನಡೆ ಕಾಯ್ದುಕೊಂಡಿತು.

ಐದನೇ ದಿನದಾಟವೂ ಜಮ್ಮು ಕಾಶ್ಮೀರ ಇನ್ನಿಂಗ್ಸ್ ಮುನ್ನಡೆ ಕಾಯ್ದುಕೊಂಡ ಪರಿಣಾಮ ಅಂತಿಮವಾಗಿ ಪಂದ್ಯವನ್ನು ಡ್ರಾನಲ್ಲಿ ಅಂತ್ಯಗೊಳಿಸಲಾಯಿತು.

ಕರ್ನಾಟಕ ವಿರುದ್ಧ ಪ್ರಾಬಲ್ಯ ಮೆರೆದು ಮೊದಲ ಇನ್ನಿಂಗ್ಸ್‌ನಲ್ಲಿ 291 ರನ್‌ಗಳ ಮುನ್ನಡೆ ಪಡೆದುಕೊಂಡಿದ್ದ ಜಮ್ಮು ಕಾಶ್ಮೀರ ತಂಡ ಚಾಂಪಿಯನ್ ಪಟ್ಟ ಅಲಂಕರಿಸಿತು. ಕರ್ನಾಟಕ ರನ್ನರ್‌ಅಪ್ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿತು.

ರಣಜಿ ಟ್ರೋಫಿ ಚಾಂಪಿಯನ್ ಆಗಿರುವ ಜಮ್ಮು ಕಾಶ್ಮೀರ ತಂಡಕ್ಕೆ ಬಿಸಿಸಿಐನಿಂದ 5 ಕೋಟಿ ರೂ. ಬಹುಮಾನ ಮೊತ್ತ ನೀಡಲಾಯಿತು. ಹಾಗೆಯೇ ರನ್ನರ್ ಅಪ್ ಆಗಿರುವ ಕರ್ನಾಟಕ ತಂಡಕ್ಕೆ 3 ಕೋಟಿ ರೂ ನೀಡಿತು.

ಇತ್ತ ಇದೇ ಮೊದಲ ಬಾರಿಗೆ ರಣಜಿ ಟ್ರೋಫಿ ಗೆದ್ದು ಇತಿಹಾಸ ನಿರ್ಮಿಸಿರುವ ಜಮ್ಮು ಕಾಶ್ಮೀರ ತಂಡಕ್ಕೆ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಬರೋಬ್ಬರಿ 2 ಕೋಟಿ ರೂ. ಬಹುಮಾನ ಘೋಷಿಸಿದ್ದಾರೆ.

Statement of Ownership and other particulars about newspaper

MYSORE MITRA
MYSORE

As required to be published under the Press & Registration of Books Act and Rules.

FORM - IV
(See Rule-8)

1. Place of publication: **Mysore**
2. Periodicity of Publication: **Daily**
3. Printer's name, address and citizenship: **T.S. Gopinath,** No. 15-C, Industrial 'A' Layout, Bannimantap, Mysore-570 015. Citizen of India.
4. Publisher's name, address & citizenship: **M. Govinde Gowda,** No. 15-C, Industrial 'A' Layout, Bannimantap, Mysore-570 015. Citizen of India.
5. Editor's name, address & citizenship: **M. Govinde Gowda,** No. 15-C, Industrial 'A' Layout, Bannimantap, Mysore- 570 015. Citizen of India.
6. Name and addresses of individuals who own the Newspaper and partners or Shareholders, holding more than one percent of the total capital: Owner: Academy Newspapers Pvt. Ltd., No. 15-C, Industrial 'A' Layout, Bannimantap, Mysore-570 015.

SHAREHOLDERS

1. **Mrs. K.K. Devamma,** "Fourth Estate," 375, 9th Cross, 8th Main, Lalithadri Road, K.C. Nagar, Mysore-570 011.
2. **Mr. K.G. Vikram Muthanna,** "Fourth Estate," 375, 9th Cross, 8th Main, Lalithadri Road, K.C. Nagar, Mysore-570 011.
3. **Mr. K.G. Mickey Bopanna,** "Fourth Estate," 375, 9th Cross, 8th Main, Lalithadri Road, K.C. Nagar, Mysore-570 011.

I, **M. Govinde Gowda,** Publisher, hereby declare that the particulars given above are true to the best of my knowledge and belief.

—**M. Govinde Gowda**
Date: 1-3-2026 Publisher